ಪುಸ್ತಕ ಪ್ರಪಂಚ

ಜನವರಿ-೧೯೯೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಹೊಸ ವರ್ಷದ ಶುಭಾಶಯಗಳು

"ಪುಸ್ತಕ ಪ್ರಪಂಚ" ತನ್ನ ಓದುಗರಿಗೆ ಹೊಸ ವರ್ಷದ ಶುಭಾಶಯಗಳನ್ನು ಕೋರಿದೆ.

—ಸಂ

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ ೪

ಜನವರಿ ೧೯೯೭

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ: ರೂ. ೬

ವಾರ್ಷಿಕ ಚಂದಾ: ರೂ. ೬೦

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. ೪೦೦

ಸಂಸ್ಥೆಗೆ: ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಹಳ್ಳಿಗಳಲ್ಲಿ ಸ್ವಾವಲಂಬನೆ-ಗಾಂಧೀಜಿಯವರ ವಿಚಾರ ಧಾರೆ

ಜಿ. ಎಲ್. ಎನ್. ಅಯ್ಯ
೯೬, "ಮನ್ ಬೂವರ್", ೯ನೇ ಮುಖ್ಯರಸ್ತೆ,
(ಈಜುಕೊಳದ ರಸ್ತೆಯ ದಕ್ಷಿಣಕ್ಕೆ)
ಸರಸ್ವತೀಪುರ, ಮೈಸೂರು-೫೭೦೦೦೯.

ಅತಿಶಯ ಸಂಪತ್ತಿನ ದುಂದುಬಳಕೆಯಿಂದ ವಿವೇಕ ಶೂನ್ಯವಾಗಿರುವ ಆಧುನಿಕ ತಂತ್ರವಿದ್ಯಾವಲಂಬಿ ಮಾನವನಿಗಿಲ್ಲಿದೆ: ಮನುಕುಲದ ಮನಸಾಕ್ಷಿಯ ಸಾಂತ್ವನ ಕತೆ.

ಭಾರತ ಗ್ರಾಮೀಣ ರಾಷ್ಟ್ರ. ಇಷ್ಟೆಲ್ಲಾ ಪಟ್ಟಣಗಳ ಬೆಳವಣಿಗೆಗಳು ಆದರೂ ನಮ್ಮ ದೇಶದ ಶೇಕಡಾ ೮೦ಕ್ಕೂ ಮೀರಿ ಜನ ವಾಸಿಸುತ್ತಿರುವುದು ಗ್ರಾಮಗಳಲ್ಲಿ. ಸ್ವಾತಂತ್ರ್ಯ ಸಂದ ಐದು ದಶಕಗಳಲ್ಲಿ ಭಾರತ ನಾನಾ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸುತ್ತಿದ್ದರೂ ಪಟ್ಟಣಿಗರ ಹಳ್ಳಿಗರ ಜೀವನಕ್ರಮ, ಸಾಮಾಜಿಕ, ಆರ್ಥಿಕ ಹಾಗೂ ಆಡಳಿತ ವ್ಯವಸ್ಥೆಗಳಲ್ಲಿ ಅಂತರವಿದೆ.

ಇಂದು ಕೂಡ ನಮ್ಮಲ್ಲಿ ಕೆಲವರು ಭಾರತದ ಹಳ್ಳಿಗಳನ್ನು ನೋಡುವುದಾದರೆ ಅವುಗಳ ದೃಶ್ಯ ನಮ್ಮನ್ನು ಖಂಡಿತ ಆಕರ್ಷಿಸದು. ಆ ಗೊಬ್ಬರದ ರಾಶಿಯನ್ನು ಕೆದಕಿ ಕೆಳಗಿಳಿಯಬೇಕಾದೀತು. ಈ ಹಳ್ಳಿಗಳು ಎಂದಾದರೂ ಸ್ವರ್ಗದಂಥ ಸ್ಥಳಗಳಾಗಿದ್ದವೆಂದು ಸೋಗುಹಾಕುವುದಿಲ್ಲ; ಆದರೂ ಹಿಂದೆ ಹಾಗಿರಲಿಲ್ಲ. ಅಲ್ಲಿ ಕಂಡು ಬರುವ ಕಾಂತಿ ಹೀನ ದೃಷ್ಟಿಯುಳ್ಳ, ದುಃಖ ಪೂರ್ಣ ಮಾನವ ಪ್ರತೀಕಗಳನ್ನು ನೀವು ನೋಡಿರಲಿಕ್ಕೆ ಬೇಕು: ಇವರು ನಮ್ಮ ನಿಜ ಭಾರತ. ಆ ಸಣ್ಣ ಪುಟ್ಟ ಗುಡಿಸಲುಗಳಲ್ಲಿ, ಗೊಬ್ಬರದ ರಾಶಿಯ ನಡುವೆ ವಿನಯಶೀಲ ವ್ಯಕ್ತಿಗಳು ಕಂಡು ಬರುತ್ತಾರೆ. ಅವರಲ್ಲಿ ಪರಮ ವಿವೇಕವನ್ನು ಕಾಣುತ್ತೀರಿ.

ಹಳೆಯ ಹಾದಿ ಇಂದು ನಿರರ್ಥಕ. ಜನತಾ ಬಂಡಾಯದ ವಿಷಯವನ್ನು ಈಗ ಯಾರೂ ಮಾಡರು. ಬುಡದಿಂದ ಕಟ್ಟುವುದೇ ಅತ್ಯಂತ ದಕ್ಷ, ಶೀಘ್ರ, ಅತ್ಯುತ್ತಮ ಮಾರ್ಗ. ಪಕ್ವ ಸಮಯ ಬಂದಿದೆ. "ಹಳ್ಳಿಗೆ ಹಿಂತಿರುಗಿ" ಎಂಬುದು ಎಲ್ಲ ದೃಷ್ಟಿಯಿಂದಲೂ ಅಗತ್ಯವಾಗಿ ಹೋಗಿದೆ. ಉತ್ಪಾದನೆಯನ್ನೂ, ವಿತರಣೆಯನ್ನೂ ವಿಕೇಂದ್ರೀಕರಿಸಲು ಇದೇ ಕಾಲ. ಪ್ರತಿ ಗ್ರಾಮವೂ, ಸ್ವಯಂ ಪೂರ್ಣ,

ಸ್ವಾವಲಂಬಿತ ಗಣರಾಜ್ಯವಾಗಬೇಕು. ಇದಕ್ಕೆ ಧೀರ ನಿರ್ಣಯಗಳು ಬೇಕಿಲ್ಲ. ದಿಟ್ಟ, ಸಾಂಘಿಕ, ಬುದ್ಧಿವಂತಿಕೆಯ ಕೆಲಸ ಬೇಕಾಗಿದೆ.

ಸಮಗ್ರ ಗ್ರಾಮಾಭಿವೃದ್ಧಿಯ ಮಾತು ಇಂದು ಪ್ರಚಲಿತ. ಆ ದಿಸೆಯಲ್ಲಿ ಕಾರ್ಯ ಯೋಜನೆಗಳು ರಾಷ್ಟ್ರದ ಮುಂದಿವೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ವಿಚಾರ ಧಾರೆ ತುಂಬಾ ಪ್ರಸ್ತುತ. ಗ್ರಾಮಗಳ ಸರ್ವತೋಮುಖ ಬೆಳವಣಿಗೆಗಾಗಿ ಗಾಂಧಿ ಒತ್ತಾಸೆ ನೀಡಿದರು. ಗ್ರಾಮಗಳ ಅಭಿವೃದ್ಧಿಯಿಂದ ಮಾತ್ರ ಭಾರತದ ಅಭಿವೃದ್ಧಿ ಸಾಧ್ಯ; ಗ್ರಾಮಗಳು ನಾಶವಾದರೆ ಭಾರತ ನಾಶವಾದಂತೆಯೇ ಎಂದು ಎಚ್ಚರಿಸುತ್ತಿದ್ದರು.

೧೯೪೫ರಲ್ಲಿ ಗಾಂಧೀಜಿ ನೆಹರುರವರಿಗೆ ಈ ರೀತಿ ಪತ್ರ ಬರೆದರು:

"ನನಗೀಗ ವಯಸ್ಸಾಗಿದೆ. ಆದುದರಿಂದಲೇ, ನಿಮ್ಮನ್ನು ನನ್ನ ಉತ್ತರಾಧಿಕಾರಿ ಎಂದು ಹೇಳಿದ್ದೇನೆ. ನಾನು ನನ್ನ ಉತ್ತರಾಧಿಕಾರಿಯನ್ನು ಅರ್ಥಮಾಡಿಕೊಳ್ಳಬೇಕು; ಆತ ನನ್ನನ್ನು ಅರ್ಥಮಾಡಿಕೊಳ್ಳಬೇಕು.

"ಭಾರತವು ನಿಜವಾದ ಸ್ವಾತಂತ್ರ್ಯವನ್ನು ಗಳಿಸಬೇಕಾದರೆ, ತನ್ಮೂಲಕ ಜಗತ್ತು ಸ್ವಾತಂತ್ರ್ಯವನ್ನು ಪಡೆಯಬೇಕಾದರೆ, ಜನರು ಹಳ್ಳಿಗಳಲ್ಲಿ ಜೀವಿಸಬೇಕೇ ಹೊರತು ನಗರಗಳಲ್ಲಲ್ಲ. ಹಳ್ಳಿಗರು ತಮ್ಮ ನಿಜವಾದ ಆವಶ್ಯಕತೆಗಳೇನೆಂಬುದನ್ನು ಅರಿತು. ಅವುಗಳ ಪೂರೈಕೆಯಲ್ಲಿ ಸ್ವಾವಲಂಬಿಯಾಗಿರಬೇಕು, ಸಂತೃಪ್ತರಾಗಿರಬೇಕು:

ಜವಾಹರಲಾಲರು ಗಾಂಧೀಜಿಗೆ ಹೀಗೆ ಉತ್ತರ ಬರೆದರು:–"ನಿಜವಾದ ಸಹಕಾರ, ಶಾಂತಿಯುತ ವಿಚಾರಗಳನ್ನು ಪ್ರೋತ್ಸಾಹಿಸುವ ರಚನೆಯೇ ನಮ್ಮ ಗುರಿ. ದೇಶಕ್ಕೆ ಆವಶ್ಯಕವಾದ, ಹಾಗೂ ಪ್ರತಿಯೊಬ್ಬರಿಗೂ ಪೂರೈಸಬೇಕಾದ ಕನಿಷ್ಠ ಅಗತ್ಯಗಳನ್ನು ಗಮನಿಸಿ, ಅನ್ನ, ವಸ್ತ್ರ, ವಸತಿ, ವಿದ್ಯೆ, ನೈರ್ಮಲ್ಯ, ಆರೋಗ್ಯ, ಇವುಗಳ ವಿಷಯದಲ್ಲಿ ಸ್ವಾವಲಂಬನೆಯನ್ನು ಸಾಧಿಸುವಂತಹ ನಿರ್ದಿಷ್ಟ ಧ್ಯೇಯಗಳನ್ನು ನಾವು ಇಟ್ಟುಕೊಳ್ಳಬೇಕು. ಹೊಸತರ ಸಾರಿಗೆ, ಸಾಧನಗಳು, ಮತ್ತಿತರ ಆಧುನಿಕ ಬೆಳವಣಿಗೆಗಳೂ ಮುಂದುವರೆಯುವುದು ಅನಿವಾರ್ಯ ಮತ್ತು ಅವುಗಳನ್ನು ಅಭಿವೃದ್ಧಿ ಪಡಿಸಬೇಕು ಎಂದು ನನಗನಿಸುತ್ತದೆ" ಇದಕ್ಕೆ ಉತ್ತರಿಸಿದ ಗಾಂಧೀಜಿ: "ಮನುಷ್ಯನು ಒಂಟಿಯಾಗಿಯೇ ಜೀವಿಸಲು ಜನ್ಮ ತಾಳಿಲ್ಲ, ಅವನು ಪ್ರಧಾನವಾಗಿ ಸಮಾಜ ಜೀವಿ. ಅವನು ಸ್ವತಂತ್ರನೂ ಹೌದು, ಪರತಂತ್ರನೂ ಹೌದು. ಯಾರೊಬ್ಬರೂ ಇನ್ನೊಬ್ಬರ ಮೇಲೆ ಸವಾರಿ ಮಾಡುವಂತಿರಬಾರದು. ಅಂತಹ ಜೀವನಕ್ಕಾಗಿ ಪರಿಸ್ಥಿತಿ ಉಂಟುಮಾಡಬೇಕಾಗಿದೆ. ಈ ಪ್ರಯತ್ನದಲ್ಲಿ ಸಮಾಜದ ಘಟಕ ಗ್ರಾಮವಾಗಿರಬೇಕು. ಗ್ರಾಮೀಣ ಜನರು ಅತ್ಯವಶ್ಯ ವಸ್ತುಗಳ ಬಗ್ಗೆ ಸ್ವಾವಲಂಬನೆಯಿಂದ ಕೂಡಿದ ಘಟಕದಲ್ಲಿದ್ದು ಪರಸ್ಪರ ಸಹಕಾರ ಹಾಗೂ ಪರಸ್ಪರ ಅವಲಂಬನೆಯ ಸೂತ್ರದಿಂದ ಬಿಗಿಯಲ್ಪಟ್ಟಿರಬೇಕು."

ಇನ್ನೊಂದು ಸಂದರ್ಭದಲ್ಲಿ ಗಾಂಧೀಜಿಯವರು ಹೇಳುತ್ತಾರೆ "ನನ್ನ ಕಲ್ಪನೆಯ

ಗ್ರಾಮ ಸ್ವರಾಜ್ಯವೆಂದರೆ ಅದೊಂದು ಪರಿಪೂರ್ಣ ಪ್ರಜಾರಾಜ್ಯ. ತನ್ನ ಪ್ರಧಾನ ಆವಶ್ಯಕತೆಗಳಲ್ಲಿ ನೆರೆಹೊರೆಯವರನ್ನು ಅವಲಂಬಿಸಬಾರದು. ಆದರೂ ಅವಲಂಬನ ಅಗತ್ಯವಾದ ಎಷ್ಟೋ ವಿಷಯಗಳಲ್ಲಿ ಪರಸ್ಪರಾವಲಂಬಿ. ತನ್ನ ಆಹಾರದ ಬೆಳೆ ಬೆಳೆಯುವುದು, ಬಟ್ಟೆಗಾಗಿ ಹತ್ತಿ ಬೆಳೆಯುವುದು ಪ್ರತಿ ಹಳ್ಳಿಯ ಪ್ರಥಮ ಲಕ್ಷ್ಯ. ದನಕರುಗಳಿಗಾಗಿ ಹುಲ್ಲುಗಾವಲು, ಮಕ್ಕಳಿಗಾಗಿಯೂ ಪ್ರೌಢರಿಗಾಗಿಯೂ ಆಟಕ್ಕೆ, ಮನೋರಂಜನೆಗೆ ಸ್ಥಳವಿರಬೇಕು. ಇವಕ್ಕೆಲ್ಲಾ ಆಗಿ ಹೆಚ್ಚು ಭೂಮಿ ಮಿಕ್ಕರೆ, ಅದರಲ್ಲಿ ಗಾಂಜಾ, ತಂಬಾಕು, ಅಫೀಮು ಗಳನ್ನು ಬೆಳೆಯುವುದನ್ನು ಬಿಟ್ಟು ಇತರ ಉಪಯೋಗಕರ, ಹಣದ ಬೆಳೆಗಳನ್ನು ಬೆಳೆಯಬಹುದು. ಹಳ್ಳಿಹಳ್ಳಿಯಲ್ಲೂ ಶುದ್ಧ ನೀರಿನ ಪೂರೈಕೆ ಕೇಂದ್ರ ಇದ್ದೀತು. ಹತೋಟಿಗೆ ಒಳಪಟ್ಟ ಬಾವಿಗಳು, ಕೆರೆಗಳು, ಇವುಗಳ ಮೂಲಕ ಕೆಲಸ ಮಾಡಬಹುದು. ಸಾಧ್ಯವಿದ್ದಷ್ಟು ಮಟ್ಟಿಗೂ ಸಹಕಾರದ ತತ್ವದ ಮೇಲೆಯೇ ಈ ಕೆಲಸಗಳನ್ನು ಕೈಗೊಳ್ಳಲಾದೀತು.

ವಾಸ್ತವಿಕವಾಗಿ, ಮೇಲಿನ ತತ್ವ ಜಾರಿಯಲ್ಲಿರುವುದನ್ನು ಕಂಡು ನಾನು ವಿಸ್ಮಯನಾಗಿದ್ದೇನೆ. ಭಾರತದ ಪೂರ್ವಭಾಗದಲ್ಲಿರುವ ರಾಜ್ಯಗಳ ಹಲವಾರು ಗ್ರಾಮಗಳಲ್ಲಿ (ನಾಗಾಲ್ಯಾಂಡ್ ಮತ್ತು ಅರುಣಾಚಲ ಪ್ರದೇಶ) ಈ ಪದ್ಧತಿ ಇಂದೂ ಜಾರಿಯಲ್ಲಿದೆ. ಗ್ರಾಮದ ಸಕಲ ಆಹಾರದ ಉತ್ಪನ್ನವು ಒಂದು ನಿರ್ದಿಷ್ಟ ಜಾಗದಲ್ಲಿ ಶೇಖರಿಸಲ್ಪಟ್ಟಿದ್ದು, ಗ್ರಾಮಸ್ಥರು ತಮಗೆಷ್ಟು ದವಸಧಾನ್ಯಗಳು ಆವಶ್ಯಕವೋ ಅಷ್ಟನ್ನು ಮಾತ್ರ ಕೊಂಡೊಯ್ಯುತ್ತಾರೆ. ಈ ವಾಡಿಕೆಯಲ್ಲಿ ಯಾರ ಮೇಲುಸ್ತುವಾರಿಯೂ ಕಾಣಬರಲಿಲ್ಲ.

ಗಾಂಧೀಜಿಯವರು ಹೇಳುತ್ತಾರೆ: "ಭಾರತೀಯನ ಎಲುಬಿನ ಹಂದರದ ಚಿತ್ರವನ್ನು ಕಲ್ಪಿಸಿಕೊಳ್ಳುವುದಾದರೆ, ತಮ್ಮ ಹೊಲಗಳಲ್ಲಿ ದುಡಿವ, ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳಂತೂ ಯಾವ ಉದ್ಯೋಗವೂ ಇಲ್ಲದ, ನಿತ್ಯೋಪವಾಸದ ಅಂಚಿನಲ್ಲಿ ಜೀವಿಸುತ್ತಾ ಇರುವ ಶೇಕಡಾ ಎಂಬತ್ತು ಭಾಗದ ಜನರನ್ನು ಕುರಿತು ಚಿಂತಿಸಬೇಕು. ಆಗಾಗ ಎರಗುವ ಬರಗಳಂತೂ ಈ ನಿರ್ಬಂದದ ಆಲಸ್ಯವನ್ನು ಹೇರಳವಾಗಿ ಹೆಚ್ಚಿಸುತ್ತವೆ," ಗಾಂಧೀಜಿಯವರ ದೃಷ್ಟಿಯಲ್ಲಿ ಈ ದುಸ್ಥಿತಿಯನ್ನು ಸುಧಾರಿಸಬಲ್ಲ ಏಕೈಕ ಮಂತ್ರವೆಂದರೆ ನೂಲುವ ಕ್ರಿಯೆ.

ಗಾಂಧೀಜಿಯವರ ಅಭಿಪ್ರಾಯದಲ್ಲಿ ಹಳ್ಳಿಗರು ತಮ್ಮ ಮನೆಗಳನ್ನು ಪುನಃ ನಿರ್ಮಿಸುವರಾದರೆ, ತಮ್ಮ ಪೂರ್ವಜರಂತೆ ಬದುಕತೊಡಗಿದರೆ, ತಮ್ಮ ಬಿಡುವಿನ ವೇಳೆಯನ್ನು ಸದುಪಯೋಗಗೊಳಿಸಲು ಪ್ರಾರಂಭಿಸುವರಾದರೆ, ಇತರ ಎಲ್ಲಾ ಉದ್ಯೋಗಗಳು ತಾವಾಗಿಯೇ ಹುಟ್ಟಿ ಬಂದಾವು. ರಾಟೆ ತತ್ಸಂಬಂಧವಾದ ನೇಯ್ಗೆ, ಹತ್ತಿ ಬೆಳೆಯುವುದು, ಆಯುವುದು, ಕಾಳು ಬಿಡಿಸುವುದು, ಕಸ ತೆಗೆಯುವುದು, ಹಿಂಜುವುದು, ಹಂಜೀಮಾಡುವುದು, ನೂಲುವುದು, ಬಣ್ಣ ಹಾಕುವುದು, ಹಾಸುವುದು, ಅಣಿಮಾಡುವುದು, ನೇಯುವುದು, ಗಂಜಿ ಮಾಡುವುದು—ಈ ಎಲ್ಲಾ ಹಿಂದಿನ ಮುಂದಿನ ಕೆಲಸಗಳನ್ನು ಒಳಗೊಂಡಿದೆ. ಈ ಕೆಲಸಗಳು ಹಳ್ಳಿಯ ಬಡಗಿ, ಕಮ್ಮಾರ

ನಿಗೆ ಕೆಲಸ ಕೊಡಬಲ್ಲವು. ಹೀಗೆ, ಗ್ರಾಮೋದ್ಯೋಗಗಳನ್ನು ಪುನರುಜ್ಜೀವನಗೊಳಿಸಿದರೆ ಸರಳತೆ, ಕೌಟುಂಬಿಕತೆಗಳ ಆದರ್ಶಗಳನ್ನು ಜನತೆಯು ಹೃದಯಾವಿಷ್ಟಗೊಳಿಸಿ, ಗ್ರಾಮೀಣ ಜೀವನವನ್ನು ಪುನಃನಿರ್ಮಾಣ ಮಾಡಿ, ಸ್ವಾವಲಂಬನೆಯ ವಿಧಾನವನ್ನು ಕಂಡುಕೊಳ್ಳುವರೆಂದು ಗಾಂಧೀಜಿಯ ದೃಢ ನಂಬಿಕೆಯಾಗಿತ್ತು.

ನಿಮ್ಮ ಕಲ್ಪನೆಯ ಸ್ವತಂತ್ರ ಭಾರತದ ವಿಸ್ತಾರವಾದ, ಸ್ಥೂಲವಾದ ಚಿತ್ರವನ್ನು ದಯವಮಾಡಿ ಕೊಡುವಿರಾ ಎಂಬ ಪ್ರಶ್ನೆಗೆ ಉತ್ತರವಾಗಿ ಗಾಂಧೀಜಿ ಈ ರೀತಿ ತಿಳಿಸಿದರು. ಭಾರತದ ಸ್ವಾತಂತ್ರ್ಯ ಕೆಳಗಿಂದ ಮೂಡಿ ಬರಬೇಕು. ಪ್ರತಿಯೊಂದು ಗ್ರಾಮವೂ ಒಂದು ಗಣರಾಜ್ಯ ಅಥವಾ ಪೂರ್ಣ ಅಧಿಕಾರ ಸಂಪನ್ನ ಪಂಚಾಯಿತಿ. ಅಂದ ಮೇಲೆ, ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಿರಬೇಕು ; ತನ್ನ ಆಡಳಿತವನ್ನು ತಾನೇ ನಿರ್ವಹಿಸಿಕೊಳ್ಳುವಂತಿರಬೇಕು. ಹೊರಗಡೆಯಿಂದ ಬರುವ ಯಾವುದೆ ಧಾಳಿಯನ್ನು ಎದುರಿಸಿ ಆತ್ಮರಕ್ಷಣೆ ಮಾಡಿಕೊಳ್ಳುವ ಪ್ರಯತ್ನದಲ್ಲಿ ನಾಶಹೊಂದಲು ಸಿದ್ಧವಿರಬೇಕು—ಅಂಥ ಶಿಕ್ಷಣ ಪಡೆದಿರಬೇಕು.

"ಪ್ರಾಮಾಣಿಕತೆಯನ್ನೂ, ಉದ್ಯಮಶೀಲತೆಯನ್ನೂ, ಸ್ವಾಭಿಮಾನವನ್ನೂ ಪುನಃ ಹುಟ್ಟಿಸುವುದು ಪಂಚಾಯಿತಿಗಳ ಕೆಲಸ. ಒಂದು ವರ್ಷವಾದನಂತರ ತಾವು ಒಳ್ಳೆ ಸ್ವಚ್ಛವಾದ, ತಮ್ಮ ಕೆಲಸದ ಪರಿಚಯ ಮಾಡಿಕೊಡಬಹುದೆ ? ತಮ್ಮ ಪಂಚಾಯಿತಿಯಲ್ಲದೆ ಮತ್ತಾವ ಕೋರ್ಟೂ ಇಲ್ಲ ಎಂದು ತೋರಿಸಬಹುದೆ? ವ್ಯಾಜ್ಯವಿಲ್ಲದೆ ಇರುವಂತೆ ಹಳ್ಳಿಗರಿಗೆ ಕಲಿಸುವುದು ಪಂಚಾಯಿತಿಯ ಕೆಲಸ, ವ್ಯಾಜ್ಯ ಉದ್ಭವಿಸಿದರೆ ಪಂಚಾಯಿತಿಯೇ ಬಗೆಹರಿಸಬೇಕು."

ಸಮಗ್ರ ಗ್ರಾಮಾಭ್ಯುದಯದ ಮೂಲಕವೇ ಹಳ್ಳಿಗಳ ಸ್ವಾವಲಂಬನೆ ಸಾಧ್ಯ ಎಂಬುದು ಗಾಂಧೀಜಿಯವರ ಅಚಲ ನಂಬಿಕೆ. ಇದರ ಬಗ್ಗೆ ವಿಚಾರ ಮಾಡುತ್ತಾ, ಹಳ್ಳಿಗರು ತಯಾರಿಸಿದ ವಸ್ತುಗಳಿಗೆ ಹೊರಗಡೆ ಸಿದ್ಧವಾಗಿ ದೊರೆಯುವಂಥಾ ರೀತಿಯಲ್ಲಿ ಉನ್ನತಮಟ್ಟದ ಕೌಶಲಗಳನ್ನು ಅವರು ಬೆಳೆಸಿಕೊಳ್ಳಬೇಕು ಎಂಬುದು ಗಾಂಧೀಜಿಯವರ ಅಭಿಪ್ರಾಯ. ನಮ್ಮ ಹಳ್ಳಿಗಳು ಪೂರಾ ಅಭಿವೃದ್ಧಿಗೊಂಡರೆ, ಅಲ್ಲಿ ಉನ್ನತ ಮಟ್ಟದ ಕೌಶಲ ಹಾಗೂ ಕಲಾಪ್ರತಿಭೆಗೆ ಅಭಾವವಿರದು. ಗ್ರಾಮ ಕವಿಗಳೂ, ಗ್ರಾಮ ಕಲಾವಿದರೂ, ಗ್ರಾಮ ಶಿಲ್ಪಿಗಳೂ, ಭಾಷಾವಿಶಾರದರೂ ಮತ್ತು ಸಂಶೋಧಕರು ಅಲ್ಲಿದ್ದಾರು. ಒಟ್ಟಿನಲ್ಲಿ, ಜೀವನದಲ್ಲಿರಬೇಕಾದಂಥ ಯಾವುದಕ್ಕೂ ಹಳ್ಳಿಗಳಲ್ಲಿ ಕೊರತೆ ಕಾಣಬರಲಾರದು. ನಾಳೆ ಯಾರೂ ವಂಚಿಸಲಾಗದ, ಶೋಷಿಸಲಾಗದ, ಉನ್ನತಮಟ್ಟದ, ಬುದ್ಧಿವಂತರಿರುವ, ಸಣ್ಣ ಸುಂದರ ಉದ್ಯಾನಗಳಾದಾವು.

ಈ ಮಾದರಿಯ ಗ್ರಾಮ ಪುನನಿರ್ಮಾಣ ಕೆಲಸ ತಾತ್ಕಾಲಿಕ ರೀತಿಯಲ್ಲಲ್ಲ, ಶಾಶ್ವತ ಆಧಾರದ ಮೇಲೆ ನಡೆಯಬೇಕು. ಆಗ ನಮ್ಮ ಹಳ್ಳಿಗಳು ನಿಜಕ್ಕೂ ಸ್ವಾವಲಂಬನೆ ಸಾಧಿಸಿಯಾವು. ಗಾಂಧೀಜಿಯವರ ಕನಸನ್ನು ನನಸಾಗಿ ಮಾಡಿಯಾವು.

ಸಮಗ್ರ ಗ್ರಾಮಾಭಿವೃದ್ಧಿಯ ಯೋಜನೆಯಲ್ಲಿ ಹಳ್ಳಿಗಳ ಜನಬಲದ

ವ್ಯಾಪಕ ಉಪಯೋಗಕ್ಕೆ ಮುಖ್ಯವಾದ ಗಮನವಿರುತ್ತದೆ. ಸಣ್ಣ ನೀರಾವರಿ ಜಲಾಶಯಗಳ, ಹಾಗೂ ಕಾಲುವೆಗಳ ನಿರ್ಮಾಣ, ಅಂತರ್ಜಲ ಮೂಲಗಳ ಬಳಕೆ, ಒಡ್ಡುಗಳ ನಿರ್ಮಾಣ, ರಸ್ತೆಗಳ ಬೆಳವಣಿಗೆ, ಅರಣ್ಯ ಅಭಿವೃದ್ಧಿ, ಗೃಹ ಹಾಗೂ ಸಣ್ಣ ಕೈಗಾರಿಕೆಗಳ ಬೆಳವಣಿಗೆ—ಇವುಗಳು ಉದ್ಯೋಗಗಳನ್ನು ಸೃಷ್ಟಿಸುತ್ತವೆ. ವಿವೇಚನೆಯಿಂದ ರೂಪಿಸಿ, ದಕ್ಷತೆಯಿಂದ ಯೋಜನೆಗಳನ್ನು ಕಾರ್ಯಗತ ಮಾಡಿದರೆ ವ್ಯಾಪಕವಾಗಿ ಉದ್ಯೋಗಗಳನ್ನು ಒದಗಿಸಲು ಸಾಧ್ಯ. ಈ ಪ್ರಯತ್ನದಲ್ಲಿ ಸಹಕಾರ ಸಂಘಗಳ ಪಾತ್ರ ಹಿರಿದು. ಗ್ರಾಮ ಪಂಚಾಯಿತಿಗಳ ಪ್ರಾಮಾಣಿಕ ಮಾರ್ಗದರ್ಶನ ಪ್ರಧಾನವಾದುದು.

ಸಮಗ್ರ ಗ್ರಾಮಾಭಿವೃದ್ಧಿಯ ಅವಿಭಾಜ್ಯ ಕೆಲಸ ಶೈಕ್ಷಣಿಕ ಕೆಲಸ. ಜನರಿಗೆ ಓದು ಬರಹ ಕಲಿಸುವುದರ ಜೊತೆಗೆ, ಗಾಂಧೀಜಿ ಹೇಳುತ್ತಿದ್ದಂತೆ, ನಮ್ಮ ದೇಶದ ಹಿರಿಮೆ ಮತ್ತು ಅರಿವು ಗೊತ್ತಾಗುವಂತೆ ಮಾಡಬೇಕು.

ಈ ಕೆಲಸಗಳು ಎಷ್ಟರ ಮಟ್ಟಿಗೆ ಸಾಧ್ಯ? ಈ ಪ್ರಯತ್ನಗಳು ಕೇವಲ ಆದರ್ಶಗಳಾಗಿಯೇ ಉಳಿಯುವುವೆ? ಜೂನ್ ೧೯೭೭ರ "ಸರ್ವೋದಯ ವಾಹಿನಿ"ಯಲ್ಲಿ ವರದಿ ಮಾಡಿರುವ ಘಟನೆ ಆಶಾಕಿರಣವನ್ನು ಚೆಲ್ಲುತ್ತದೆ: ಫೆಬ್ರವರಿ ೧೭ರಂದು, ೩೨ ಮಂದಿ ಗುಡ್ಡಗಾಡಿನ ಜನ, ಗಂಡಸರು, ಹೆಂಗಸರು, ಎಲ್ಲೋ ದೂರದ ಅಡವಿಯಲ್ಲಿ ತಮ್ಮ ಪಾಡಿಗೆ ತಾವು ಇದ್ದವರು, ಪಟ್ಟಣದ ಜನ ಅನಾಗರಿಕರು ಎಂದು ಹೀಯಾಳಿಸುವಂಥವರು ದೆಹಲಿಗೆ ಬಂದು, ರಾಷ್ಟ್ರಪಿತನ ಸಮಾಧಿಯ ಮುಂದೆ ನೆರೆದು ಹೀಗೆ ಶಪಥಗೊಂಡರು: "ಗಾಂಧೀಜಿಯ ಗ್ರಾಮ ಸ್ವರಾಜ್ಯವನ್ನು ಸಾಧಿಸಲು ನಾವು ನಮ್ಮ ಹಳ್ಳಿಯಲ್ಲಿ ಸ್ವಯಂ ಆಡಳಿತ ಸ್ಥಾಪಿಸುತ್ತೇವೆ. ನಾವು ನಮ್ಮತನವನ್ನು ಕಾಪಾಡಿಕೊಳ್ಳುತ್ತೇವೆ. ನಮ್ಮ ಉಜ್ವಲ ಪರಂಪರೆಗೆ ಅನುಸಾರವಾಗಿ, ನಾವು ನಮ್ಮ ದೇಶದಲ್ಲಿ ಸಮತ್ವ, ಸರಳತೆ ಹಾಗೂ ಸ್ವಾವಲಂಬನೆಗಳ ಮೇಲೆ ನಿಲ್ಲುವ ರಾಜ್ಯ ವ್ಯವಸ್ಥೆಯನ್ನು, ನಿಜವಾದ ಪ್ರಜಾ ಸ್ವಾತಂತ್ರ್ಯವನ್ನು ಸ್ಥಾಪಿಸುತ್ತೇವೆ. ಇದು ನಮ್ಮ ಶಪಥ."

ಇಂಥ ಶ್ರೀಗಳಿರುವತನಕ ನಮಗಿನ್ಯಾತರ ಭಯವೋ? ಗ್ರಾಮೀಣ ಜನತೆ ಮತ್ತು ಸ್ವಯಂ ಪ್ರೇರಿತ ರಚನಾತ್ಮಕ ಕಾರ್ಯಕರ್ತರ, ನಿಷ್ಠಾವಂತರ ದುಡಿಮೆಯಿಂದ ಸಮಗ್ರ ಗ್ರಾಮಾಭಿವೃದ್ಧಿಯ ಸಾಧನೆ ಆದೀತು. ಹಳ್ಳಿಗಳ ಸ್ವಾವಲಂಬನೆ ಸಿದ್ಧಿಸೀತು. ಆಗ ನಮ್ಮ ಹಳ್ಳಿಗಳು, ಗಾಂಧೀಜಿ ಆಶಿಸಿದಂತೆ "ಭೂ ತಾಯಿಗೆ ಹಾಕಿದ ಮುತ್ತಿನ ಮಾಲೆಯಂತೆ ಕಂಗೊಳಿಸಿಯಾವು."

ಕೃಷಿಕರ ಪರವಾಗಿ ಸರ್ಕಾರ ಏನು ಮಾಡಬೇಕು?

ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ'
ಸಾವಯವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ
ಮೈಸೂರು-೫೭೦೦೦೭

ಕೃಷಿಕರಿಗೆ ಬಹಳಷ್ಟು ಸಮಸ್ಯೆಗಳಿವೆ. ಸಮಸ್ಯೆಗಳು ಕೃಷಿಕರಿಗೆ ಮಾತ್ರ ಅಲ್ಲವಲ್ಲಾ. ಹಾಗಾಗಿ ಆದ್ಯತೆಯ ಮೇಲೆ ಸಮಸ್ಯೆಗಳನ್ನು ಪರಿಹರಿಸಬೇಕು ಎಂಬುದು ನೀತಿ. ಆದರೆ ಸರಕಾರದ ಇಂದಿನ ಆದ್ಯತೆ ಕೃಷಿಯ ಬದಲಾಗಿ ಕೈಗಾರಿಕೆಗಳ ಕಡೆಗೆ ಹೆಚ್ಚಾಗಿ ತಿರುಗಿದೆ. ಕೈಗಾರಿಕೆಗಳಿಂದ ದೇಶದ ಪ್ರಗತಿಯಾಗುತ್ತದೆ ಎಂಬುದು ಭ್ರಾಮಕ ಕಲ್ಪನೆ. ಪಾಶ್ಚಾತ್ಯ ದೇಶಗಳ ಉದಾಹರಣೆ ನಮಗೆ ಮಾದರಿ ಆಗಬೇಕಾಗಿಲ್ಲ. ಕೈಗಾರಿಕಾ ಕ್ರಾಂತಿಯಿಂದ ಆ ದೇಶಗಳು ಪ್ರಗತಿ ಹೊಂದಿರುವುದು ಒಂದು ಮಟ್ಟಿಗೆ ನಿಜ. ಆದರೆ ಇಂಥಾ ಪ್ರಗತಿ, ಹಿಂದುಳಿದಿರುವ ನಮ್ಮಿಂದ ಇನ್ನೂ ಸಾಧ್ಯವಿಲ್ಲ.

ಒಂದು ಮರ. ಅದರಲ್ಲಿ ನಾಲ್ಕು ಹಣ್ಣುಗಳಿವೆ. ಸ್ಪರ್ಧೆ ಪ್ರಾರಂಭವಾಗಿದೆ. ನೂರಾರು ಜನ ಸ್ಪರ್ಧಿಗಳು. ಸಮರ್ಥರಾದ ನಾಲ್ಕು ಜನ ಮೊದಲಾಗಿ ಹೋಗಿ ಆ ಹಣ್ಣುಗಳನ್ನು ಹೆಕ್ಕಿ ತಿಂದಾಗಿ ಹೋಗಿದೆ. ಹಂಚಿ ತಿನ್ನುವ ಸೌಜನ್ಯ ಅವರಿಗಿಲ್ಲ. ಇಷ್ಟು ತಿಳಿದ ಮೇಲೂ ಹಿಂದಿರುವವರು ಆ ಗುರಿಯ ಕಡೆಗೆ ಓಡುವುದರಲ್ಲಿ, ತಿನ್ನುತ್ತಿರುವ ಅವರನ್ನು ಜೊಲ್ಲು ಸುರಿಸುತ್ತಾ ನೋಡುವುದರಲ್ಲಿ, ಯಾವ ಔಚಿತ್ಯವಿದೆ? ಇನ್ನು ಸಿಗಲಾರದ ರೆಡಿ-ಮೇಡ್ ಹಣ್ಣುಗಳ ಕಡೆಗೆ ಆಸೆಯ ಕಣ್ಣಿಟ್ಟು ಓಡುವ ಬದಲು ನಮಗಾಗಿ ಹಣ್ಣನ್ನು ನಾವೇ ಬೆಳೆಸುವ ಕಡೆಗೆ ಗಮನ ಕೊಡುವುದೇ ಬುದ್ಧಿವಂತಿಕೆಯಾಗಿದೆ.

ಕೈಗಾರಿಕೆ ಎಂಬುದು ರೆಡಿಮೇಡ್ ಹಣ್ಣು. ಪ್ರಕೃತಿಯ ವಿಪುಲ ಸಂಪತ್ತನ್ನು ಮನುಷ್ಯೋಪಯೋಗಿಯಾಗಿ ಮಾರ್ಪಡಿಸುವ ವಿಧಾನ ಮಾತ್ರ. ಇದು ಎಂದೂ ಉತ್ಪಾದನೆ ಅಲ್ಲ. ಇದರ ಎಲ್ಲಾ ಸಾಧ್ಯತೆಗಳನ್ನೂ ಮೊದಲು ಓಡಿದ ಪಾಶ್ಚಾತ್ಯರು ಹೀರಿಬಿಟ್ಟಿರುವುದರಿಂದ ನಾವು ಮತ್ತೆ ಪಂದ್ಯ ಕಟ್ಟುವುದರಲ್ಲಿ ಅರ್ಥವಿಲ್ಲ.

ಶಕ್ತಿಯ ಮೂಲಗಳು ಹಲವು. ಅದರಲ್ಲಿ ಜನಶಕ್ತಿಯೂ ಒಂದು. ನಮ್ಮಲ್ಲಿ ವಿಪುಲವಾದ ಜನಶಕ್ತಿ ಇದೆ. ಪಾಶ್ಚಾತ್ಯರಿಗಿಲ್ಲದ ಉತ್ತಮ ಕೃಷಿ ಭೂಮಿ ಇದೆ. ಹಾಗೇ ಏನೆಲ್ಲವನ್ನೂ ಬೆಳೆಯುವ ಹವಾಮಾನ ಇದೆ. ಎಲ್ಲೂ ಇಲ್ಲದಷ್ಟು ಸಸ್ಯ ವೈವಿಧ್ಯ ಇದೆ. ಆದ್ದರಿಂದ, ಕೃಷಿಯಿಂದ, ಎಲ್ಲರಿಗೂ ಬೇಕಾದ ಅನ್ನದಿಂದ, ನಾವು ಅಗಾಧವಾದುದನ್ನು ಸಾಧಿಸಬಹುದು. ಹಾಗಾಗಿ ಸರ್ಕಾರದ ಆದ್ಯತೆ ಹಾಗೂ ಹಣದ ೭೦ ಭಾಗ ಕೃಷಿಗೆ

ಹರಿಯುವಂತಾಗಬೇಕು. ಕೃಷಿಯ ಹಾಗೂ ಕೃಷಿಕರ ಉದ್ಧಾರವಾದರೆ, ಕಿತ್ತು ತಿನ್ನುವ ಪೇಟೆಯ ಸಮಸ್ಯೆಗಳು ತಾನಾಗಿಯೇ ಪರಿಹಾರವಾಗುತ್ತವೆ. ಕೃಷಿಕರ ವಲಸೆ ತಪ್ಪುತ್ತದೆ.

ಕೃಷಿಯಲ್ಲಿ ಹಲವು ಸಮಸ್ಯೆಗಳು— ನೀರಿನ ಸಮಸ್ಯೆ, ಗೊಬ್ಬರದ ಸಮಸ್ಯೆ, ಇಷ್ಟೊಂದು ಜನಶಕ್ತಿ ಇದ್ದೂ ಆಳುಗಳ ಸಮಸ್ಯೆ, ಕೃಷಿ ವಸ್ತುಗಳ ಮಾರಾಟದ ಸಮಸ್ಯೆ, ವೈಜ್ಞಾನಿಕ ಬೆಲೆಯ ಸಮಸ್ಯೆ, ರಸ್ತೆಯ ಸಮಸ್ಯೆ, ಶಾಲೆಯ ಸಮಸ್ಯೆ, ವೈದ್ಯಕೀಯ ಸಮಸ್ಯೆ........ ಈ ಎಲ್ಲಾ ಸಮಸ್ಯೆಗಳೂ ಕೈಗಾರಿಕಾ ಮನೋಧರ್ಮದಿಂದಲೇ ನಿರ್ಮಿತವಾದವು! ಸಮಸ್ಯೆಗಳು ಎಂದೂ ಒಂಟಿ ಅಲ್ಲ. ಒಂದಕ್ಕೊಂದು ಬೆಸೆದುಕೊಳ್ಳುತ್ತಾ ಸಮಸ್ಯೆ ಹೆಮ್ಮರವಾಗುವುದು. ಹಾಗಾಗಿ ಸಮಸ್ಯೆಗಳ ಬಗ್ಗೆ ಮಾತನಾಡಿದಷ್ಟು ಸುಲಭವಾಗಿ ನಿವಾರಿಸಲು ಸಾಧ್ಯವಿಲ್ಲ.

ಈ ಉದಾಹರಣೆ ನೋಡಿ— ರೈತನ ವಸ್ತುಗಳಿಗೆ ಸರಿಯಾದ ಬೆಲೆ ಇಲ್ಲ. ನಿರ್ವಿವಾದ. ಹಾಗೊಂದು ವೇಳೆ ಸರ್ಕಾರ ಒಂದು ಕಾನೂನು ಮಾಡಿ ನಾಳೆಯಿಂದಲೇ ವೈಜ್ಞಾನಿಕ ಬೆಲೆಗೆ ಕೃಷಿ ಉತ್ಪನ್ನಗಳನ್ನು ಖರೀದಿಸಲು ಪ್ರಾರಂಭ ಮಾಡಿದರೆ, ನಾಡಿದ್ದನಿಂದ ನಮ್ಮ ನೀರಿನ ಸಮಸ್ಯೆ, ಗೊಬ್ಬರದ ಸಮಸ್ಯೆ ಇನ್ನೂ ಹೆಚ್ಚಾಗುತ್ತದೆ. ಆಳುಗಳ ಸಮಸ್ಯೆ ಮಿತಿ ಮೀರುತ್ತದೆ. ಹಣ ಕಂಡ ಕೂಡಲೇ, ಕೃಷಿಕ ಆ ಹಣವನ್ನು ಕೈಗಾರಿಕಾ ವಸ್ತುಗಳ ಕಡೆಗೆ (ಭೋಗವಸ್ತುಗಳ ಕಡೆಗೆ) ಹರಿಸುತ್ತಾನೆ. ತಾನು ಹೆಚ್ಚು ಆಲಸಿಯಾಗುತ್ತಾನೆ. ಇದರಿಂದ ಪ್ರಕೃತಿ ಹೆಚ್ಚು ನಾಶವಾಗುತ್ತದೆ. "ನೀರಿಲ್ಲ" ಎಂದು ಬೋರ್‌ವೆಲ್ ತೆಗೆದಷ್ಟೂ ನೀರಿನ ಸಮಸ್ಯೆ ಹೆಚ್ಚಾಗುತ್ತಿದೆ. ರಾಸಾಯನಿಕ ಹಾಕಿದಷ್ಟೂ ಕೃಷಿಭೂಮಿ ಹೆಚ್ಚು ಹೆಚ್ಚಾಗಿ ಹಾಳಾಗುತ್ತಿದೆ. ಕೀಟನಾಶಕಗಳೂ ಸೇರಿದಂತೆ ಕೃಷಿಯಲ್ಲಿ ಬಂದಿರುವ ಒಂದೊಂದು ಕೃತಕತೆಗಳೂ ಆಹಾರದ ಗುಣಮಟ್ಟವನ್ನು ಆರೋಗ್ಯದ ಪರಿಸ್ಥಿತಿಯನ್ನು ಹದಗೆಡಿಸುತ್ತಿವೆ. ಇಂಥಾ ಶಾಶ್ವತ ಸಮಸ್ಯೆಗಳ ಬಗ್ಗೆ ಆದರ್ಶದ ದಾರಿ ತುಳಿಯದೆ, ಹುಲಿ ತನ್ನ ಹುಣ್ಣಿಗೆ ಮದ್ದು ಮಾಡಿದ ರೀತಿಯಲ್ಲಿ ಪರಿಹಾರ ಹುಡುಕುವ ಪರಿಪಾಠವನ್ನು ಪ್ರಕೃತಿ ಪರಿಹಾಸ್ಯ ಮಾಡುತ್ತಿದೆ.

ಈ ನಿಟ್ಟಿನಲ್ಲಿ ಸರ್ಕಾರ ಹಲವನ್ನು ಮಾಡಬೇಕಿದೆ. ಬಹುಶಃ ಮಾಡಬೇಕಾದ್ದಕ್ಕಿಂತ ಹೆಚ್ಚು ಮಾಡಬಾರದ್ದೂ ಇದೆ. ಮಾಧ್ಯಮಗಳಲ್ಲಿ ಜಾಹೀರಾತುಗೊಂಡು ಜನರಲ್ಲಿ ಬೇಕುಗಳನ್ನು ನಿರ್ಮಾಣ ಮಾಡುತ್ತಿರುವ ಒಂದೊಂದು ಕೈಗಾರಿಕಾ ವಸ್ತುಗಳೂ ನಮಗೆ ಬೇಡವಾಗುವ ತನಕ ನಮ್ಮ ಸಮಸ್ಯೆಗಳು ನಿವಾರಣೆಯಾಗಲಾರದು. ಇಂಥಾ ಬೇಡದ ವಸ್ತುಗಳ ಕಡೆಗೆ ನಮ್ಮ ಶಕ್ತಿ, ಹಣ, ಸಮಯ ಹರಿಯುವುದನ್ನು ಕಡಿಮೆ ಗೊಳಿಸುವುದೇ ಸರ್ಕಾರದ ಆದ್ಯತೆಯಾಗಬೇಕು. ಸಾವಯವ ಸಹಜ ಕೃಷಿಗೆ ಪ್ರಚಾರ, ಪ್ರಾಮುಖ್ಯತೆ ಬಂದು ಪ್ರಕೃತಿ ಪುನರ್ ನಿರ್ಮಾಣಗೊಳ್ಳಬೇಕು. ಕೃಷಿ ಪ್ರಥಮ ಆದ್ಯತೆಯಾಗಬೇಕು. ಕೃಷಿಗೆ ಕೈಗಾರಿಕೆಯ ಸ್ಥಾನ, ಮಾನ ಬರಬೇಕು.

ಮಾಹಿತಿ ಕ್ರಾಂತಿ ವರವೇ? ಶಾಪವೇ?

ಬಿ. ಆರ್. ಹರಿಣೀಶ

೫೬೧, ೩ನೇ ಮುಖ್ಯ ರಸ್ತೆ, 'ಎ' ಬ್ಲಾಕ್
೨ನೇ ಹಂತ, ರಾಜಾಜಿನಗರ
ಬೆಂಗಳೂರು-೫೬೦೦೧೦.

ಮಾಹಿತಿಯುಗದ ಬವಣೆಗಳನ್ನು ಗುರುತಿಸಿದ ಚಿಂತಕನೊಬ್ಬ ಪ್ರಶ್ನೆ ಹಾಕಿದ: "ಮಾಹಿತಿಗಳ ಗುಪ್ಪೆಯಲ್ಲಿ ತಿಳಿವು ಕಳೆದುಹೋಗಿದೆ, ತಿಳಿವಿನ ರಾಶಿಯಲ್ಲಿ ಅರಿವು ಮಸಳಿಹೋಗಿದೆ, ಅರಿವಿನ ಹಿರಿಮೆಯಲ್ಲಿ ಬದುಕು ನಲುಗಿದೆ!" ಅಂದರೆ ಮಾಹಿತಿಯಿಂದ ತಿಳಿವು, ತಿಳಿವಿನಿಂದ ಅರಿವು—ಇವೆಲ್ಲ ಇರುವುದು ಸಾರ್ಥಕ ಸುಖೀಜೀವನದ ಸಲುವಾಗಿ; ಜೀವನ ಇವುಗಳ ಸಲುವಾಗಿ ಇರುವುದಲ್ಲ. ಈ ಸೂಕ್ಷ್ಮ ಚಿಂತನೆ ನಮ್ಮ ಪ್ರವೃತ್ತ ಜೀವನದ ಆಧಾರ ಶ್ರುತಿಯಾದರೆ ಮಾಹಿತಿ ಕ್ರಾಂತಿ ಸಾರ್ಥಕ್ಯ ಕಂಡೀತು, ಇಲ್ಲವಾದರೆ ಕೃಷಿಕ್ರಾಂತಿಯು ದುಷ್ಫಲ ಬುಡಕಟ್ಟುಗಳ ನಡುವಿನ ಕಾಳಗ, ಕೈಗಾರಿಕಾ ಕ್ರಾಂತಿಯದು ಜನಾಂಗಗಳ ನಡುವಿನ ಕದನ, ಮಾಹಿತಿ ಕ್ರಾಂತಿಯದು ಸಾಕ್ಷಾತ್ ಮಿದುಳುಗಳ ನಡುವಿನ ಸಮರ. ಫಲಿತಾಂಶ? ಮನುಕುಲದ ಸರ್ವನಾಶ.

ಪ್ರಪಂಚದ ನಾಗರಿಕತೆಗಳ ಮೇಲೆ ಮೂರು ವಿಧವಾದ ಕ್ರಾಂತಿಗಳು ಪರಿಣಾಮ ಬೀರಿರುವುದನ್ನು ಗಮನಿಸಬಹುದು. ಹಿಂದೆ, ಕೃಷಿ ಕ್ರಾಂತಿ ಮತ್ತು ಕೈಗಾರಿಕಾ ಕ್ರಾಂತಿ ಆಳವಾಗಿ ಪ್ರಭಾವ ಬೀರಿದುವು. ಇಂದಿನ ಯುಗದಲ್ಲಿ, ಮಾಹಿತಿ ಕ್ರಾಂತಿ ಮಾನವನ ಜೀವನ ಮತ್ತು ವ್ಯಕ್ತಿತ್ವ ರೂಪಿಸುವುದರಲ್ಲಿ ಮಹತ್ವಪೂರ್ಣ ಪಾತ್ರ ವಹಿಸಿದೆ.

ಇತಿಹಾಸ ಪೂರ್ವ ಕಾಲದಲ್ಲಿ, ಜನರ ಬದುಕು ಹೆಚ್ಚಾಗಿ ಆಹಾರಕ್ಕಾಗಿ ಅಲೆದಾಟದಲ್ಲೇ ಕೊನೆಗೊಂಡಿತು. ಪರಿಸರದೊಡನೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದ ಮಾನವ ಪ್ರಕೃತಿಯ ಸವಾಲುಗಳನ್ನು ಎದುರಿಸುತ್ತ ಉಳಿವಿಗಾಗಿ ತೀವ್ರವಾಗಿ ಸೆಣಸುತ್ತ ಹೆಚ್ಚಾಗಿ ಭೀತಿಯಿಂದಲೇ ಕಾಲ ಕಳೆಯಬೇಕಾಯಿತು. ಕ್ರೂರಮೃಗಗಳ ಹಾವಳಿಯಿಂದ ತಪ್ಪಿಸಿಕೊಳ್ಳಲು ಮತ್ತು ತಮ್ಮ ಉಳಿವಿಗಾಗಿ ಸುರಕ್ಷಿತವಾದ ವಾತಾವರಣವನ್ನು ಸೃಷ್ಟಿಸಲು ಬಯಸಿದ. ಹೀಗಾಗಿ ಜನರು ಗುಂಪುಗಳಲ್ಲಿ ವಾಸಿಸಲು ಪ್ರಯತ್ನಿಸಿದರು ಮತ್ತು ಸಾಗುವಳಿಯ ಕಲೆಯನ್ನು ಬೆಳೆಸಿಕೊಳ್ಳುವವರೆಗೆ ಅಲೆಮಾರಿ ಜೀವನದಲ್ಲಿ ತೊಡಗಿದರು. ಕೃಷಿ ಕ್ರಾಂತಿ ಪ್ರಾರಂಭವಾದನಂತರ ಅನುಕೂಲಕರವಾದ ಪರಿಸರವಿರುವ ಫಲವತ್ತಾದ ಪ್ರದೇಶಗಳಲ್ಲಿ ವಾಸಿಸಲು ವಲಸೆಹೋದರು.

ತಮ್ಮ ಭೂಮಿಯಿಂದ ಉತ್ಪಾದನೆಯನ್ನು ನಿರೀಕ್ಷಿಸುತ್ತಾ ಮತ್ತು ಭೂಮಿಯನ್ನು ಉತ್ತಮಪಡಿಸುವ ಸಲುವಾಗಿ ಒಂದೆಡೆ ನೆಲಸಲು ತೊಡಗಿದರು. ಕೃಷಿ ಜನರ ಪ್ರಧಾನ ವೃತ್ತಿಯಾದಾಗ, ಆರ್ಥಿಕ ಚಟುವಟಿಕೆಗಳು ಪ್ರಾರಂಭವಾದುವು. ಕಾಲ ಕ್ರಮೇಣ ಊಳಿಗಮಾನ್ಯ ಆರ್ಥಿಕ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಸಮಾಜದಲ್ಲಿ ಶಾಂತಿ ಮತ್ತು ಭದ್ರತೆ ಕಾಪಾಡಲು, ಆಚಾರ ವಿಚಾರಗಳು ಹಾಗೂ ಸಂಪ್ರದಾಯ ಕಾನೂನಿನ ಸ್ವರೂಪವನ್ನು ಪಡೆದು ಕೊಂಡುವು. ವ್ಯಾಪಾರ ಮತ್ತು ವಾಣಿಜ್ಯದ ಬೆಳವಣಿಗೆಯೊಂದಿಗೆ, ನಗರಗಳು ಸಾಂಸ್ಕೃತಿಕ ಹಾಗೂ ವಾಣಿಜ್ಯಕ ಕೇಂದ್ರಗಳಾಗಿ ಬೆಳೆದುವು. ಹಿಂದಿದ್ದ 'ಮತ್ಸನ್ಯಾಯ' ಅರ್ಥ ಹೀನವೆನಿಸಿಕೊಂಡಿತು. ಹೊಸ ಸಮಾಜದ ಆವಶ್ಯಕತೆಗಳನ್ನು ಪೂರೈಸಲು ಹೊಸ ಕಾನೂನುಗಳನ್ನು ಸೃಷ್ಟಿಸಬೇಕಾಯಿತು. ಹಿಂದಿನ ಕಾಲದಲ್ಲಿ, ಜನಸಂಖ್ಯೆ ಮತ್ತು ನೈಸರ್ಗಿಕ ಸಂಪನ್ಮೂಲಗಳು ಹಾಗೂ ಹವಾಗುಣ ಮಾನವನ ಬದುಕಿನಲ್ಲಿ ಮುಖ್ಯ ನಿರ್ಧಾರಕ ಅಂಶಗಳಾಗಿದ್ದವು.

ಕೈಗಾರಿಕಾ ಕ್ರಾಂತಿ ಮಾನವನ ಬದುಕಿನಲ್ಲಿ ಅನೇಕ ಬದಲಾವಣೆಗಳನ್ನು ತಂದಿತು. ಪ್ರಪಂಚ ಆದ್ಯಂತ ಹರಡಿದ ಕೈಗಾರಿಕಾ ಕ್ರಾಂತಿ ಎಲ್ಲೆಡೆಯಲ್ಲಿಯೂ ಮಾನವನ ಬದುಕಿನ ಮೇಲೆ ಪ್ರಭಾವ ಬೀರಿತು. ಕಾಲ ಹಾಗೂ ಶ್ರಮದ ಉಳಿತಾಯ ಸಾಧನಗಳು ಬಳಕೆಗೆ ಬಂದುವು. ಬೃಹತ್ ಪ್ರಮಾಣದಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಲಾಯಿತು ಮತ್ತು ಉತ್ತಮ ಗುಣಮಟ್ಟದ ವಸ್ತುಗಳನ್ನು ತಯಾರಿಸಲಾಯಿತು. ಕೈಗಾರಿಕಾ ಕ್ರಾಂತಿ ಅದರದೇ ಆದ ಪ್ರಯೋಜನಗಳನ್ನು ಹಾಗೂ ದುಷ್ಪರಿಣಾಮಗಳನ್ನು ಉಂಟು ಮಾಡಿತು. ಯಂತ್ರಗಳಿಂದಾಗಿ ಅಂತರ ರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯ ಬೆಳೆದುವು. ಇದರಿಂದಾಗಿ ಅಪಾರ ಆರ್ಥಿಕ ಅಭಿವೃದ್ಧಿಯುಂಟಾಯಿತು. ಯಂತ್ರಗಳ ಬಳಕೆಯಿಂದಾಗಿ, ನಿರುದ್ಯೋಗ ಸಮಸ್ಯೆ ಮತ್ತು ಕೈಗಾರಿಕೆಗಳ ಕುಸಿತ ಉಂಟಾಯಿತು. ಕೈಗಾರಿಕಾ ಕ್ರಾಂತಿಯಿಂದಾಗಿ ಜನರ ಸಾಮಾಜಿಕ ಜೀವನದ ಮೇಲೂ ಅಪಾರ ಪ್ರಭಾವ ಉಂಟಾಯಿತು. ಜೀವನ ಹೆಚ್ಚು ಯಾಂತ್ರಿಕವಾಯಿತು ಮತ್ತು ಜನರು ಲೌಕಿಕ ಹೊರನೋಟ ಬೆಳೆಸಿಕೊಂಡರು. ಅವಿಭಕ್ತ ಕುಟುಂಬ ಪದ್ಧತಿ ನಾಶವಾಯಿತು ಮತ್ತು ನಗರಗಳಲ್ಲಿಯ ಬದುಕು, ಅದರದೇ ಆದ ಜಟಿಲಸಮಸ್ಯೆಗಳಿಂದ ಕೂಡಿದುದಾಗಿತ್ತು. ದೂರದ ಬೆಟ್ಟ ನುಣ್ಣಗೆ ಎಂಬಂತೆ ನಗರ ಜೀವನದ ಆಕರ್ಷಣೆ ಅನೇಕ ಸಮಸ್ಯೆಗಳಿಂದ ಕ್ಷೀಣಿಸತೊಡಗಿತು. ಕಾರ್ಮಿಕರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಲಾಗಿತ್ತು. ರಾಜಕೀಯರಂಗದಲ್ಲಿ ಬಂಡವಾಳ ಶಾಹಿಯೊಂದಿಗೆ ಸಾಮ್ರಾಜ್ಯಶಾಹಿಯೂ ಬೆಳೆಯಿತು. ಒಂದೆಡೆ ಅಂತರರಾಷ್ಟ್ರೀಯ ವ್ಯಾಪಾರ ಆರ್ಥಿಕ ಅಭಿವೃದ್ಧಿಗೆ ಕಾರಣವಾದರೆ ಮತ್ತೊಂದೆಡೆ ತೀವ್ರ ಸ್ಪರ್ಧೆ ಮತ್ತು ಆರ್ಥಿಕ ಶೋಷಣೆಗೂ ಕಾರಣವಾಯಿತು. ಪಾಶ್ಚಾತ್ಯ ರಾಷ್ಟ್ರಗಳು ಆಫ್ರಿಕಾ ಮತ್ತು ಏಷ್ಯನ್ ರಾಷ್ಟ್ರಗಳನ್ನು ಆರ್ಥಿಕ ಶೋಷಣೆಗೆ ಗುರಿಪಡಿಸಿದುವು. ಕೈಗಾರಿಕಾ ಕ್ರಾಂತಿಯಿಂದಾಗಿ ಪ್ರಪಂಚದ ಪೌರಸ್ತ್ಯ ದೇಶಗಳಿಗಿಂತಾ ಪಾಶ್ಚಾತ್ಯ ರಾಷ್ಟ್ರಗಳು ಹೆಚ್ಚು ಮುಂದುವರಿದುವು. ಬಿಳಿಯರು

ಆಫ್ರಿಕಾ ಮತ್ತು ಏಷ್ಯಾದಲ್ಲಿ ವರ್ಣಭೇದವನ್ನು ಪ್ರಚಾರ ಮಾಡಿದರು. ಯಾವ ರಾಷ್ಟ್ರಗಳು ವೈಜ್ಞಾನಿಕತೆ ಮತ್ತು ತಾಂತ್ರಿಕತೆಯಲ್ಲಿ ಮುನ್ನಡೆಯನ್ನು ಸಾಧಿಸಿದ್ದವೋ ಅಂಥರಾಷ್ಟ್ರಗಳು ಆರ್ಥಿಕವಾಗಿ ಮೇಲುಗೈಯನ್ನು ಸಾಧಿಸಿ, ಪಾಶ್ಚಾತ್ಯ ಮತ್ತು ಪೌರಸ್ತ್ಯ ರಾಷ್ಟ್ರಗಳ ನಡುವಿನ ಅಂತರ ಹೆಚ್ಚಾಯಿತು. ಎಷ್ಟರಮಟ್ಟಿಗೆ ತಂತ್ರವಿದ್ಯೆಯನ್ನು ಅವಲಂಬಿಸಲಾಯಿತೆಂದರೆ, ವೈಜ್ಞಾನಿಕ ಮುನ್ನಡೆ ರಾಜಕೀಯ ಹಾಗೂ ಆರ್ಥಿಕ ಪ್ರಭುತ್ವವನ್ನು ನಿರ್ಧರಿಸಲು ಪ್ರಾರಂಭಿಸಿತು.

ಕಾಲಕ್ರಮೇಣ ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ವೈಜ್ಞಾನಿಕ ಸಂಶೋಧನೆಗಳಿಂದಾಗಿ, ಪ್ರಪಂಚದ ಶಕ್ತಿ ವ್ಯವಸ್ಥೆಯಲ್ಲಿ ಬದಲಾವಣೆಯುಂಟಾಯಿತು. ಶೀತಲಯುದ್ಧ ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ತೀವ್ರ ಸ್ಪರ್ಧೆಯುಂಟು ಮಾಡಿತು. ಅಣ್ವಸ್ತ್ರಗಳ ತಯಾರಿಕೆಯಿಂದಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿವಿಧ ರಾಷ್ಟ್ರಗಳ ಸ್ಥಾನಮಾನಗಳಲ್ಲಿ ಬದಲಾವಣೆಯುಂಟಾಯಿತು. ಬ್ರಿಟನ್, ಅಮೇರಿಕಾ, ರಷ್ಯಾ, ಚೀನಾ ಮತ್ತು ಫ್ರಾನ್ಸಿನೊಂದಿಗೆ ಜರ್ಮನಿ ಮತ್ತು ಜಪಾನ್ ಕೂಡ ವಿಶ್ವಶಕ್ತಿಗಳಾಗಿ ಬೆಳೆದುವು. ಭಾರತವೂ ಅಣ್ವಸ್ತ್ರ ರಾಷ್ಟ್ರಗಳ ಗುಂಪನ್ನು ಸೇರಲು ಸಕಲ ಪ್ರಯತ್ನಗಳನ್ನು ನಡೆಸುತ್ತಿದೆ.

ಮಾಹಿತಿ ಕ್ರಾಂತಿಯಿಂದಾಗಿ ಜ್ಞಾನದ ಮೇಲೆ ಆಧಾರಿತವಾದ ಹೊಸ ಶಕ್ತಿ ವ್ಯವಸ್ಥೆ ಸೃಷ್ಟಿಯಾಗುತ್ತಿದೆ. ಆಧುನಿಕ ಕಾಲದಲ್ಲಿ ಮಾಹಿತಿ ತಂತ್ರವಿದ್ಯೆ ಜೀವನಕ್ಕೆ ಅನಿವಾರ್ಯ ಮತ್ತು ಅತ್ಯವಶ್ಯವಾಗಿದೆ. ಯಾವ ದೇಶವೂ ಸಂಪರ್ಕರಹಿತವಾಗಿ ಉಳಿಯಲು ಸಾಧ್ಯವಿಲ್ಲ. ಪ್ರಪಂಚದಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕಕ್ಷೇತ್ರಗಳಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಕುರಿತು ಅರಿತುಕೊಳ್ಳಲೇಬೇಕಾದ ಪರಿಸ್ಥಿತಿಯುಂಟಾಗಿದೆ. ಮಾಹಿತಿ ತಂತ್ರವಿದ್ಯೆ ಗಣಕಯಂತ್ರಗಳಿಂದ, ಸಂಪರ್ಕ ಮಾಧ್ಯಮಗಳಿಂದ, ಎಲೆಕ್ಟ್ರಾನಿಕ್ಸ್ ಮತ್ತು ಕೃತಕ ಬುದ್ಧಿಶಕ್ತಿಯಿಂದ ಉದ್ಭವಿಸಿದೆ. ಎಲೆಕ್ಟ್ರಾನಿಕ್ಸ್ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಿದೆ. ಸ್ವಲ್ಪ ಕಾಲದಲ್ಲೇ ದೊಡ್ಡ ಕಂಪನಿಗಳ ಮಾಲೀಕರಿಗೆ ಗಣಕಯಂತ್ರಗಳು ನೆರವಾಗುತ್ತವೆ. ಗ್ರಂಥಾಲಯಗಳಲ್ಲಿ ಮೆಗಾಟೇಪ್‌ಗಳ ಬದಲಾಗಿ ಫ್ಲಾಪಿಗಳ ಸಂಗ್ರಹವಿರುತ್ತದೆ. ಸುಲಭವಾಗಿ ಯಾವ ಮಾಹಿತಿಯನ್ನಾದರೂ ಪಡೆದುಕೊಳ್ಳಬಹುದು. ಅವಲ್ಲದೆ ಒಂದೇ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳು ಸುಲಭವಾಗಿ ಸಂಪರ್ಕಿಸಬಹುದು. ಅನೇಕ ತಂತ್ರವಿದ್ಯೆಗಳ ತೀವ್ರ ಬೆಳವಣಿಗೆಯಿಂದಾಗಿ ವ್ಯಕ್ತಿ ಹೆಚ್ಚು ಶಕ್ತಿಶಾಲಿಯಾಗಿದ್ದಾನೆ. ಕಂಪ್ಯೂಟರ್‌ಗಳ ಬಳಕೆಯು ಅದರದೇ ಆದ ಉತ್ತಮ ಹಾಗೂ ಹಾನಿಕರ ಪರಿಣಾಮಗಳನ್ನು ಉಂಟುಮಾಡಿದೆ. ವೈಯಕ್ತಿಕ ಗಣಕಯಂತ್ರ ಸಮಗ್ರ ವಿಶ್ವಕೋಶವಲ್ಲಿಯ ವಿವರಗಳನ್ನು ಮತ್ತು ಮಾಹಿತಿಗಳನ್ನು ಒದಗಿಸುತ್ತದೆ. ಒಂದು ಗುಂಡಿಯನ್ನು ಒತ್ತುವುದರಿಂದಲೇ ಯಾವ ವಿಷಯವನ್ನು ಕುರಿತಾದರೂ ಮಾಹಿತಿ ಸಂಗ್ರಹಿಸಬಹುದಾಗಿದೆ. ಗಣಕಯಂತ್ರಗಳು ಸ್ವಯಂ-ಶಿಕ್ಷಣಕ್ಕೆ ಅನುಕೂಲಕರವಾಗಿವೆ. ಹಳೆಯ

ಕೌಶಲ್ಯಗಳ ಅವಶ್ಯಕತೆ ಕ್ಷೀಣಿಸುತ್ತಿದೆ. ಕಂಪ್ಯೂಟರ್ ಲೋಕದಲ್ಲಿ ವ್ಯವಹರಿಸಲು ಹೊಸ ವಿಧವಾದ ತರಬೇತಿ ಅವಶ್ಯಕವಾಗಿದೆ.

ಮಾಹಿತಿ ತಂತ್ರವಿದ್ಯೆಯ ಮುನ್ನಡೆಯಿಂದಾಗಿ ಅನೇಕ ಸಮಸ್ಯೆಗಳು ಮತ್ತು ವಿಪತ್ತುಗಳು ಉಂಟಾಗಿವೆ. ಕಂಪ್ಯೂಟರ್ ಗುಂಡಿಗಳನ್ನು ಒತ್ತುವುದರಿಂದಲೇ ಮಕ್ಕಳು ಯಾವ ವಿಷಯವನ್ನಾದರೂ ಪಡೆದುಕೊಳ್ಳಬಹುದು ಮತ್ತು ಒಂದು ವಿಷಯದಿಂದ ಮತ್ತೊಂದಕ್ಕೆ ನಿರಾಯಾಸವಾಗಿ ಹಾರಬಹುದು. ಆದರೆ ನಿಜವಾದ ಅರ್ಥದಲ್ಲಿ ಈ ಮೂಲಕ ಜ್ಞಾನವನ್ನು ಸಂಪಾದಿಸಲು ಸಾಧ್ಯವಿಲ್ಲವೆಂದು ಸಂಶೋಧನೆಗಳು ತೋರಿಸಿವೆ. ಪ್ರತಿಯೊಂದು ವಿಷಯದ ಬಗ್ಗೆ ನಿರಾಯಾಸವಾಗಿ ಯಾವ ವಿಷಯವನ್ನಾದರೂ ತಿಳಿಯಬಹುದಾದ್ದರಿಂದ ಮಕ್ಕಳಲ್ಲಿ ಓದಿನ ಬಗ್ಗೆ ಆಸಕ್ತಿ ಕ್ಷೀಣಿಸುತ್ತದೆ ಮತ್ತು ಕೃತಕ ಬೌದ್ಧಿಕ ಬೆಳವಣಿಗೆ ಉಂಟಾಗಿ, ಸೃಜನಶೀಲತೆ ಕುಂಠಿತವಾಗುತ್ತದೆ. ಕೈಗಾರಿಕಾ ಕ್ರಾಂತಿಯು ದೈಹಿಕ ಶಕ್ತಿಯ ಬದಲಾಗಿ ಯಂತ್ರಶಕ್ತಿಯನ್ನು ಜಾರಿಗೆ ತಂದು ಮನುಷ್ಯನ ಸಾಮರ್ಥ್ಯವನ್ನು ಹೆಚ್ಚಿಸಿತು. ಈ ಹೊಸ ಮಾಹಿತಿ ಕ್ರಾಂತಿ ಮನುಷ್ಯನ ಬುದ್ಧಿಶಕ್ತಿಯ ಬದಲಾಗಿ ಯಂತ್ರಗಳ ಶಕ್ತಿಯನ್ನು ಜಾರಿಗೆ ತರಬಹುದೆಂಬ ಹೆದರಿಕೆಯನ್ನುಂಟು ಮಾಡಿದೆ. ತಂತ್ರವಿದ್ಯೆಯ ಬಳಕೆಯಿಂದಾಗಿ ಸಾಮಾನ್ಯ ಜನರಿಗೂ ಸಂಪರ್ಕ ತಂತ್ರವಿದ್ಯೆಯ ಫಲವು ದೊರೆಯುವಂತಾಗಿದೆ. ಈಗಾಗಲೆ ಸಂಪರ್ಕ ಕ್ರಾಂತಿಯು ದೇಶೀಯ ಜ್ಞಾನ ಮತ್ತು ತಂತ್ರವಿದ್ಯೆಯ ಬೆಳವಣಿಗೆಯನ್ನು ಪ್ರಾರಂಭಿಸಿದೆ.

ವಿಜ್ಞಾನ ಮತ್ತು ತಂತ್ರವಿದ್ಯೆಯ ಪ್ರಗತಿಯು ವರವೇ ಅಥವಾ ಶಾಪವೇ? ಇತ್ತೀಚಿನ ದಿನಗಳಲ್ಲಿ ಈ ಪ್ರಶ್ನೆ ಸಮಾಜವನ್ನು ಕಾಡುತ್ತಿದೆ. ಪ್ರಾಚೀನ ಕಾಲದಲ್ಲಿ ಬೌದ್ಧಿಕ ಬೆಳವಣಿಗೆ ತೀರಾ ಹೆಚ್ಚಾಗಿಲ್ಲದಿದ್ದ ಕಾರಣದಿಂದಾಗಿ ಸಂಪ್ರದಾಯಗಳು ಮತ್ತು ಆಚಾರ ವಿಚಾರಗಳೇ ಅಪರಾಧಗಳನ್ನು ಜನರು ಎಸಗದಂತೆ ತಡೆಹಿಡಿಯುತ್ತಿದ್ದವು. ಇಂದು, ಮಾನವನ ಬೌದ್ಧಿಕ ಬೆಳವಣಿಗೆ ಹೆಚ್ಚಾದಂತೆ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು ಜಟಿಲವಾದ ಸಮಸ್ಯೆಯಾಗಿದೆ. ಇತ್ತೀಚಿನ ದಿನಗಳಲ್ಲಿ ತಾಂತ್ರಿಕ ಅಪರಾಧ ಮತ್ತು ಹೊಸ ರಾಜಕೀಯ ಶಕ್ತಿ ಕೇಂದ್ರಗಳು ಉದ್ಭವಿಸಿವೆ. ಭೂಗತವಾಗಿರುವ ಸಮಾಜಘಾತಕರು ಯಾವ ಕೊಲೆಯನ್ನಾಗಲಿ ದರೋಡೆಯನ್ನಾಗಲಿ ಸುಲಭವಾಗಿ ಮತ್ತು ಬುದ್ಧಿವಂತಿಕೆಯಿಂದ ನಿಯೋಜಿಸಲು ಸಾಧ್ಯವಾಗಿದೆ. ಸಾಮಾನ್ಯ ಜನರಿಗೇ ಸಾಕಷ್ಟು ತಿಳುವಳಿಕೆ ಇರುವುದರಿಂದ ಹಾಗೂ ಸುಲಭವಾಗಿ ಒದಗುವ ಕೃಷಿಯ ರಾಸಾಯನಿಕಗಳಿಂದ ತಯಾರಿಸಲಾದ ಸ್ಫೋಟಕ ವಸ್ತುಗಳನ್ನು ಬಳಸಿ ನ್ಯೂಯಾರ್ಕ್‌ನ ವಿಶ್ವ ವ್ಯಾಪಾರ ಕೇಂದ್ರವನ್ನು ನಾಶಪಡಿಸಲು ಪ್ರಯತ್ನಿಸಲಾಯಿತು. ಭಯೋತ್ಪಾದಕ ಗುಂಪುಗಳು ಪ್ರಬಲವಾಗಿವೆ ಮತ್ತು ಸರ್ಕಾರಗಳಿಗೇ ಸವಾಲನ್ನೆಸೆದಿವೆ ಹಾಗೂ ಅಪಾಯಕರ ಶಾಂತಿ ಮತ್ತು ಸಂರಕ್ಷಣೆಗೆ ಧಕ್ಕೆಯುಂಟುಮಾಡಿವೆ. ತಂತ್ರವಿದ್ಯೆಯ ಮುನ್ನಡೆಯಿಂದಾಗಿ ಸಣ್ಣ ಗುಂಪುಗಳ ಜನರೂ ಅಪಾರ ಹಾನಿಉಂಟು ಮಾಡುವ ಸಾಮರ್ಥ್ಯ ಪಡೆದುಕೊಂಡಿದ್ದಾರೆ. ಯಾವ

ಒಂದು ದೇಶವೂ ಮಿಲಿಟರಿ ಉತ್ತಮಗಾರಿಕೆಯನ್ನು ಕುರಿತು ಹೆಮ್ಮೆ ಪಡುವಂತಿಲ್ಲ. ಅದಲ್ಲದೆ ಯಾವ ರಾಷ್ಟ್ರವೂ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಆ ದೇಶವೇ ನಿರ್ಣಾಯಕ ಅಂಶವೆಂದು ಭಾವಿಸುವಂತಿಲ್ಲ. ವಿನಾಶಕಾರಿ ಶಕ್ತಿಯನ್ನು ವಿವಿಧ ಗುಂಪುಗಳಿಗೆ ಸೇರಿದ ಜನರೂ ಹೊಂದಿರುತ್ತಾರೆ. ಸರ್ಕಾರವೇ ಕಾನೂನಿನ ಸಂರಕ್ಷಕ ಎಂಬುದು ಹುಸಿಯಾಗುತ್ತಿದೆ. ನ್ಯಾಯವನ್ನು ತಮ್ಮದೇ ಆದ ದೃಷ್ಟಿಕೋನದಲ್ಲಿ ವಿಮರ್ಶಿಸಿ, ಅದಕ್ಕಾಗಿ ಜನರು ಕಾನೂನನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ವಿಕೃತ ಮನೋಭಾವದ ಜನರಿಂದಾಗಿ ತಂತ್ರವಿದ್ಯೆಯ ದುರುಪಯೋಗ ಉಂಟಾಗುತ್ತಿದೆ. ಇಂದಿನ ಯುಗದಲ್ಲಿ, ಧರ್ಮಾಂಧರು ಮತ್ತು ಮಾದಕವಸ್ತುಗಳ ಮಾರಾಟಗಾರರು ಹೆಚ್ಚಿನ ಶಕ್ತಿಯನ್ನು ಪಡೆದುಕೊಂಡಿದ್ದಾರೆ. ಅಂಥವರು ಯಾವ ಒಂದು ದೇಶಕ್ಕೂ ಸೇರಿದವರೆಂದು ನಿರ್ಧರಿಸಲು ಸಾಧ್ಯವಿಲ್ಲ. ವಿಶ್ವಸಂಸ್ಥೆಯು ವಿವಿಧ ರಾಷ್ಟ್ರಗಳ ಪ್ರತಿನಿಧಿಯಾಗಿ ಮಾತ್ರ ಹೆಚ್ಚು ಕಾಲ ಉಳಿಯಲು ಸಾಧ್ಯವಿಲ್ಲ. ವಾಸ್ತವ ಸತ್ಯಗಳನ್ನು ಪ್ರತಿಬಿಂಬಿಸುವಂತೆ ಅದನ್ನು ಪುನರ್ ರಚಿಸಬೇಕು. ಪ್ರಬಲವಾದ ಐದು ರಾಷ್ಟ್ರಗಳು ಯುದ್ಧ ನಡೆಸದಂತೆ, ಶಾಂತಿಯ ಸಂರಕ್ಷಣೆಗಾಗಿ ಶ್ರಮಿಸುವಂತೆ ಮಾಡಲಾಗಿದೆ. ಅದೇ ರೀತಿ, ಗುರುತಿಸಲು ಅಸಾಧ್ಯವಾಗಿರುವ ಸಮಾಜ ಘಾತಕರನ್ನು ತಡೆಹಿಡಿಯುವ ಮತ್ತು ದಂಡಿಸುವ ವಿಧಾನಗಳನ್ನು ರೂಪಿಸುವ ಬಗ್ಗೆ ಚಿಂತನೆ ನಡೆಸಬೇಕು. ಭೂಸೇನೆ, ನೌಕಾಬಲ ಮತ್ತು ವಿಮಾನ ಪಡೆಯನ್ನು ಸುವ್ಯವಸ್ಥಿತಗೊಳಿಸಿ, ಯಾವ ಸುಳಿವನ್ನೂ ಬಿಡದಂತೆ ಅಪರಾಧಗಳನ್ನು ನಡೆಸುತ್ತಿರುವವರನ್ನು ತಡೆಹಿಡಿಯಲು ಪ್ರಯತ್ನಿಸಬೇಕು. ಅಂತಾರಾಷ್ಟ್ರೀಯ ಪೋಲೀಸ್ ಸಂಸ್ಥೆಗಳಿಗೆ ಅತ್ಯಾಧುನಿಕ ತಂತ್ರವಿದ್ಯೆಯ ಬಳಕೆಯಲ್ಲಿ ತರಬೇತಿ ನೀಡಬೇಕು. ಅದಕಾರಣ ಈ ಹೊಸ ವಿಧವಾದ ಅಪರಾಧಿಗಳನ್ನು ಹಿಡಿಯಲು ಅನುಕೂಲಕರವಾಗುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತಿಯ ಏಕಾಂತ ಸ್ವಕೀಯತೆಯ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ರಾಷ್ಟ್ರೀಯ ಭದ್ರತೆಗೆ ಏರ್ಪಾಡು ಮಾಡುವುದರಿಂದ ಮಾತ್ರ ಗೋಳೀಯ ಶಾಂತಿ ಮತ್ತು ಭದ್ರತೆಗೆ ಪ್ರತಿಯೊಂದು ರಾಷ್ಟ್ರವೂ ನೆರವಾಗಬಹುದು. ವಿವಿಧ ರಾಷ್ಟ್ರಗಳ ನಡುವಿನ ಕೃತಕ ವರ್ಗೀಕರಣ ಕುಸಿದ ನಂತರ, ವಿಶ್ವಗ್ರಾಮ ಜೀವನ ಪ್ರಾರಂಭವಾಗುತ್ತದೆ. ಈ ನವೀನ ಬದುಕಿಗೆ ಹೊಂದಿಕೊಳ್ಳಲು ನಮ್ಮ ಜನರಿಗೆ ತರಬೇತಿ ನೀಡಲು ಶಿಕ್ಷಣ ವ್ಯವಸ್ಥೆ ಹಾಗೂ ಹೊರನೋಟವನ್ನು ಬದಲಾಯಿಸಬೇಕೆಂಬುದನ್ನು ಗಮನಿಸಬೇಕು. ಜನರ ಮಾನಸಿಕ ಪರಿವರ್ತನೆಯನ್ನು ತರುವುದರಿಂದ ಮಾತ್ರ ಅವರು ಭವಿಷ್ಯದ ಹೊಸ ಬದುಕಿಗೆ ಹೊಂದಿಕೊಳ್ಳಲು ಸಾಧ್ಯವಾಗುತ್ತದೆ.

ಕಡವೊ—ಮೂಲ್ಜಿ

ಸಿ. ನಾಗಣ್ಣ
ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು
ಮೈಸೂರು

ಮೂಲ್ಜಿ ಪಟೇಲ್ ವ್ಯವಹಾರಸ್ಥ; ಒಂದು ಬೀಡಾ–ಬೀಡಿ ಅಂಗಡಿ ಇಟ್ಟುಕೊಂಡಿದ್ದ. ತನ್ನ ಹಿರೀಕರಿಂದ ಬಂದಿದ್ದ ಮನೆ; ಆ ಮನೆಯ ಒಂದು ಕೊಠಡಿಯಲ್ಲಿ —ಬಜಾರಿಗೆ ಮುಖ ಮಾಡಿದಂತೆ—ಅವನ ಅಂಗಡಿ ಸ್ಥಾಪಿತವಾಗಿತ್ತು. ಇದರ ಜೊತೆಗೆ ಅವನು ಬೇರೆ ಒಂದು ಸೈಡ್-ಬಿಸಿನೆಸ್ ಕೂಡ ಮಾಡುತ್ತಿದ್ದ. ಅವರ ತಂದೆಗೆ ಧ್ವನಿವರ್ಧಕ ಮತ್ತು ಫೋನೊಗ್ರಾಫು ತಟ್ಟೆಗಳ ಸಹವಾಸವಿತ್ತು. ಅವರು ಮೂಲ್ಜಿಗೆ ಈ ಹಳೆಯ ಉಪಕರಣವನ್ನು ಬಳುವಳಿಯಾಗಿ ಬಿಟ್ಟುಹೋಗಿದ್ದರು. ಇದನ್ನಂತೂ ಹೇಗಾದರೂ ಮಾಡಿ ಉಪಯೋಗಿಸಬೇಕಾಗಿತ್ತು. ಮೂಲ್ಜಿ ಹಳ್ಳಿಗಳಲ್ಲಿ ಮದುವೆ ಸಮಾರಂಭಗಳಾಗುವಾಗ ತನ್ನ ಲಡಕಾಸಿ ಧ್ವನಿವರ್ಧಕ ಮತ್ತು ಹಾಡಿನ ತಟ್ಟೆಗಳನ್ನು ಬಾಡಿಗೆಗೆ ಕೊಡಲು ಪ್ರಾರಂಭಿಸಿದ. ಆದರೆ ಮೂಲ್ಜಿಗೆ ತನ್ನ ಅಂಗಡಿಯದೆ ಚಿಂತೆ. ವಿದ್ಯುತ್ ಉಪಕರಣಗಳು ಹೇಗೆ ಕೆಲಸ ಮಾಡುತ್ತವೆಯೆಂದು ಅವನಿಗೆ ಸುತರಾಂ ಗೊತ್ತಿರಲಿಲ್ಲ. ತನ್ನ ತಂದೆಯಿಂದ ಬಳುವಳಿಯಾಗಿ ಬಂದಿರುವ ಈ ಸಲಕರಣೆಯಿಂದ ಒಂದು ನಾಲ್ಕು ಕಾಸು ಸಂಪಾದನೆ ಮಾಡಬೇಕೆಂಬ ಆಸೆಯೇನೋ ಇತ್ತು, ಆದರೆ ಆದರ ಉಸ್ತುವಾರಿಗಾಗಿ ನಿರುದ್ಯೋಗಿಯಾದ ಒಬ್ಬ ಹವ್ಯಾಸಿ ಎಲೆಕ್ಟ್ರಿಷಿಯನ್‌ನ ಅಗತ್ಯವಿತ್ತು. ಸಾಮಾನ್ಯವಾಗಿ ಉಳಿದ ಪಟ್ಟಣಗಳಲ್ಲಿ ಸಿಕ್ಕುವಂತೆ ಆ ಊರಿನಲ್ಲೂ ಸಹ ಈ ಕೆಲಸಕ್ಕೆ ಲಾಯಕ್ಕಾದ ಒಬ್ಬ ಆಸಾಮಿ ಸಿಕ್ಕಿದ.

ಕಡವೊ ಎಂಬ ಕೋಲಿ ಬುಡಕಟ್ಟಿಗೆ ಸೇರಿದ ಆ ಯುವಕ ಐದನೇ ಈಯತ್ತೆಯವರಗೆ ಓದಿ ಮಂಗಳ ಹಾಡಿದ್ದ. ತನ್ನ ವಿದ್ಯೆಯ ಬಗ್ಗೆ ಅವನಿಗೆ ಜಂಭವಿತ್ತು. ಫಿಲವರ್–ಗಿಲವರ್ ಬಗ್ಗೆ ಮಾತನಾಡುತ್ತಿದ್ದ. ಜೇಬಿನಲ್ಲಿ ಯಾವಾಗಲೂ ಒಂದು ಬಾಚಣಿಗೆ ಮತ್ತು ಒಂದು ಬಾಲ್ ಪಾಯಿಂಟ್ ಪೆನ್ನು ಇಟ್ಟುಕೊಂಡು ನೋಡಿದವರಿಗೆ ತಾನು ವಿದ್ಯಾವಂತನೆಂದು ತಿಳಿಸುವುದರಲ್ಲಿ ಅವನಿಗೆ ಖಯಾಲಿ. ಅಕ್ಕಪಕ್ಕ ಯಾರಾದರೂ ಕಂಡರೆ ಅವರ ಗಮನ ಸೆಳೆಯುವುದಕ್ಕಾಗಿ ವೃತ್ತಪತ್ರಿಕೆ ಓದುವವನ ಹಾಗೆ ನಟಿಸುವನು. ಅವನ

ಗುಜರಾತಿ ಮೂಲ: ಜನಕ್ ತ್ರಿವೇದಿ. ಇಂಗ್ಲಿಷ್ ಅನುವಾದ—ಸರಳಾ ಜಗ್‌ಮೋಹನ್.

ಹಣಕಾಸಿನ ಪರಿಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ಕಷ್ಟಪಡುವ ಹುಡುಗನೇ. ತನ್ನ ಅಂತಸ್ತು ಕಾಪಾಡಿಕೊಳ್ಳಬೇಕೆಂಬ ತವಕವಿದ್ದವ. ಕೂಲಿ ಕೆಲಸವಾದರೂ ಸರಿಯೇ ಪ್ರೀತಿಯಿಂದ ಮಾಡುತ್ತಿದ್ದ; ಆದರೆ ತಾನು ಕಲಿತವನಾದ್ದರಿಂದ ಇತರೆ ಕೂಲಿಯವರಿಗಿಂತ ತಾನು ಮೇಲು ಎಂದು ಅವನಿಗೆ ಅನ್ನಿಸಿತ್ತು. ಎಷ್ಟೇ ಹೆಚ್ಚು ಮಜೂರಿ ಕೊಡಲಿ ತಾನು ಕೇವಲ ಕೂಲಿಯವನು ಅಂತ ಮಂದಿ ತಿಳಿಯಬಾರದೆಂಬುದು ಅವನ ನಿರೀಕ್ಷೆ. ತನ್ನ ವಿದ್ಯೆಯ ಬಗ್ಗೆ ಅಷ್ಟು ಅಭಿಮಾನ ಹೊಂದಿದ್ದ ಕಡವೊ ತಾನು ಯಾರನ್ನು ತುಚ್ಛವಾಗಿ ಕಾಣುತ್ತಿದ್ದನೋ ಅವರ ಮುಂದೆಯೇ ಕೈಯೊಡ್ಡಿ ನನಗೆ ಕೆಲಸ ಕೊಡಿ ಎಂದು ಕೇಳುತ್ತಾನೆಯೇ? ಹಾಗಾಗಿ ಕಡವೊ ಯಾವಾಗಲೂ ತನ್ನ ಸ್ವಾಭಿಮಾನಕ್ಕೆ ಅಂಟಿಕೊಂಡ; ಕೆಲಸವಿಲ್ಲದೇ ಅಂಡಲೆಯುತ್ತಿರುವ ಇವನ ಅಂತರಂಗ ಹೇಗೋ ಮೂಲ್ಜಿಗೂ ತಿಳಿದಿತ್ತು.

ಕಡವೊ ಕೊಂಚ ಎಲೆಕ್ಟ್ರಿಕ್ ಕೆಲಸ ಕಲಿತುಕೊಂಡಿದ್ದ— ಫ್ಯೂಸ್ ರಿಪೇರಿ ಮಾಡುವುದು, ಪಿನ್ನುಗಳನ್ನು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಸಿಕ್ಕಿಸುವುದು, ವೈರುಗಳನ್ನು ಜಂಟಿಸುವುದು—ಇತ್ಯಾದಿ. ಇಷ್ಟು ಜ್ಞಾನದಿಂದಲೇ ತಾನೊಬ್ಬ ನುರಿತ ಎಲೆಕ್ಟ್ರಿಷಿಯನ್ ಅಂತ ಬೇರೆಯವರಿಗೆ ಅನ್ನಿಸಬೇಕೆಂದು ಬಹಳ ಪ್ರಯಾಸ ಪಡುತ್ತಿದ್ದ. ತನ್ನ ಸೈಡ್-ಬಿಸಿನೆಸ್‌ಗಾಗಿ ಮೂಲ್ಜಿ ಕಡವೊನನ್ನ ಹಿಡಿದುಕೊಂಡ.

ಮದುವೆ ಸಮಾರಂಭಗಳು, ಚುನಾವಣಾ ಸಭೆಗಳು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಅಥವಾ ಇತರೆ ಗಣ್ಯರ ಭಾಷಣಗಳಿಗೆ ಧ್ವನಿವರ್ಧಕದ ಬೇಡಿಕೆ ಹೆಚ್ಚಾಗತೊಡಗಿತ್ತು. ಆದರೆ ಆ ಉಪಕರಣದ ಜಟಿಲವಾದ ರೀತಿರಿವಾಜುಗಳನ್ನು ಅರಿತುಕೊಂಡು ಆ ಪ್ರಕಾರವಾಗಿ ಅದನ್ನು ಸುಲಲಿತವಾಗಿ ನಡೆಸುವ ರೀಜಿಗೆ ಮೂಲ್ಜಿಗೆ ಹಿತವಾಗಿರಲಿಲ್ಲ. ಜೊತೆಗೆ ಈ ಸೈಡ್-ಬಿಸಿನೆಸ್‌ನ ಕಡೆ ಗಮನ ಕೊಟ್ಟು ತನ್ನ ಅಂಗಡಿ ವ್ಯವಹಾರವನ್ನು ಕಡೆಗಣಿಸುವಂತಿರಲಿಲ್ಲ. ಹಾಗಾಗಿ ನಿರುದ್ಯೋಗಿ ಕಡವೊನನ್ನು ಹೇಗಾದರೂ ಮಾಡಿ ಬಲೆಗೆ ಹಾಕಿಕೊಳ್ಳಬೇಕೆಂದು ಯೋಚಿಸಿದ.

ವಾಸ್ತವವಾಗಿ ದಿನಂಪ್ರತಿ ಮೂಲ್ಜಿ ಅಂಗಡಿಯ ಮುಂದೆ ಕಡವೊ ಕನಿಷ್ಠ ಪಕ್ಷ ಎರಡು-ಮೂರು ಸಲವಾದರೂ ಅಡ್ಡಾಡುವುದು ರೂಢಿಯಾಗಿತ್ತು. ಮೂಲ್ಜಿ ಅವನನ್ನು ಗಮನಿಸುತ್ತಿದ್ದಂತೆಯೇ ಒಮ್ಮೆ ಅವರ ದೃಷ್ಟಿ ಸಂಧಿಸಿದುವು.

ಪಾನ್‌ಬೀಡಾ ಕಟ್ಟುತ್ತಾ ಮೂಲ್ಜಿ 'ಬಾ ಕಡವೊ ಬಾ' ಅಂತ ಕರೆದ. 'ಏನು ಇತ್ತಿತ್ತಲಾಗಿ ಕಾಣ್ತಾನೇ ಇಲ್ಲ?'

ಹೆಕ್ಕತ್ತಿನ ಸುತ್ತಾ ಹರಡಿಕೊಂಡಿದ್ದ ಹಿಂದಕ್ಕೆ ಬಾಚಿದ ತನ್ನ ನೀಳವಾದ ಕೂದಲನ್ನೂ, ಹುರಿಮಾಡಿದ ಕೊನೆ ಮೀಸೆಯನ್ನೂ ಮೂಲ್ಜಿ ಅಂಗಡಿಯ ಗೋಡೆಗೆ ನೇತು ಹಾಕಿದ ಕನ್ನಡಿಯಲ್ಲಿ ನೋಡಿಕೊಳ್ಳುವುದೆಂದರೆ ಕಡವೊಗೆ ಬಲು ಇಷ್ಟ. ಆ ಕಾರಣಕ್ಕಾಗಿ ಅವನು ಆ ಅಂಗಡಿಯ ಮುಂದೆ ಆಗಾಗ ನಿಲ್ಲುತ್ತಿದ್ದ.

ಅಂಗಡಿಯಲ್ಲಿ ಗಿರಾಕಿಗಳು ಇದ್ದ ಸಮಯದಲ್ಲಿ ಒಂದು ನಮೂನೆಯಲ್ಲಿ ವರ್ತಿಸುತ್ತಾ ಮೂಲ್ಜಿ ಮಾತನಾಡದೆ ಮೌನ ತಾಳುವನು. ಆದರೆ ಒಳಗೊಳಗೇ

ಕಡವೊನ ಅಸಹಾಯಕ ಸ್ಥಿತಿಯನ್ನೂ ಗಮನಿಸುವನು ಗಿರಾಕಿಗಳು ಹೊರಡುತ್ತಿದ್ದಂತೆಯೇ ಕಡವೊ ನಿಂತಿರುವುದನ್ನು ಆಗಷ್ಟೇ ಗಮನಿಸಿದವನಂತೆ ಗಕ್ಕನೆ ಮೂಲ್ಜಿ, 'ಕಡವೊ ಭೈ, ನೀನು ನಿಂತುಕೊಂಡದ್ದು ಗೊತ್ತಾಗ್ಲೇಯಿಲ್ಲ' ಎನ್ನುವನು. 'ಇಲ್ಲೇ ಇದ್ದೀನಿ' ಅಂತ ಕಡವೊ ಉತ್ತರಿಸುವನು. 'ಆದ್ರೆ ನೀನು ಮೊದ್ಲು ಗಿರಾಕಿಗೊಳ್ನ ವಿಚಾರಿಸ್ಬೇಕಲ್ಲ.' ಇಷ್ಟೇ ಸೂಚನೆ ಸಾಕಾಗಿ ಮೂಲ್ಜಿ ಕಡವೊನನ್ನು ಮೇಲಕ್ಕೆ ಕರೆಯುವನು. 'ಒಂದು ಬೀಡಾ ಹಾಕಲ್ವ?' ಮೂಲ್ಜಿಯ ಆತ್ಮೀಯತೆಗೆ ಕಡವೊ ಕರಗಿಹೋಗುವನು. ಅಂಥ ಕಡವೊನನ್ನು ಒಂದು ದಿನ ಮೂಲ್ಜಿ ಕೇಳಿದ, 'ಹೇಗಿದೆ ನಿನ್ನ ವ್ಯವಹಾರ?'

'ವ್ಯವಹಾರವೂ ಇಲ್ಲ ಗಿವಾರನೂ ಇಲ್ಲ! ಸುಮ್ನೆ ಅಕ್ಕಡೆ ಇಕ್ಕಡೆ ಅಡ್ಡಾಡ್ಕಂಡು ಇದ್ದೀನಿ!'

'ಯಾಕೊ ಹಂಗೇ ಆಗದೇಳು' ಎಂದು ಹೇಳುತ್ತಾ ಮೂಲ್ಜಿ ಕಡವೊಗೆ ಒಂದು ಚಾರ್‌ಮಿನಾರ್ ಸಿಗರೇಟು ಕೊಟ್ಟ. ಮೂಲ್ಜಿಯ ಒಳ್ಳೆಯ ತನಕ್ಕೆ ಕಡವೊನ ಹೃದಯ ತುಂಬಿ ಬಂದಿತು.

ಆ ಕ್ಷಣದಲ್ಲಿ ಮೂಲ್ಜಿ ಮಾತು ಪ್ರಾರಂಭಿಸಿ 'ಹಂಗಾದ್ರೆ ಈಗ ನೀನು ಪುರಸೊತ್ತಾಗಿದ್ದೀಯೆ ಅನ್ನು?' ಅಂದ. ಕಡವೊ ಪುರಸೊತ್ತಾಗಿರುವ ಸಂಗತಿಯನ್ನು ಆಗ ತಾನೆ ಕಂಡವನಂತೆ ಬಹಳ ಚಮತ್ಕಾರದಿಂದ ಮೂಲ್ಜಿ ಪ್ರಶ್ನಿಸಿದ.

'ಪುರಸೊತ್ತಾಗಿದ್ದೀನಿ! ಕೆಲ್ಸ ಗಿಲ್ಸ ಏನೂ ಇಲ್ಲ! ನನಗ್ಯಾತರ ಚಿಂತೆ ಏಳು?' ಹಾಗೆಂದು ಕಡವೊ ನಕ್ಕ.

'ಕಡವೊ, ಯಾವಾಗ್ಲಾದ್ರೂ ನಂದರಾಖಿಗೆ ಹೋಗಿದ್ದೀಯಾ?'

'ಹೋಗಿದ್ದೀನಿ. ತುಂಬಾ ಸರ್ತಿ! ಪುಂಜಾ ಬೆಹನ್‌ಳ ಸ್ನೇಹಿತ ಮನೋಜ್ ಭಾಯ್ ಒಂದ್ಸಲ ಬಾ ಕಡವೊ ಭೈ ಅಂದ ಅವನ ಜೊತೆಗೋಗಿದ್ದೆ! ಭಾಳಾ ಚಂದಾಗಿತ್ತು ನಂದರಾಖಿ. ಅದ್ಸರಿ ಈಗೇನು ವಿಷ್ಯಾ?'

'ಏನಿಲ್ಲ, ಈಗ ನಂದರಾಖಿಗೆ ಹೋಗ್ತೀಯೇನು? ಒಳ್ಳೆ ಛಾನ್ಸ ನೋಡು', ಅಂತ ಮೂಲ್ಜಿ ಕಡವೊ ಮುಂದೆ ಆಮಿಷ ಒಡ್ಡಿದ.

'ಹೋಗ್ದೆ ನಾನು ಇಲ್ಲೇನು ಕಡಿಯೋದೈತೆ? ನನಗ್ಯಾವ ಉಸಾಬರಿ ಏಳು? ಯಾವಾಗ ಬೇಕಾದ್ರೂ ಏಳು ಓಡ್ತೀನಿ.'

'ಅಲ್ಲಿ ರಿಕಾರ್ಡ್ ಹಾಕಕ್ಕೆ ಒಂದು ಆಡ್ರು ಬಂದೈತೆ. ನೀನು ಲೌಡ್‌ಸ್ಪೀಕರ್ ತಕ್ಕಂಡು ಹೋಗ್ಬೇಕು. ಕಾನಬಿ ಹುಡುಗೀರ ಮದ್ವೆ ಗಳವೆ. ಹೋಗ್ತೀಯೇನು?'

'ಓಡ್ತೀನಿ ತಕೋ. ಹೆಂಗೂ ಹೊತ್ತೋಗ ಬೇಕಲ್ಲ?'

ದಿನಕ್ಕೆ ಹತ್ತು ರೂಪಾಯಿನಂತೆಯೂ ಹಾಗೂ ಎರಡೂ ಕಡೆ ಬಸ್ ಟಿಕೇಟಿಗೆ ಅಂತ ಹತ್ತು ರೂಪಾಯಿ ಅಂತಲೂ ಮಾತಾಯಿತು. ತದನಂತರ ಲೌಡ್‌ಸ್ಪೀಕರು ಹಾಗೂ ಹಾಡಿನ ತಟ್ಟೆಗಳನ್ನು ಅವನ ಕೈಗೆ ಕೊಟ್ಟು ನಾಳೆ ಬೆಳಗಾಗುವುದರೊಳಗಾಗಿ ಅಲ್ಲಿರಬೇಕು ಎಂದು ತಿಳಿಸಿದ.

ಕಡವೊನ ಆನಂದಕ್ಕೆ ಪಾರವೇ ಇರಲಿಲ್ಲ. ತನ್ನ ಘನತೆಗೆ ತಕ್ಕ ಉದ್ಯೋಗ ಇದು ಎಂದು ಅವನಿಗೆ ಅನ್ನಿಸಿತ್ತು. ಇದಕ್ಕಿಂತ ಕಡಿಮೆ ಗಳಿಸಿದರೆ ಏನು ಸುಖ? ಗಣ್ಯರಾದವರು ತನ್ನನ್ನು ಗಮನಿಸಿದರೆ ಈ ಹುಡುಗ ಒಳ್ಳೆ ಉದ್ಯೋಗದಲ್ಲಿದ್ದಾನೆ ಅಂದುಕೊಳ್ಳು

ತ್ತಾರೆ. ಇದರ ಜೊತೆಗೆ ಬೇರೆ ತರಹದ ಆಮಿಷಗಳೂ ಇದ್ದವು. ಮದುವೆ ಸಮಾರಂಭವಾದ್ದರಿಂದ ಒಳ್ಳೆ ಊಟ ಸಿಕ್ಕುವುದಿತ್ತು. ಅನ್ನ ಮತ್ತು ಸಾಂಬಾರು ಅಂದ್ರೆ ಕಡಪ್ಪೊಗೆ ಪ್ರಾಣ. ಒಂದೆರಡು ದಿನಗಳ ಮಟ್ಟಿಗಾದ್ರೂ ಖುಷಿಯಾಗಿರಬಹುದು ಅಂದುಕೊಂಡ. ಅವನು ಕಳಕೊಳ್ಳಬೇಕಾದದ್ದು ತಾನೆ ಏನಿದೆ? ದಿನಕ್ಕೆ ಹತ್ತು ರೂಪಾಯಿ, ಬಸ್ ಚಾರ್ಜಿಗೆ ಕಾಸು ಜೊತೆಗೆ ತಿನ್ನುವಷ್ಟು ಲಾಡು! ಆಮೇಲೆ ಅಂದವಾಗಿರುವವರು ಯಾರಾದ್ರೂ ಕಣ್ಣಿಗೆ ಬಿದ್ದೇ ಬೀಳ್ತಾರೆ. ಅಂದವಾಗಿರುವವರು ಅಂದುಕೊಳ್ಳುವಾಗ ಅವನ ಅಂತರಂಗದೊಳಗೆ ಬೇರೆ ಬೇರೆ ಅರ್ಥಗಳು ಸುಳಿದಾಡತೊಡಗಿದವು. ಹೆಂಗೆಳೆಯರಿಗೆ ಪ್ರಿಯವಾದ ಹಾಡುಗಳನ್ನು ಹಾಕಿದರೆ ತಾವು ಹಾಡುತ್ತಿದ್ದ ಸೋಬಾನೆ ಪದಗಳನ್ನು ಗಕ್ಕನೆ ನಿಲ್ಲಿಸಿ ಧ್ವನಿವರ್ಧಕದ ಹಾಡುಗಳಿಗೆ ಕಿವಿ ನಿಮಿರಿಸುವಾಗ ಕಡಪ್ಪೊಗೆ ಸುಂದರವಾದ ಕಲ್ಪನಾಲೋಕಕ್ಕೆ ಜಾರಲು ಅವಕಾಶ ಒದಗುತ್ತದೆ....ರಹಸ್ಯವಾಗಿ ಮುಗುಳ್ನಗೆಯನ್ನು ವಿಲೇವಾರಿ ಮಾಡಿಕೊಂಡು, ಮದುವೆ ದಿಬ್ಬಣದವರು ಹೊರಟುನಿಂತಾಗ ಹೂ ಬಿಡಿಸಿದ ಕರವಸ್ತ್ರವನ್ನು ಗಾಳಿಯಲ್ಲಿ ಅಲೆಯಾಡಿಸುವ ಹೆಂಗೆಳೆಯರಿಗೆ ವಿದಾಯ ಹೇಳಬೇಕಾಗುತ್ತದೆ; ಆದರೆ ಅದಿನ್ನೂ ವಾಸ್ತವದಲ್ಲಿ ಘಟಿಸಿಲ್ಲ. ಪ್ರೇಮದ ಮಾರ್ಗದಲ್ಲಿ ಕಡಪ್ಪೊ ಬಹಳ ದೂರ ಮುಂದುವರಿಯಲಾರ, ಕಾರಣ ಪ್ರೀತಿಸಿದ ಹುಡುಗಿಗೆ ನೋವಾಗಬಹುದು, ಜೊತೆಗೆ ತನ್ನ ಹೆಸರೂ ಕೆಡುತ್ತದೆ! ಶಿಕ್ಷಣದಿಂದ ಬರುವ ಕೆಲವು ಸೂಕ್ಷ್ಮತೆಗಳು ಕಡಪ್ಪೊಗೆ ರಕ್ತಗತವಾಗಿದ್ದವು. ಅಂತರಂಗದ ತುಡಿತವನ್ನು ಬಹಿರಂಗವಾಗಿ ಪ್ರಕಟಿಸಬಾರದು. ಒಳಗೆ ಕುದಿಯೊಡೆದ ಆಸೆಯನ್ನು ಒಳಗೆ ಒಸಕಿಹಾಕಿದ—ಇದೆಲ್ಲಾ ನಡೆದದ್ದು ಮನಸ್ಸಿನ ರಂಗಸ್ಥಳದಲ್ಲಿ.

ಕಡಪ್ಪೊ ಇನ್ನೊಂದು ವಿಷಯದ ಬಗ್ಗೆ ಯೋಚಿಸಿದ್ದ. ಜನಭರಿತವಾದ ಮದುವೆ ಸಮಾರಂಭದಲ್ಲಿ ಕೆಲವರು ಗಣ್ಯರು ಮುಂದಿನ ಸಾಲಿನಲ್ಲಿ ಕುಳಿತ ಸನ್ನಿವೇಶ ನೋಡಿ ಅವರಿಗೆ ಕಾಣುವಂತೆ ಅಲ್ಲಿ ಇಲ್ಲಿ ವಿದ್ಯುತ್ ವೈರುಗಳನ್ನು ಜಂಟಿ ಮಾಡಿ, ಹಳೆಯದಾದ ಆ ಅಂಪ್ಲಿಫೈಯರ್‌ನೊಳಕ್ಕೆ ಒಂದೆರಡು ಪಿನ್ನು ಹಾಕಿ, ಕೆಲವು ಸ್ವಿಚ್ಚುಗಳನ್ನು ಒಂದೆರಡು ಬಾರಿ ಆನು ಆಫು ಮಾಡಿ ಎಲ್ಲರೂ ಆಶ್ಚರ್ಯಗೊಂಡು ತನ್ನತ್ತ ನೋಡುವಾಗ ಧ್ವನಿವರ್ಧಕವನ್ನು ಸ್ವಲ್ಪ ಲಘುವಾಗಿ ಕುಟ್ಟಿ ಒಂದೈದಾರು ಸಲ "ಹಲೋ, ಹಲೋ!" ಅನ್ನಬೇಕು ಅಂದುಕೊಂಡ. ಅವನ ಲೆಕ್ಕಾಚಾರದಂತೆಯೇ ಕೆಲವರು ಅಂದವಾದವರು ಅವನನ್ನು ಗಮನಿಸಿ ಅವನಿಗೆ ಅನಂತಾನಂದವಾಗಿತ್ತು ಕೂಡ.

ಮೂರನೇ ದಿನ ಮೂಲ್ಜಿ ಭ್ಯಾ ಹೇಳಿದ್ದ ಊರಿಗೆ ಲೌಡ್‌ಸ್ಪೀಕರು, ಆಂಪ್ಲಿಫೈಯರು ಇತ್ಯಾದಿ ಪರಿಕರಗಳನ್ನೆಲ್ಲಾ ತೆಗೆದುಕೊಂಡು ಕಡಪ್ಪೊ ಸಮಯಕ್ಕೆ ಸರಿಯಾಗಿ ಹೋದ.

ಅಲ್ಲಿ ಆ ಆಂಪ್ಲಿಯರ್ ಹೇಗೆ ಕೆಲಸ ಮಾಡುತ್ತದೆ ಎನ್ನುವ ಸೂಕ್ಷ್ಮಾತಿಸೂಕ್ಷ್ಮ ವಿವರಗಳೆಲ್ಲಾ ತನಗೆ ಗೊತ್ತು ಎನ್ನುವಂತೆ ಕಡಪ್ಪೊ ಮೂಲ್ಜಿಯನ್ನೇ ಪಕ್ಕಕ್ಕೆ ತಳ್ಳಿ ತಾನೇ ಅವನ ಸ್ಥಾನ ಅಲಂಕರಿಸಿದ. ವೋಲ್ಟೇಜು ಹೆಚ್ಚಿದ್ದರೆ ಒಂದು ಸ್ವಿಚ್ಚು ಒತ್ತಬೇಕು; ವೋಲ್ಟೇಜು ಕಡಿಮೆ ಇದ್ದರೆ

ಇನ್ನೊಂದು ಉಕ್ಕಿನ ಸ್ವಿಚ್ಚು ಒತ್ತಬೇಕು. ಧ್ವನಿ ಹೆಚ್ಚು ಮಾಡಬೇಕಂದ್ರೆ ಗುಬ್ಬಿಯನ್ನು ಅವಸರವಾಗಿ ತಿರುಗಿಸಬಾರದು. ಹೀಗೆ ನಿಧಾನವಾಗಿ ತಿರುಗಿಸಬೇಕು; ಅದಕ್ಕೇ ಯಾವಾಗ್ಲೂ ಆವುಜಾ (ಆಹುಜಾ) ಸೆಟ್ಟೇ ಉತ್ತಮ. ಇದರ ಮುಂದೆ ಉಳಿದವು ತಗಡು ಅಂತ್ಲೇ ಅನ್ನಬೇಕು. ಇದು ಇಂಗ್ಲೆಂಡಿನದು ಅಂತ ನಿನಗ ಗೊತ್ತಾ, ಅಪ್ಪಾ ಇದನ್ನ ಬೊಂಬಾಯಿಗೆ ಓಗಿದ್ದಾಗ ತಂದರು. ಅವರು ಯಾರ ಅಪ್ಪ ಅಂತ ಮೂಲ್ಜಿ ಸ್ಪಷ್ಟ ಪಡಿಸಲಿಲ್ಲ. ಮೂಲ್ಜಿಯೇ ತನ್ನೊಳಗೆ ಸೇರಿಕೊಂಡಿರುವಾಗ ಇದನ್ನು ಮೂಲ್ಜಿಯ ಅಪ್ಪ ಬೊಂಬಾಯಿಯಿಂದ ತಂದರು ಎಂದು ಹೇಳುವ ಅವಶ್ಯಕತೆ ಯಾದ್ರೂ ಏನು? ಹಾಗಾಗಿ ಇದು ತಲೆತಲಾಂತರದಿಂದ ನಡೆದು ಬಂದಿರುವ ಬಿಸಿನೆಸ್ಸು ಅಂತ ಮಾತ್ರ ಹೇಳುವನು. 'ಇಂಥ ಪೀಕರ್‌ಗೊಳ್ನ ನೀನು ನೋಡೇ ಇಲ್ಲ ತಮ್ಮಾ! ಈ ಪೀಕರ್ ಹತ್ರ ಒಂದು ಸೊಳ್ಳೆ ಗುಂಯೆಂದ್ರೂ ಒಳ್ಳೆ ಆಕಾಶಬುಟ್ಟಿ ಮೊರೆದಂಗೆ ಶಬ್ದ ಬತ್ತದೆ. ತಿಳೀತಾ ನಾ ಹೇಳದು?' ಹಳ್ಳಿಯವರು ಕಡವೊನ ಅಪಾರವಾದ ಜ್ಞಾನವನ್ನು ಕಂಡು ಬೆರಗಾಗುತ್ತಾ ಗೊತ್ತಾಯ್ತು ಎಂದು ತಲೆ ಯಾಡಿಸಿ ಕೇಳುವರು: 'ನೀ ಎಂಥ ಮಾತ ಹೇಳಿದಿ ಕಡವಭ್ಯಾ!'

ಯಾರಾದರೂ ಈ 'ಲೌಸ್'ಗೆ ಎಷ್ಟಾಗುತ್ತೆ, ಎಲ್ಲಿ ಸಿಗುತ್ತೆ ಎಂದು ಕೇಳಿದರೆ ಸಾಕು ಆಂಪ್ಲಿಫೈಯರ್‌ನ ಪಂಚಾಂಗವೆಲ್ಲಾ ತನಗೆ ಕರತಲಾಮಲಕ ಅನ್ನುವಂತೆ ವಿವರ-ವಿವರವಾಗಿ ಬಿಡಿಸಿ ಹೇಳುವನು. "'ಪೀಕರ್' ಕೆಟ್ಟು ಹೋದ್ಮ್ಯಾಲ ಜುನಾಗಡಕ್ಕ ಹೋಗಿ ತರಾನ ಅಂತ ಮೂಲ್ಜಿ ಏಳಿದ್ರು, ಅದಕ್ಕೆ ನಾನು ನಿಮಗೆ ಒಳ್ಳೆ ಪೀಕರ್ ಬೇಕೊಂದ್ರೆ ರಾಜಕೋಟ್‌ಗ ಓಗಿ ತನ್ನಿ ಎಂದೆ. ಇಲ್ಲದೇ ಇದ್ರೆ 'ಅಮ್ಮದಾಬಾದ್'ನಲ್ಲಾದ್ರೂ ತನ್ನಿ ಎಂದೆ. ಆವುಜಾ ಸೆಟ್ಟಾದ್ರೆ ಇಪ್ಪತ್ತರಿಂದ ಇಪ್ಪತ್ತೈದು ರೂಪಾಯಿಗಂಟ ಕಡಿಮೆ ಬೀಳ್ತದೆ. ಹಾಗಾಗಿ ನಾನು ಕಡೆಗೆ ರಾಜಕೋಟಲ್ಯ ಹೋಗಿ ತಂದೆ." ಈ ರೀತಿಯಾಗಿ ಕಡವೊ ಮೂಲ್ಜಿಯ ಆಂಪ್ಲಿಫೈಯರ್ ತಜ್ಞರ ಪಾತ್ರ ವಹಿಸಿಕೊಂಡಿದ್ದ. ಆದರೆ ಮೂಲ್ಜಿಯ ಸುಳಿವು ಮಾತ್ರ ಅಲ್ಲೆಲ್ಲೂ ಇರಲಿಲ್ಲ.

ಸಿಸ್ತುಗಾರ ಪುಟ್ಟಸ್ವಾಮಿಯಾದ ಕಡವೊ ಕಾನಬಿ ಹುಡುಗಿಯರ ಅಂತರಂಗವನ್ನು ಚೆನ್ನಾಗಿ ಬಲ್ಲವನಾಗಿದ್ದ; ನಿಜವಾದ ರಸಿಕ ಅಂತ ಬೇಕಾದರೂ ಕರೆಯಬಹುದು. ಆದರೆ ಕೆಟ್ಟದಾಗಿ ಆಲೋಚಿಸುವ ರೀತಿ ಅವನದಾಗಿರಲಿಲ್ಲ. ಏನೇ ಮಾಡಿದರೂ ಅದರಲ್ಲಿ ಘನತೆಯಿರಬೇಕೆಂಬುದು ಅವನ ಕುರುವಾಗಿತ್ತು. ಹಳೆ ರಿಕಾರ್ಡುಗಳಲ್ಲಿ ಪಿನ್ನು ನಿಂತಲ್ಲೇ ನಿಂತು ಬಿಟ್ಟು ಫಜೀತಿಯಾಗುವುದರಿಂದ ಅವಕ್ಕೆ ಬದಲಾಗಿ ಮೆಲ್ಲಗೆ ತನ್ನ ಬಳಿ ಇದ್ದ ಹೊಸ ರಿಕಾರ್ಡು ಹಾಕುವನು. 'ನಾಗಿನ್' ಸಿನೇಮಾದ 'ಮನ್ ಡೋಲೆ, ಮೆರಾ ತನ್ ಡೋಲೆ, ಮೆರಾ ದಿಲ್‌ಕ ಗಯಾ ಕರಾರ್ ರೆ' ('ನನ್ನ ಮನಸ್ಸು ಓಲಾಡುತ್ತಿದೆ, ನನ್ನ ದೇಹ ಓಲಾಡುತ್ತಿದೆ, ನನ್ನ ಮನಸ್ಸಿಗಿನ್ನೆಲ್ಲಿಯ ಶಾಂತಿ') ಎಂಬ ಹಾಡು ಹಾಕಿದ ಕೂಡಲೇ ಮದುವೆ ಮಂಟಪದಲ್ಲಿ ಹಾಡುತ್ತಿದ್ದ ತಮ್ಮ ಹಾಡನ್ನು ಹೆಂಗೆಳೆಯರು ತಟ್ಟನೆ ನಿಲ್ಲಿಸಿದರು. ಆ ಕ್ಷಣದಲ್ಲಿ ಹುಡುಗಿಯರು ತಮ್ಮತಮ್ಮಲ್ಲೆ ಕೇಳ್ದೇನೇ ಆ ಹಾಡನ್ನ 'ಮನ್ ಡೋಲೆ, ಮೆರಾ ತನ್

ಡೋಲೆ....' ಎಂದುಕೊಂಡು ಪರಸ್ಪರರನ್ನ ಛೇಡಿಸುವ ಸಮಯಕ್ಕೆ ಸರಿಯಾಗಿ ಆ ರಿಕಾರ್ಡನ್ನು ತೆಗೆದು ಬೇರೆ ಯಾವುದೋ ಕೆಲಸಕ್ಕೆ ಬಾರದ ಹಾಡನ್ನು ಹಾಕುವನು. ಅದರ ಪ್ರತಿಕ್ರಿಯೆಗಾಗಿ ಕಾಯುತ್ತಾ ಕ್ಯಾವೆಂಡರ್ ಸಿಗರೇಟ್ ಹೊತ್ತಿಸಿ ದಮ್ಮು ಎಳೆಯುತ್ತಾ ಕೂರುವನು.

ತಕ್ಷಣವೇ ಒಂದೆರಡು ಬಜಾರಿ ಹುಡುಗಿಯರು ಕಡವೊ ಹತ್ತಿರ ಓಡಿ ಬಂದವು; ಅವರ ಲಂಗದ ಮೇಲೆ ಗಿಳಿ, ನವಿಲುಗಳ ಚಿತ್ರ, ರೇಶ್ಮೆ ದಾರದಲ್ಲಿ ಹೂವಿನ ದಳಗಳು ಮತ್ತು ಕನ್ನಡಿಯನ್ನು ಕಸೂತಿಯಲ್ಲಿ ಹೊಲೆದಿದ್ದರು. ಅವರನ್ನು ಕಂಡು ಬಹಳ ಗಂಭೀರವಾದವನ ಹಾಗೆ ಕಡವೊ ನಟಿಸಿದ. ವಾಸ್ತವವಾಗಿ ಇಂಥ ಕ್ಷಣಕ್ಕಾಗಿಯೇ ಅವನು ಕಾಯ್ದಿದ್ದ. ಎತ್ತರದ ದನಿಯಲ್ಲಿ 'ಕಡವಭ್ಯಾ, ಯಾಕ ನೀನು ಹೀಂಗ ನಮ್ಮನ್ನ ಗೋಳೂಯ್ಕಂಡೀಯು? ನಿನ್ನ ತಾವ ಇರಾದು ಒಂದೇ ಒಂದು ಒಳ್ಳೆ ರಿಕಾರ್ಡ್ರ, ಅದನ್ನೂ ಕೂಡ ನೀನು ಪೂರ್ತಿ ಹಾಕದಿಲ್ಲ! ಇದ್ಯಾನ ಇದು?' ಎಂದು ಅಬ್ಬರಿಸಿದರು.

'ಯಾವ ಹಾಡು? ಇಲ್ಲೇನು ಒಸಿ ಹಾಡುಗಳಿದ್ದಾವೇ?' ಅವರು ಹೇಳ್ತಾಯಿರುವ ಹಾಡು ಯಾವುದೆಂದು ತನಗೆ ಗೊತ್ತಿಲ್ಲವೆಂಬಂತೆ ನಟಿಸುತ್ತಾ ಕಡವೊ ಕೇಳಿದ. ಒಂದು ಹುಡುಗಿ ಪಕ್ಕದವಳ ಪಕ್ಕೆ ತಿವಿದು 'ಇವ ಸ್ವಲ್ಪ ಹೊತ್ನಲ್ಲಿ ಹಾಕಿದ್ದ ಹಾಡು ಯಾವುದು ಅಂತ ನಿನಗೆ ಗೊತ್ತಿಲ್ವ? ಬಾಯಿಬುಟ್ಟು ಹೇಳು ಅದ್ಯಾವುದು ಅಂತ' ಹಾಗೆಂದು ಹೇಳುವಷ್ಟರಲ್ಲಿ ಇಬ್ಬರೂ ನಕ್ಕು ನೈಯ್ಯಾರದಲ್ಲಿ ಮೈಮುರಿಯತೊಡಗಿದರು. ಅವರು ಮುಕ್ತವಾಗಿ ಮೈಮರೆತು ನಕ್ಕ ನಗುವಿನಲ್ಲಿ, ಅವರ ಗಾಜಿನ ಬಳೆಗಳಿಂದ ಹೊರಟ ನಾದದಲ್ಲಿ, ಅವರ ಕಾಲ್ಗೆಜ್ಜೆಯ ಜಣತ್ಕಾರದಲ್ಲಿ ಮತ್ತು ಅವರ ಕನ್ನಡಿ ಕಸೂತಿ ಮಾಡಿದ ಲಂಗದ ಬೀಸಿನಿಂದೆದ್ದ ಪರಿಮಳದಲ್ಲಿ—ಯಾವ ಹಾಡು ಕೊಂಚ ನೀವೇ ಹುಡುಕಿ ಎಂದು ಹೇಳಿ ಅವರನ್ನು ಮಾತಿಗೆ ನಿಲ್ಲಿಸಿಕೊಳ್ಳಬೇಕೆಂದು ಅಂದುಕೊಂಡಿದ್ದ ಅವನ ಯೋಜನೆ ಮರೆತೇ ಹೋಯಿತು. ಪದಗಳಿಗಾಗಿ ತಡಕಾಡುತ್ತಾ ತಾನು ಅನ್ನ ಬೇಕು ಅಂದುಕೊಂಡದ್ದನ್ನು ಮರೆತು ಬೇರೇನೊ ತೊದಲಿದ—'ಯಾವ ರಿಕಾರ್ಡ್ರ ನೀವು ಕೇಳಿದ್ದು—ಆ ಹಾಡು ನಿಮಗೆ ತುಂಬಾ ಇಷ್ಟವಾ, ಆಂ?'—

'ಹ್ಞೂಂ, ಭಾಳ ಇಷ್ಟ' ಅಂತ ಅಂದ ಹುಡುಗಿಯರು ಅಲ್ಲೇ ನಿಂತರು. ಅವರ ನಗುವಿನಲ್ಲಿ ಹಾಗೂ ಅವರ ಗೆಜ್ಜೆನಾದದ ಅಲೆಯಲ್ಲಿ ತೇಲಿಹೋದ ಕಡವೊ ತನ್ನೊಳಗಿನ ಆಸೆಯನ್ನು ಹೊರಗೆಡಹುವುದನ್ನೇ ಮರೆತು 'ನಾಗಿನ್' ಚಿತ್ರದ ರಿಕಾರ್ಡನ್ನು ತೆಗೆದು ಹಾಡಿಸಲಾರಂಭಿಸಿದ. ಆ ಹಾಡು ಶುರುವಾಗುತ್ತಿದ್ದ ಹಾಗೆಯೇ ಹುಡುಗಿಯರು ಓಡಿ ಹೋದರು. ಅವನ ನಾಲಿಗೆಯ ತುದಿಯಲ್ಲಿದ್ದ ಪದಗಳು, ಅವನ ಹೃದಯದಾಳದಲ್ಲಿ ಕುದಿಯೊಡೆದಿದ್ದ ಮಾತುಗಳು, ಆ ಕ್ಷಣದಲ್ಲಿ ಹೊರಬೀಳದೆ ಹೋದವು. ಉದಾಹರಣೆಗೆ, 'ಇದ್ದ ಬದ್ದ ಗನುಲದೆಣ್ಣೆ ಎಲ್ಲಾ ನೀವೇ ಹಾಕ್ಕಂಬಿಟ್ಟಿದ್ದೀರೇನು? ಅಂತಲೋ ಅಥವಾ ರಿಕಾರ್ಡ್ರ ಕೇಳವ್ರು ಬರಿಗೈಲಿ ಬಂದಿರೇನು?' ಎಂದು ಕೇಳಬೇಕೆಂದುಕೊಂಡಿದ್ದ.

ಲಾಡು, ಅನ್ನ ಮತ್ತು ಸಾಂಬಾರು, ಗನುಲದೆಣ್ಣೆ, ಸುಗಂಧದ ಅಡಿಕೆ, ಏಲಕ್ಕಿ

ಕಾಳು, ಕ್ಯಾವೆಂಡರ್ ಸಿಗರೇಟು ಬೇಕಾದಷ್ಟು, ಆ ಲಂಗಗಳ ಮೇಲೆ ಕೂಗುವ ಗಿಳಿಗಳು ಮತ್ತು ನವಿಲುಗಳು—ಈ ಎಲ್ಲದರ ನಡುವೆ ಪರಿಮಳಭರಿತವಾದ ಆ ಒಂದೆರಡು ದಿನಗಳು ಸರಿದು ಹೋದದ್ದು ಕಡವೊನ ಗಮನಕ್ಕೆ ಬಂದಿರಲಿಲ್ಲ.

ಇನ್ನೊಂದು ಸರ್ತಿ ತಾನೇ ಮೂಳ್ಜಿಯ ಜಾಗದಲ್ಲಿ ನಿಂತು ಲೌಡ್‌ಸ್ಪೀಕರನ್ನು ಬಾಡಿಗೆಗೆ ಮಾತನಾಡಿ ಕಡವೊ ಯಜಮಾನಿಕೆ ವಹಿಸಿದ್ದ. ಮೂಳ್ಜಿಗೆ ಹೆದರಬೇಕಾದ ಪ್ರಮೇಯವೇನು? ಬಾಡಿಗೆ ಹಣ ಪಡೆಯುವ ಹಕ್ಕು ಅಧಿಕಾರ ಅವನಿಗೆ ಹೊರತಾಗಿ ಉಳಿದದ್ದರ ಗೊಡವೆ ಅವನಿಗೇಕೆ?

ಇನ್ನೊಂದು ಮೂರು ನಾಲ್ಕು ದಿನ ಮೋಜಿನಿಂದ ಕಾಲ ಕಳೆದು, ನೆನಪುಗಳನ್ನು ಹೃದಯದಲ್ಲಿ ತುಂಬಿಕೊಂಡು, ಖಾಲಿ ಜೇಬನ್ನು ಪ್ರದರ್ಶಿಸುತ್ತಾ ಕಡವೊ ಮೂಳ್ಜಿಯ ಮುಂದೆ ಹಾಜರಾಗಿದ್ದ—ಮೂಳ್ಜಿ ಉದಾರವಾಗಿ ತನಗೆ ಇನಾಮು ಕೊಡುವನೆಂಬುದು ಅವನ ಲೆಕ್ಕಾಚಾರವಾಗಿತ್ತು.

ತಾನು ಮಾಡಿದ್ದ ಹೆಚ್ಚುವರಿ ಕೆಲಸಕ್ಕೆ ಮಜೂರಿಯನ್ನೂ ಜೊತೆಗೆ ಸ್ವಲ್ಪ ಮುಂಗಡ ಹಣವನ್ನೂ ಕಡವೊ ಕೇಳುವನೆಂದು ಮೂಳ್ಜಿ ನಿರೀಕ್ಷಿಸಿದ್ದ. ಕೈಯ್ಯಲ್ಲಿ ಕಾಸಿದ್ದರೆ ಕಡವೊಗೆ ಹಣ ಕೊಡುವುದರಲ್ಲಿ ಅಭ್ಯಂತರವಿರಲಿಲ್ಲ, ಆದರೆ ವ್ಯವಹಾರ ಸರಿಯಾಗಿ ಕುದುರದೆ ಬೇರೆ ಯಾರಿಗೋ ತುರ್ತಾಗಿ ಹಣ ಕೊಡುವ ಪ್ರಮೇಯ ಬಂದಾಗ ವಿಧಿಯಿಲ್ಲದೆ ಕಡವೊಗೆ ಹಣ ಇಲ್ಲ ಎಂದು ಹೇಳಬೇಕಾಗುತ್ತದೆ.

ಬಸ್ಸಿನಿಂದ ಕೆಳಗಿಳಿದು ಸ್ಪೀಕರ್‌ಗೆ ಸಂಬಂಧಿಸಿದ ಸರಂಜಾಮನ್ನೆಲ್ಲಾ ಹೊತ್ತುಕೊಂಡು ಕಡವೊ ನೇರವಾಗಿ ಮೂಳ್ಜಿ ಮನೆಗೆ ಬಂದ. ಬಸ್ಸಿನ ಕುಲುಕಾಟ, ತೊನೆದಾಟದಲ್ಲಿ ಆಂಪ್ಲಿಫೈಯರ್‌ನ ಯಾವುದಾದರೊಂದು ಭಾಗ ಕಳಚಿಕೊಂಡಿರುವುದು ಖಂಡಿತವೆಂದು ಮೂಳ್ಜಿ ಬಗೆದಿದ್ದ. ಕಡವೊ ಮನೆಗೆ ಹೋಗಿ ಬರುವಷ್ಟರಲ್ಲಿ ಯಾವ ಭಾಗ ಊನವಾಗಿದೆಯೆಂದು ಮೂಳ್ಜಿಯ ಗಮನಕ್ಕೆ ಬಂದಿತ್ತು. 'ಅಗೋ ನೋಡು, ಇದನ್ನ ಹಾಳು ಮಾಡಿಕೊಂಡು ಬಂದಿದ್ದೀಯ. ಇದು ಕೆಲ್ಸ ಮಾಡ್ತಾಯಿಲ್ಲ. ಮೂರು ಮೂರು ದಿನಕ್ಕೊ ನನ್ನ ದುಬಾರಿ ಮೆಷಿನ್ನಿನ ಒಂದೊಂದು ಭಾಗವ ಹಾಳು ಮಾಡಿಕೊಂಡು ಬಂದ್ರೆ ಹ್ಯಾಗಯ್ಯ?'

ಕಡವೊ ದಿಙ್ಮೂಢನಾದ. 'ಈ ನಿನ್ನ ಲಡಕಾಸಿ ಮೆಷಿನ್ನಾ ನಾನು ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ನೋಡಿಕೊಂಡದ್ದೂ ಅಲ್ಲದೆ ಹೆಚ್ಚುವರಿ ಬಾಡಿಗೇನೂ ತಂದಿದ್ದೀನಿ. ತಿರಗೀ ನನ್ನನ್ನೇ ನಿಂದಿಸ್ತಾಯಿದ್ದೀಯ, ಹ್ಞಂ?'

'ನೀನೇನು ನನಗೆ ಬಿಟ್ಟಿ ಮಾಡಿಕೊಡ್ತಿಲ್ಲ, ತಿಳೀತಾ? ದಿನಕ್ಕೆ ಹತ್ತು ರೂಪಾಯಿ ಮತ್ತೆ ಬಸ್ ಚಾರ್ಜ್ ತೆಗೆದುಕೊಳ್ತಾಯಿದ್ದೀಯ. ಇನ್ನೂ ಕೊಡು ಅಂತ ಕೇಳೋದಿಕ್ಕೆ ನಾಚಿಕೆಯಾಗೋದಿಲ್ವ? ಇದರ ರಿಪೇರಿಗೆ ನಮ್ಮಪ್ಪ ಕೊಡ್ತಾನಾ ಕಾಸ್ನ?'

ಕಳೆದ ಆ ಒಂದೆರಡು ದಿನಗಳ ಸಂತೋಷ ಕ್ಷಣಾರ್ಧದಲ್ಲಿ ನೀರು ಪಾಲಾಗಿತ್ತು. ಅವನ ನಿರೀಕ್ಷೆ ಮತ್ತೆ ಅವನ ಠೀವಿ ಎಲ್ಲಾ ಕರಗಿ ನೀರಾಗಿತ್ತು. ಈವತ್ತಿನಿಂದ ನಿನ್ನ ಕಡೆಯುವರನ್ನೇ ಯಾರನ್ನಾದ್ರೂ ಈ ಕೆಲಸಕ್ಕೆ ನೇಮಿ

ಸಿಕೋ. ನನ್ನ ಕೆಲ್ಸದ ಗುಣ ನಿನಗೆ ಕಣ್ಣಿಗೆ ಬೀಳತ್ತಾ? ಕೋಪದಲ್ಲಿ ಮೊಸಗುಟ್ಟುತ್ತಾ ಮೂಲ್ಜಿ ನೀಡಿದ ಹತ್ತೋ ಹದಿನೈದೋ ರೂಪಾಯಿಯನ್ನು ಈಸಿಕೊಂಡು ಕಡವೊ ಮೂಲ್ಜಿಯಂಗಡಿಯಿಂದ ಇಳಿದು ಸರಸರನೆ ನಡೆದುಬಿಟ್ಟ. 'ನಿನ್ನ ಅಂಗಡಿಯ ಬೋರ್ಡನ್ನೂ ಸಹ ನಾನು ಈವತ್ತಿನಿಂದ ನೋಡದಿಲ್ಲ—ಒಂದ್ಸಾರಿ ಈ ಕಡವೊ ಹೇಳಿದ್ಮೇಲೆ ಮುಗಿದುಹೋಯ್ತು.'

ಸ್ವಲ್ಪ ದಿನಗಳ ತನಕ ಕಡವೊ ಮೂಲ್ಜಿ ಅಂಗಡಿಯ ಕಡೆ ತಲೆ ಹಾಕಲಿಲ್ಲ. ಸುಮಾರು ದಿನಗಳ ಕಾಲ ಕೆಲಸವಿಲ್ಲದೇ ಇರಬೇಕಾಯಿತು. ಕೈಯ್ಯಲ್ಲಿ ಒಂದು ಚಿಕ್ಕಾಸು ಇಲ್ಲದಂಥ ಪರಿಸ್ಥಿತಿ. 'ಏನು ಮಾಡೋದು?—ಕೋಪದಲ್ಲಿ ನಾನು ಹಾಗಂದಬಿಟ್ಟೆ—ನೀನು ಇನ್ನೊಂದು ಸರ್ತಿ ಆ ಬೋರ್ಡಿನ ಕಡೆ ತಿರುಗಿ ನೋಡಿದ್ರೆ ನಾ ಕೋಲಿ ಜಾತೀಲಿ ಹುಟ್ಟಿದವನೇ ಅಲ್ಲ. ಆದರೆ ಒಂದು ಸರ್ತಿ ಬಾಯಿಂದ ಆಡಿದ ಮಾತನ್ನು ತಿರುಗಿ ನುಂಗಿಕೊಳ್ಳೋದು ಹ್ಯಾಗೆ?"

ಆದರೆ ಮನಸ್ಸಿನ ದೊಂಬರಾಟವನ್ನು ಬಲ್ಲವರಾರು? ಕಡವೊ ಒಳಗಿನ ಕೋಪ ತಣ್ಣಗಾಗುತ್ತಿದ್ದಂತೆಯೇ ಅವನ ಕಾಲುಗಳು ಏನೋ ನಿರೀಕ್ಷೆಯಲ್ಲಿ ಮೂಲ್ಜಿಯ ಅಂಗಡಿಯ ಕಡೆ ಹರಿಯತೊಡಗಿದವು. ಅವನೇನಾದ್ರೂ ಕರೆದರೆ, ಅವನಾಗಿ ಕರೆದ್ರೆ ಹೋಗೋದು. ಆದರೆ ಅಗತ್ಯ ಬೀಳದೆ ಕಡವೊನನ್ನು ಕರೆಯೋದಕ್ಕೆ ಮೂಲ್ಜಿಗೇನಾದ್ರೂ ತಲೆಗಿಲೆ ಕೆಟ್ಟಿದೆಯೇ? ಸುಮ್ಮನೆ ಕುಳಿತುಕೊಂಡು ಏನೂ ಕಾಣದವನ ಹಾಗೆ ಬೀಡಿ ಹೊಸೆಯುತ್ತಾ ಇಲ್ಲ ಬೀಡಾ ಕಟ್ಟುತ್ತಾ ನಟಿಸಿದ. ಕಡವೊ ಅಂಗಡಿಯ ಮುಂದೆ ಹಾದು ಹೋಗುವುದನ್ನು ಓರೆಗಣ್ಣಲ್ಲೇ ಅಂದಾಜು ಮಾಡಿದ. ಕಡವೊ ಕಣ್ಣಿಗೆ ಬೀಳಲಿಲ್ಲವೇನೋ ಅನ್ನುವವನ ಹಾಗೆ ಕುಳಿತುಕೊಂಡ. ಅಷ್ಟಕ್ಕೂ ಸದ್ಯದಲ್ಲಿ ಲೌಡ್‌ಸ್ಪೀಕರ್‌ಗಾಗಿ ಯಾವುದೂ ಆರ್ಡರ್ ಇರಲಿಲ್ಲ. ಮಾರ್ಗಶಿರ ಮಾಸದಲ್ಲಿ ಮದುವೆಗಳು ಶುರುವಾಗುವುದು. ಆವಾಗ ಆರ್ಡರ್ ಬರ್ತವೆ. ಅಷ್ಟರತನಕ ಕಡವೊನ ಪಿತ್ತ ಇಳಿದಿರ್ತದೆ.

ಸ್ವಲ್ಪ ದಿನಗಳತನಕ ಮೂಲ್ಜಿ ಮತ್ತು ಕಡವೊನ ನಡುವೆ ಇಂಥ ಆಟ ನಡೆದಿತ್ತು-ಮೂಲ್ಜಿಯ ಸ್ವಾರ್ಥದ ಸನ್ನಾಹ ಹೆಚ್ಚುತ್ತಿದ್ದ ಹಾಗೆಯೇ ಕಡವೊನ ಆಸೆಯೂ ಕುಡಿಯೊಡೆದಿತ್ತು. ಮೂಲ್ಜಿಗೆ ಒಂದು ಆರ್ಡರ್ ಬಂದಿತ್ತು. ಅದು ಬಂದ ಕೂಡಲೇ ಬಿಕ್ಕಟ್ಟು ಪರಿಹಾರವಾಗುವ ಕ್ಷಣವೂ ಉದಯಿಸಿತು. ಕಡವೊ ಒಬ್ಬ ಗಿರಾಕಿಯಾಗಿ ಈಗ ಮೂಲ್ಜಿಯ ಅಂಗಡಿಗೆ ಬಂದಿದ್ದ. ಗಲ್ಲಾ ಪೆಟ್ಟಿಗೆಯ ಕಂಬಿಯ ಮೇಲೆ ತನ್ನ ಬಲಗೈಯನ್ನು ಗಟ್ಟಿಯಾಗಿ ಒತ್ತಿ ತಲೆಯನ್ನು ಹಿಂದಕ್ಕೆ ತಿರುಗಿಸಿ ರಸ್ತೆಯ ಕಡೆ ನೋಡುತ್ತಾ ನಿಂತ. ನಂತರ ಎಡಗೈಯಿಂದ ನಾಲ್ಕಾಣೆ ಪಾವಲಿಯನ್ನು ತೆಗೆದು ಬಲಗೈಯಿನ ಅಡಿಯಿಂದ ಗಲ್ಲದ ಮೇಲೆ ಎಸೆದ. ಇನ್ನೂ ಮುಖವನ್ನು ಹಾಗೇ ಹಿಂದಕ್ಕೆ ತಿರುಗಿಸಿಕೊಂಡೇ ತಾನಿನ್ನೂ ರಾಜಿಯಾಗಿಲ್ಲವೆಂಬುದನ್ನು ಮೂಲ್ಜಿಗೆ ತಿಳಿಸಲೆಂಬಂತೆ ದರ್ಪದ ದನಿಯಲ್ಲೇ 'ನಾಕಾಣೆಗೆ ಒಂದೇ ನಂಬ್ರು' ಎಂಬುದಾಗಿ ತನ್ನ ಆರ್ಡರ್ ಒಗೆದಿದ್ದ. ಈಗ ಕೇವಲ ತಾನು ಗಿರಾಕಿಯಾಗಿ ಮೂಲ್ಜಿಯಂಗಡಿಗೆ ಬಂದಿರುವುದರಿಂದ ಮೂಲ್ಜಿ ತನ್ನ ಬಗ್ಗೆ ಅಸಡ್ಡೆಯಿಂದ

ಇದ್ದರೂ ತಾನು ಕೇರು ಮಾಡುವುದಿಲ್ಲ ವೆಂಬುದನ್ನು ದನಿಯಲ್ಲೇ ಪ್ರಕಟಿಸಿದ್ದ. ಮೂಲ್ಜಿ ಅವನನ್ನು ಅಂದಾಜು ಮಾಡಿ ಕಡವೊ ರಾಜಿಗಾಗಿ ಸಿದ್ಧವಾಗಿರುವನೆಂದು ಅರ್ಥಮಾಡಿಕೊಂಡ. ಹಾಗಾಗಿ ತನ್ನ ದನಿಯಲ್ಲಿ ಅತಿಯಾಗಿ ಮೃದುತ್ವವನ್ನು ತೋರಿಸುತ್ತಾ ಮೂಲ್ಜಿ ಹೇಳಿದ,'ತಗಾ ಬೀಡಿಯಾ. ಹಾಳಾದವ್ನೆ ಯಾಕೆ ಆ ಥರ ಗತ್ನಲ್ಲಿ ಮಾತಾಡಿಯು? ಕಂಡೇಟಿಗೆ ನಮಸ್ಕಾರ ಅಂತಲಾಗಲೀ, ಚೆನ್ನಾಗಿದ್ದೀಯು ಅಂತಲಾಗಲಿ ಹೇಳಿದೆಯಾ ನೀನು?'

ಕಡವೊ ಅದೇ ನಿಲುವನ್ನು ಮುಂದುವರಿಸಿದ್ದ. 'ನನ್ನ ಬೀಡಿ ಕೊಡಿ ಇಲ್ಲಿ, ಬಾಕಿ ವಿಚಾರ ಬ್ಯಾಡ. ಇನ್ನು ನಾವು ಬ್ಯಾರಿ ಯಾವ ವ್ಯವಹಾರನೂ ಸೆಟ್ಲ್ ಮಾಡಬೇಕಾಗಿಲ್ಲ.'

'ನಮ್ಮ ನಮ್ಮ ವ್ಯವಹಾರದಲ್ಲಿ ನಮ್ಮ ಹಳ ಸಂಬಂಧ ಮರತುಬುಡದಾ? ಬಿಸಿನೆಸ್‌ನಲ್ಲಿ ಜನ ಜಗಳಾನೂ ಕಾಯ್ಬೈದು. ಅಡಿಗೆ ಮನೇಲಿ ಪಾತ್ರಪಡಗ ಚೆಲ್ಲಾಡಬೈದು. ಅದಕ್ಕೋಸ್ಕರವಾಗಿ ನಮ್ಮ ಸಂಬಂಧ ಕಳಕೊಳ್ಳದಾ? ಹುಚ್ಚು ಹೈದ ನೀನು? ಬಾ ನೆಟ್ಲು ಮ್ಯಾಲಕ್ಕ. ಯಾರಾರು ನೋಡಿದ್ರ ನೀ ಅಲ್ಲಿ ನಿಂತಿರದು—ವಿಚಿತ್ರ ಅಂದುಕೊಂಡಾರು!'

ತನ್ನ ಕಹಿಯನ್ನೆಲ್ಲಾ ಸಂಪೂರ್ಣವಾಗಿ ತೊಡೆದು ಕಡವೊ ಮೂಲ್ಜಿಯ ಮುಖ ನೋಡಿದ—'ಬುಡು ಈಗ, ನಿನ್ನಾಟವೆಲ್ಲಾ ಮರೆತು ಬಾ ಮ್ಯಾಲಕ್ಕ.' ಕಡವೊ ಅಂಗಡಿಯ ಹಲಗೆಯ ಮೇಲಕ್ಕೆ ಬಂದು ನಿಂತ. ಹೋಗಿ ಮರದ ಪೆಟ್ಟಿಗೆಯ ಮೇಲೆ ಕುಳಿತುಕೊಂಡ ಮೂಲ್ಜಿ ಹೇಳಿದುದಕ್ಕೆ ಕಬೂಲ್ ಎನ್ನುವಂತೆ; ಕಡವೊ ಹೇಳಿದುದಕ್ಕೆ ತಾನು ಸಹಿ ಹಾಕಲು ಸಿದ್ಧ ಎನ್ನುವಂತೆ ಮೂಲ್ಜಿ ಆಗಲೇ ತಯಾರಾದಂತಿದ್ದ.

ತಳ್ಳುಗಾಡಿಯಲ್ಲಿ ಚಹಾ ಮಾರುತಿದ್ದವನನ್ನು ಮೂಲ್ಜಿ ಕೂಗಿದ: 'ಓಹೇ ಗೋದಿಯಾ, ಒಂದು ಟೀ ಕಳ್ಸು, ಖಡಕ್ಕಾಗಿ, ಸಿಹಿ ಮುಂದಾಗಿರಲಿ. ಸಕ್ಕರೆ ಹಾಕದ್ರಲ್ಲಿ ಜಿಪುಣತನ ಮಾಡಬ್ಯಾಡ—ಒಳ್ಳೆ ಮೂತ್ರದಾಗಿರಾ ಟೀ ತರಬ್ಯಾಡ.' ಆನಂತರ ಒಳಗೆ ತನ್ನ ಮಗನನ್ನು ಕೂಗಿ ಕರೆದ ಮೂಲ್ಜಿ: 'ಓಹೇ, ಜಗಲಾ ಬಾ ಇಲ್ಲಿ.' ಜಗಲೊ ಓಡಿ ಬಂದ. 'ಹೋಗಿ ನಿಮ್ಮಮ್ಮನಿಗೆ ಹೇಳು ಕಡವಭ್ಯಾ ಈವತ್ತು ಮಧ್ಯಾಹ್ನ ನಮ್ಮ ಮನೇಲೇ ಊಟ ಮಾಡ್ತನ ಅಂತ. ಅನ್ನ-ಸಾಂಬಾರು ಮಾಡಬೇಕಂತ ಅಂತ ಹೇಳು. ಕಡವೊ ಕಡೆಗೆ ಕಣ್ಣು ಮಿಟುಕಿಸುತ್ತಾ 'ವ್ಯವಹಾರ ಅಂದ್ರೆ ವ್ಯವಹಾರ' ಅಂದ. 'ವ್ಯವಹಾರದಲ್ಲಿ ಹೆಂಡ್ತಿ ಕೂಡ ಪಾಲುದಾರಳಿಯೇ. ಗೊತ್ತಾಯ್ತಾ ನಾ ಹೇಳದು ಕಡವಭ್ಯಾ?' ಹಾಗೆ ಹೇಳಿದ ಮೇಲೆ ತನ್ನ ಜೋಬಿನಿಂದ ದುಡ್ಡು ತೆಗೆದು ಎಣಿಸಿ ಮೂಲ್ಜಿ ಕಡವೊನ ಕೈಗೆ ಇಡುವನು: ತಗಾ, ನಾ ನಿನಗೆ ಮೂವತ್ತೈದು ಕೊಡ, ಬೇಕಾಗಿತ್ತು, ಅಲ್ವ? ತಗಾ ಐವತ್ತೈದ, ತೃಪ್ತಿಯಾಯ್ತಾ?'

ಕಡವೊ ಹಣ ಈಸಿಕೊಂಡ. ಶತ್ರುತ್ವದ ಕ್ಷಣ ವೆಲ್ಲಾ ಬೆಣ್ಣೆಯ ಹಾಗೆ ಕರಗಿ ಹೋಯಿತು. ಇಬ್ಬರೂ ಪರಸ್ಪರ ಸಂಶಯ ತಪ್ಪು ಅಭಿಪ್ರಾಯಗಳಿಂದ ಮುಕ್ತರಾಗಿ ಹಳೆಯ ಕಾಲದ ಕಡವೊ-ಮೂಲ್ಜಿಗಳಾದರು.

ನಂತರ ಇದ್ದಕ್ಕಿದ್ದ ಹಾಗೆಯೇ ಏನೋ ನೆನಪಾದಂತೆ ಮೂರ್ಲಿಜ 'ನೀನು ಬಂದದ್ದು ಒಳ್ಳೇದೇ ಆಯ್ತು', ಅಂದ. 'ಒಂದು ನಿಮಿಷ ಗಲ್ಲಾದ ಮೇಲೆ ಕೂತ್ಕೊ. ಒಂದೆರಡು ಸಣ್ಣಪುಟ್ಟ ಕೆಲ್ಸ ಅವೆ ಮುಗಿಸ್ಕಂಡು ಬಂದ್ಬಿಡ್ತೀನಿ. ಚಿಟಿಕೆ ಹೊಡೆಯದ್ರಲ್ಲಿ ಬಂದ್ಬಿಡ್ತೀನಿ.'

ಕಡವೊ ಮೂರ್ಲಿಜ ಪಾತ್ರ ವಹಿಸುತ್ತಿದ್ದ ಹಾಗೆಯೇ ಮೂರ್ಲಿಜ ಕಡವೊ ಪಾತ್ರ ಧರಿಸಿ ಹೊರಟ. ಮುಖವಾಡವನ್ನು ಬದಲಾಯಿಸಿಕೊಂಡಿದ್ದರು. ಹಾಗಾಗಿ ಸಂತೋಷಗೊಂಡಿದ್ದರು. ತೋಟಕ್ಕೆ ಹೋಗಿ, ಒಂದಿಬ್ಬರನ್ನು ಕಂಡು, ಮಾರನೇ ದಿನ ಹೊಲದಲ್ಲಿ ಕಳೆ ಕೀಳುವುದಕ್ಕೆ ಆಳುಗಳನ್ನು ಗೊತ್ತುಮಾಡಬೇಕಾಗಿತ್ತು. ಮೂರ್ಲಿಜ ಈ ಎಲ್ಲಾ ಕೆಲಸಗಳನ್ನು ಮುಗಿಸಿ ಮಧ್ಯಾಹ್ನ ಒಂದೂವರೆ ಗಂಟೆಯ ಸಮಯಕ್ಕೆ ಹಿಂತಿರುಗಿದ. ಕಡವೊನ ಪ್ರಾಮಾಣಿಕತೆಯ ಬಗ್ಗೆ ಅವನಿಗೆ ಸಂಪೂರ್ಣವಾದ ನಂಬಿಕೆ ಇತ್ತು. ಮೂರ್ಲಿಜ ತನ್ನನ್ನ ನಂಬಿದನಲ್ಲ ಅಂತ ಕಡವೊಗೂ ಖುಷಿಯಾಗಿತ್ತು. ಮೂರ್ಲಿಜ ವಾಪಸ್ಸು ಬರುವತನಕ ಕಡವೊ ಮೂರ್ಲಿಜಯ ಮುಖವಾಡ ಧರಿಸಿಕೊಂಡಿದ್ದ—ಮುಖವಾಡ ಚೆನ್ನಾಗಿ ಒಪ್ಪುತ್ತಿತ್ತು.

ಭಾಳಾ ಹೊತ್ತಾಗಿ ಬಿಡ್ತು ತಾನು ಬರುವುದು ಅಂತ ಹೇಳಿ ಮೂರ್ಲಿಜ ಕ್ಷಮೆ ಕೇಳುವ ದನಿಯಲ್ಲಿ ಹೇಳಿದ. 'ಕಡವಭ್ಯಾ ಎಷ್ಟು ಹೊತ್ತಾಗೋಯ್ತು. ಏಳು ಏಳು ಈಗ. ಇಲ್ಲಿ ಜಗಲೊ ಕೂತ್ಗತಾನೆ. ಹೋಗಿ ಊಟ ಮಾಡಾನ. ನಾನು ನಿನಗೆ ಭಾಳಾ ತೊಂದರೆ ಕೊಟ್ಟೆ.'

ಏನಾಯ್ತು ಈಗ ಅಂತ ಮೂರ್ಲಿಜ ಭ್ಯಾ? ನಾನೇನು ಇಲ್ಲಿ ಕಡಿದು ಕಟ್ಟೆ ಹಾಕಿಬಿಟ್ನೆ? ಒಬ್ಬರಿಗ ಇನ್ನೊಬ್ಬರು ಆಗದೇ ಹೋದ್ರ ಹ್ಯಾಗೆ ಹೇಳು? ತೊಂದರೆಗಿಂದರೆ ಏನೂ ಇಲ್ಲ ತಗಳಪ್ಪಾ!

ಸಾಂಬಾರು ಸೊರೆಯುತ್ತಾ ಹೊಸದಾಗಿ ಒಂದು ಆರ್ಡರ್ ಬಂದಿದೆ ಅಂತ ಮೂರ್ಲಿಜ ಪ್ರಸ್ತಾಪಿಸಿದ. 'ತಗಳ್ಳವಾ ಕಡವಭ್ಯಾ, ನಿನಗೆ ಪುರುಸೊತ್ತಿದ್ರೆ ಮಾತ್ರ, ನೋಡಪಾ?'

ದೇವರಲ್ಲಿ ಭಕ್ತಿ ಇರಬೇಕು, ಗುರುಹಿರಿಯರಲ್ಲಿ ಗೌರವ ಇರಬೇಕು, ಧರ್ಮಶಾಸ್ತ್ರಗಳನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಇದರಿಂದ ಬದುಕು ಹಸನಾಗುತ್ತದೆ.

—ಮಹಾವೀರ

ನಮ್ಮ ತತ್ವಗಳನ್ನು ನಮ್ಮ ಕರ್ತವ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸಿಕೊಳ್ಳಬೇಕು.

—ಎಡ್ಮಂಡ್ ಬರ್ಕ್

ವಿಶ್ವದ ಅತಿ ದುಷ್ಟ ಹೆಣ್ಣು—ಮೇರಿ ಟ್ಯೂಡರ್

ಟಿ. ಎಸ್. ಲಲಿತ

೭೦೩, ಮೊದಲನೆ ಮಹಡಿ,
೧೭ನೇ ಮೇನ್, ಸರಸ್ವತಿಪುರ
ಮೈಸೂರು–೫೭೦೦೦೯

ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಬಹುದಾದ ಆಳ್ವಿಕೆ ಹಲವರದಾದರೆ, ರಕ್ತಸಿಕ್ತವಾದುದು ಹಲವರದು. ಧರ್ಮ ಸ್ಥಾಪನೆಗಾಗಿ ನಡೆಯುವ ಅಧರ್ಮ ಅಚ್ಚರಿ ಹುಟ್ಟಿಸುತ್ತದೆ. ಇಂಥ ಮತಾಂಧತೆಯ ಘೋರ ಆಳ್ವಿಕೆಯಲ್ಲಿ ಇಂಗ್ಲೆಂಡಿನ ಮೇರಿ ಟ್ಯೂಡರಳದೂ ಒಂದು.

ಎಂಟನೇ ಎನ್ರಿಯ ಮಗಳಾದ ಮೇರಿ ಟ್ಯೂಡರ್ 'ಬ್ಲಡಿ ಮೇರಿ' ಎಂದೇ ಪ್ರಸಿದ್ಧಳು. ಈ ಧಾರ್ಮಿಕ ಪ್ರವೃತ್ತಿಯ ಹೆಂಗಸು ತನ್ನ ಧಾರ್ಮಿಕ ಗುರಿ ತಲುಪಲು, ತನ್ನ ಅಲ್ಪಾವಧಿಯ ಆಳ್ವಿಕೆಯ ಸಮಯದಲ್ಲಿ ಎಂಥ ಕ್ರೂರ ಹಾದಿಯನ್ನು ತನ್ನದಾಗಿಸಿಕೊಂಡಳೆಂದು ಊಹಿಸುವುದೂ ಕಷ್ಟ.

೧೫೫೩ರಲ್ಲಿ ತನ್ನ ೩೭ನೇ ವಯಸ್ಸಿನಲ್ಲಿ ಸಿಂಹಾಸನವೇರಿದ ಮೇರಿ ಗರ್ಭಕೋಶದ ಖಾಯಿಲೆಯಿಂದ, ಅತಿಯಾದ ತಲೆ ಸಿಡಿತದಿಂದ ನರಳುತ್ತಿದ್ದಳು. ಲೈಂಗಿಕ ಜೀವನದ ಬಗ್ಗೆ ತುಚ್ಛ ಭಾವನೆ ಅವಳಿಗೆ. ಅನೇಕ ಕಷ್ಟಕಾರ್ಪಣ್ಯಗಳನ್ನನುಭವಿಸಿದ ಅವಳಿಗೆ, ಇತರರ ಕಷ್ಟಗಳ ಬಗ್ಗೆ ಸಹಾನುಭೂತಿ ಇರುವ ಬದಲು, ಮನಸ್ಸು ಕಲ್ಲಾಗಿತ್ತು. ರೋಮನ್ ಕ್ಯಾಥೋಲಿಕ್ ಚರ್ಚ್‌ನ ಸರ್ವಾಧಿಕಾರವನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸುವ ತನ್ನ ಏಕಮಾತ್ರ ಗುರಿಯ ಹಾದಿಯಲ್ಲಿ ಯಾರು ಅಡ್ಡಿಯಾಗುವುದನ್ನೂ ಅವಳು ಸಹಿಸಲಾರಳೆಂದು ಬಲುಬೇಗ ಎಲ್ಲರಿಗೂ ಅರ್ಥವಾಗಿತ್ತು.

ಸೈನ್ಯದ ಸಹಾಯದೊಂದಿಗೆ ದಿಗಿಲುಗೊಳಿಸುವ ಅವಳ ಆಳ್ವಿಕೆ ಶುರುವಾಯ್ತು. ಅಸಂಪ್ರದಾಯವಾದಿಗಳನ್ನು ಸ್ಥಳದಲ್ಲೇ ದಸ್ತಗಿರಿ ಮಾಡಲು ಅವರ ಮನೆಗಳನ್ನು ಒಡೆದು, ಸ್ತ್ರೀಪುರುಷರನ್ನು ಚಿತ್ರಹಿಂಸೆಗೆ ಗುರಿ ಮಾಡಲು ಅಧಿಕಾರಿಗಳಿಗೆ ಅನುಮತಿ ಇತ್ತು, ತನ್ನ ವಿರೋಧಿಗಳ ಹುಟ್ಟಡಗಿಸುವ ಹೋರಾಟದಲ್ಲಿ ದೇಶದ ಹಣಕಾಸಿನ ಸ್ಥಿತಿ ಅಧೋಗತಿಗಿಳಿದಿತ್ತು. ಬೆಲೆಗಳು ಗಗನ ಮುಟ್ಟಿದ್ದವು. ಹಸಿದ ಹೊಟ್ಟೆ ತುಂಬಿಸಲು ಜನ, ಧಾನ್ಯ ಖರೀದಿಸಲಾಗದೆ, ಓರ್ ಮರದ ಬೀಜದಿಂದ ತಯಾರಿಸಿದ ಹಿಟ್ಟಿನ ರೊಟ್ಟಿ ಹಾಗೂ ನೀರಿನಿಂದಲೇ ತೃಪ್ತಿಪಡ

ಮೂಲ: ಮಾರ್ಗರೆಟ್ ನಿಕೊಲಸ್ ಅವರ "ಮೇರಿ ಟ್ಯೂಡರ್, ದಿ ವರ್ಲ್ಡ್ಸ್ ವಿಕೆಡೆಸ್ಟ್ ವುಮೆನ್" ಲೇಖನ.

ಬೇಕಿತ್ತು. ಜನರ ಆಧ್ಯಾತ್ಮಿಕ ಜೀವನಕ್ಕೆ ಒತ್ತುಕೊಟ್ಟ ಮೇರಿ, ಜನರ ಕ್ಷೇಮವನ್ನು ಮರೆತಳು. ಮೇರಿಯ ೪ ವರ್ಷಗಳ ಆಳ್ವಿಕೆಯಲ್ಲಿ ಸುಡುಗಂಬಕ್ಕೆ ಕಟ್ಟಿ ಸುಡಲ್ಪಟ್ಟವರು ೨೮೩ ಜನ. ಸುಡುಗಂಬದ ಜ್ವಾಲೆ ಮೇಲೇರಿದಷ್ಟೂ ಮೇರಿಯ ಬಗ್ಗೆ ಜನರ ರೋಷ ಏರುತ್ತ ಹೋಯಿತು.

ಕ್ಯಾಥರೀನ್ ಹಾಗೂ ಎಂಟನೇ ಹೆನ್ರಿಯ ಮಗಳಾಗಿ ೧೫೧೬ರ ಫೆಬ್ರವರಿ ೧೮ರಂದು ಹುಟ್ಟಿದ ಮೇರಿ ಮೊದಲಿಂದಲೂ ದುರಾದೃಷ್ಟವಂತಳೇ ಆಗಿದ್ದಳು. ಹೆಣ್ಣಾದ ಅವಳಿಂದ ನಿರಾಶೆಗೊಂಡರೂ, ಮಗುವಾದ ಮೇರಿಯನ್ನು ಪ್ರೀತಿಸಿ, ಅವಳಿಗೆ ಒಳ್ಳೆ ವಿದ್ಯಾಭ್ಯಾಸ ಕೊಡಿಸಿದ ಹೆನ್ರಿ. ಸುಂದರಿಯಾದ ಆನ್‌ಬೊಲಿನ್ ರಾಜದರ್ಬಾರಿನಲ್ಲಿ ಕಾಲಿಟ್ಟಾಗಿನಿಂದ ಮೇರಿಯ ಕಷ್ಟದ ದಿನಗಳು ಪ್ರಾರಂಭವಾದವು. ಹೆನ್ರಿ ಕ್ಯಾಥರೀನಳಿಂದ ವಿಚ್ಛೇದನೆ ಪಡೆದು, ಆನ್‌ಬೋಲಿನ್‌ಳನ್ನು ವಿವಾಹವಾಗುವಷ್ಟು ಅವಳ ಪ್ರೇಮಪಾಶಕ್ಕೆ ಸಿಲುಕಿದ್ದ.

ವಿಚ್ಛೇದನೆಯ ವಿಚಾರಣೆಗಾಗಿ, ಕ್ರಾನ್‌ಮರ್, ಕ್ಯಾಂಟರ್‌ಬರಿಯ ಬಿಷಪ್‌ನೆಂದು ನೇಮಕಗೊಂಡ. ಆದರೆ ಇದಕ್ಕೊಪ್ಪದ ಕ್ಯಾಥರೀನ್ ನ್ಯಾಯಾಲಯಕ್ಕೆ ಹಾಜರಾಗಲು ನಿರಾಕರಿಸಿದರೂ, ಹೆನ್ರಿಯೊಂದಿಗಿನ ಅವಳ ವಿವಾಹ ಕಾನೂನು ಬದ್ಧವಲ್ಲವೆಂದು ಘೋಷಿಸಿದ ಕ್ರಾನ್‌ಮರ್. ಇದರಿಂದ ಮೇರಿ ಅನೈತಿಕ ಸಂತಾನವೆನಿಸಿ ಸಿಂಹಾಸನದ ಹಕ್ಕು ಕಳೆದುಕೊಳ್ಳಬೇಕಾಯ್ತು. ಮುಂದೆ ಇದಕ್ಕಾಗಿ ಅವನು ದುಬಾರಿ ಬೆಲೆ ತೆತ್ತ.

೧೫೩೩ರಲ್ಲಿ ಹೆನ್ರಿ ಆನ್‌ಳನ್ನು ಮದುವೆಯಾದ. ಅವಳು ಎಲಿಜಬೆತ್‌ಳಿಗೆ ಜನ್ಮ ಕೊಟ್ಟಾಗ, ಮೇರಿ ತನ್ನನ್ನು ರಾಜಕುಮಾರಿ ಎಂದು ಕರೆದುಕೊಳ್ಳಬಾರದೆಂದು ಅಪ್ಪಣೆಯಾಯ್ತು. ಅತ್ಯಂತ ಪ್ರೀತಿಪಾತ್ರಳಾದ ತನ್ನ ತಾಯಿಂದ ಬೇರ್ಪಡಿಸಲಾಯ್ತು ಮೇರಿಯನ್ನು. ೧೫೩೬ರಲ್ಲಿ ಕ್ಯಾಥರೀನ್ ಸತ್ತಾಗ ಆನ್‌ಳ ಸೋದರಿಯ ವಶಕ್ಕೊಪ್ಪಿಸಲಾಯ್ತು. ಜೀವ ಭಯದ ವಾತಾವರಣದಲ್ಲಿ ಮೇರಿಯ ಬೈಗು ಬೆಳಗಾಗುತ್ತಿತ್ತು. ಹೆನ್ರಿ ಇಂಗ್ಲೆಂಡ್ ಚರ್ಚಿನ ಸರ್ವೋಚ್ಚ ಸ್ವಾಮಿ ಎನಿಸಿದ.

ತಂದೆಯನ್ನು ಬಲವಾಗಿ ವಿರೋಧಿಸಿದಳು ಮೇರಿ. ಈ ಸಮಯದಲ್ಲಿ ಅವಳ ಒಬ್ಬನೇ ಬೆಂಬಲಿಗನೆಂದರೆ, ತನ್ನ ಬಂಧು ಸ್ಪೇನ್‌ನ ಚಕ್ರವರ್ತಿ ಐದನೇ ಜಾರ್ಜ್‌F. ವ್ಯಭಿಚಾರದ ಅಪರಾಧಕ್ಕಾಗಿ ಆನ್, ಸೆರೆಗೆ ನೂಕಲ್ಪಟ್ಟು, ಹೆನ್ರಿ ಜೇನ್ ಸೆಮೂರ್‌ಳನ್ನು ಮದುವೆಯಾದಾಗ, ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ಅಪರಾಧಕ್ಕಾಗಿ ಆನ್‌ಳ ಶಿರಚ್ಛೇದ ಮಾಡುವ ಹಿಂದಿನ ದಿನ ಸೋಗಿನ ವಿಚಾರಣೆಯೊಂದರಲ್ಲಿ, ಹೆನ್ರಿಯೊಂದಿಗಿನ ಅವಳ ಮದುವೆಯನ್ನು ರದ್ದುಪಡಿಸಲಾಯ್ತು. ಇದರಿಂದ ಎಲಿಜಬೆತ್ ಹಾಗೂ ಮೇರಿ, ಇಬ್ಬರೂ ಅನೈತಿಕ ಸಂತಾನವೆನಿಸಿದರು. ೧೫೩೭ರ ಅಕ್ಟೋಬರ್ ೧೨ರಂದು ಜೇನ್ ಸೆಮೂರ್ ಎಡ್ವರ್ಡ್‌Fಗೆ ಜನ್ಮವಿತ್ತಾಗ, ಅವನ ಬಗ್ಗೆ ಪ್ರೀತಿ ಹೊಂದಿದ್ದ ಮೇರಿ, ಸಿಂಹಾಸನಕ್ಕೆ ಎಡ್ವರ್ಡ್‌F ಹಕ್ಕುದಾರನೆಂದು ಒಪ್ಪಿದಳು.

ಮುಂದಿನ ದಶಕದಲ್ಲಿ, ಆಗಾಗ್ಗೆ ಗೃಹಬಂಧನಕ್ಕೊಳಗಾಗುತ್ತಿದ್ದಳು ಮೇರಿ. ಆರ್ಲಿಯನ್ಸ್‌ನ ಡ್ಯೂಕ್‌ನೊಂದಿಗೆ ನಡೆದ ಅವಳ ಮದುವೆಯ ಪ್ರಯತ್ನ ವ್ಯರ್ಥ

ವಾಯಿತು. ೧೫೪೭ರ ಜನವರಿಯಲಿ ಹೆನ್ರಿ ಗತಿಸಿದಾಗ, ಪಾಟೆಸ್ಟೆಂಟ್ ಪಂಥಕ್ಕೆ ಸೇರಿದ ಅವನ ಮಗ ಸಿಂಹಾಸನಕ್ಕೆ ವಾರಸುದಾರ ನಾದರೂ, ಅಧಿಕಾರ ಅವನ ಸೋದರಮಾವ ಎಡ್ವರ್ಡ್ ಸೆಮೂರನ ಕೈಲಿತ್ತು. ಆತ ಪಾದ್ರಿ ಕ್ರಾನ್‌ಮರ್‌ನ ಸಹಯೋಗ ದೊಂದಿಗೆ, ಇಂಗ್ಲೆಂಡನ್ನು ಬಲವಾದ ಪ್ರಾಟೆಸ್ಟೆಂಟ್ ದೇಶವನ್ನಾಗಿ ಮಾಡಲು ಶ್ರಮಿಸಿದ. ತನ್ನ ಸೋದರನೊಂದಿಗೆ ಒಳ್ಳೆಯ ಸಂಬಂಧವಿದ್ದರೂ, ರಾಜದರ್ಬಾರು ಮೇರಿಗೆ ಉಸಿರುಕಟ್ಟಿಸಿತು. ಎಡ್ವರ್ಡ್ ೧೫೫೩ರ ಬೇಸಿಗೆಯಲ್ಲಿ ಕ್ಷಯಕ್ಕೆ ತುತ್ತಾದ. ಹೆನ್ರಿಯ ಉಯಿಲಿನ ಪ್ರಕಾರ ಮೇರಿ ಸಿಂಹಾಸನಕ್ಕೆ ಹಕ್ಕುದಾರಳೆನಿಸಿದಳು. ಇಂಗ್ಲೆಂಡಿನ ಚರಿತ್ರೆಯಲ್ಲೇ ನಾಚಿಕೆಗೇಡೆನಿಸಿದ ಅಧಿಕಾರದ ಹೋರಾಟದಲ್ಲಿ ದೃಢವಾಗಿ ನಿಂತಳು ಮೇರಿ. ನಾರ್ಥಂಬರ್‌ಲ್ಯಾಂಡಿನ ಭ್ರಷ್ಟ ಡ್ಯೂಕ್, ಪ್ರಾಟೆಸ್ಟೆಂಟರ ಹಾಗೂ ತನ್ನ ಹಿತಾಸಕ್ತಿಗಳಿಗಾಗಿ ಮೇರಿಗೆ ಸಿಂಹಾಸನ ಸಿಗಬಾರದೆಂದು ನಿರ್ಧರಿಸಿದ. ಮಾವೆಯಲ್ಲಿ ಎಡ್ವರ್ಡನ ಸೋದರಿ ಎನಿಸಿದ ಜೇನ್‌ಗ್ರೇಯನ್ನು ತನ್ನ ಮಗನಿಗೆ ಮದುವೆ ಮಾಡಿಸಿ ಅವಳು, ಸಿಂಹಾಸನಕ್ಕೆ ಹಕ್ಕುದಾರಳೆಂದು ಸಾರಿದ. ಜೇನ್‌ಗ್ರೇಗೆ ಅಧಿಕಾರ ಎಳ್ಳಷ್ಟೂ ಇಷ್ಟವಿರಲಿಲ್ಲ. ಆದರೆ ಕುತಂತ್ರಿಯಾದ ಅವಳ ತಂದೆ, ಅವಳನ್ನು ದುರಾದೃಷ್ಟದತ್ತ ನೂಕಿದ. ಗ್ರೇ ಕೇವಲ ಒಂಬತ್ತು ದಿನ ರಾಣಿಯಾಗಿದ್ದಳು.

ನ್ಯಾರ್ಥಂಬರ್‌ಲ್ಯಾಂಡಿನ ಡ್ಯೂಕ್‌ನನ್ನು ದ್ವೇಷಿಸಿದ ಜನ ಮೇರಿಯನ್ನೇ ರಾಣಿಯಾಗಿ ಆಯ್ಕೆ ಮಾಡಿದರು. ೧೫೫೩ರ ಜುಲೈ ೧೯ರಂದು ಮೇರಿ ವೈಭವದಿಂದ ರಾಜಧಾನಿಯನ್ನು ಪ್ರವೇಶಿಸಿದಳು. ಹರ್ಷದಿಂದ ನರ್ತಿಸಿದ ಜನ, ಅವರ ಆಸೆಯ ಚಿಲುಮೆಗಳೆಲ್ಲ ಬೇಗನೆ ರಕ್ತದಿಂದ ತುಂಬುತ್ತದೆಂದು ತಿಳಿದಿರಲಿಲ್ಲ. ಅಕ್ಟೋಬರ್ ಒಂದರಂದು ಕ್ಯಾಥೋಲಿಕ್ ಬಿಷಪ್ ಸ್ಟೀಫನ್ ಗಾರ್ಡಿನರ್ ವೆಸ್ಟ್‌ಮಿನಿಸ್ಟರ್‌ನಲ್ಲಿ ಮೇರಿಗೆ ಕಿರೀಟಧಾರಣೆ ಮಾಡಿಸಿದ. ಪ್ರಾಟೆಸ್ಟೆಂಟ್ ಪಾದ್ರಿ ಕ್ರಾನ್‌ಮರ್ ಆಗಲೇ ಸೆರೆಗೆ ತಳ್ಳಲ್ಪಟ್ಟಿದ್ದ.

ಮೇರಿಯೀಗ ತನ್ನ ವಿರೋಧಿಗಳನ್ನೆಲ್ಲ ನಿರ್ಮೂಲಗೊಳಿಸತೊಡಗಿದಳು. ಅವಳೆಷ್ಟು ನಿರ್ದಯಳಾಗಿ ವರ್ತಿಸಬಲ್ಲಳೆಂಬ ವಿಷಯ, ಬೇಗನೆ ಎಲ್ಲರಿಗೂ ಮನವರಿಕೆಯಾಗಿತ್ತು. ಮತೀಯ ಸಮಸ್ಯೆಗಳೇ ನಿದ್ದರೂ, ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು, ಅವಳು ಮದುವೆಯಾಗುವಂತೆ, ಅವಳ ಹಿತೈಷಿಗಳು ಒತ್ತಾಯಪಡಿಸತೊಡಗಿದರು. ಹಿಂದೆ ಅವಳ ಬೆಂಬಲಿಗನಾಗಿದ್ದ ಐದನೇ ಚಾರ್ಲ್ಸ್ ತನ್ನ ಮಗನನ್ನು ವಿವಾಹವಾಗುವಂತೆ ಮೇರಿಯ ಮೇಲೆ ಒತ್ತಾಯ ತಂದ. ವೈವಾಹಿಕ ಜೀವನದ ಬಗ್ಗೆ ತೀವ್ರ ಅನಾಸಕ್ತಿ ಹೊಂದಿದ್ದ ಮೇರಿ, ತನಗಿಂತ ೧೧ ವರ್ಷ ಕಿರಿಯನಾದ, ೨೭ ವರ್ಷದ ಫಿಲಿಪ್‌ನನ್ನು ವಿವಾಹವಾಗಲು ಸಿದ್ಧಳಿರಲಿಲ್ಲ. ಅಲ್ಲದೆ ಈ ವಿಹಾಹವನ್ನು ವಿರೋಧಿಸಿ, ಅಲ್ಲಲ್ಲಿ ನಡೆದ ದಂಗೆಗಳು ಮೇರಿಯ ಸ್ಥಿರತೆಯನ್ನು ಅಲುಗಾಡಿಸಿದವು. ಕೋಪದಿಂದ, ತನ್ನ ಶತ್ರುಗಳೆನಿಸಿದವರ ವಿರುದ್ಧ ತೀವ್ರ ಕಠಿಣ ನಿಲುವು ತಳೆದಳು. ಜೇನ್ ಗ್ರೇ ಹಿತಾಸಕ್ತರ ಕೈಗೊಂಬೆ ಎಂಬ ವಿಷಯವನ್ನು ಮೇರಿ ಅರಿತಿದ್ದರೂ, ಈಗವಳನ್ನು ತನ್ನ ಶತ್ರುವೆಂದೇ ಪರಿಗಣಿಸಿದಳು.

ಕರಿಯ ವಸ್ತ್ರ ಹೊದೆಸಿ, ಕರುಣಾಜನಕ ಸ್ಥಿತಿಯ ಹದಿನಾರರ ಬಾಲೆಯನ್ನು ದೇಶ ದ್ರೋಹಿಯೆಂದು ಸಾರಿ, ಮರಣ ದಂಡನೆಗೆ ಒಳಪಡಿಸಿದಳು.

ಇಂಗ್ಲೆಂಡಿನ ಅಶಾಂತ ಪರಿಸ್ಥಿತಿ, ಮೇರಿ ಇನ್ನೂ ಹೆಚ್ಚಿನ ದೃಢತೆಯಿಂದ, ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ಮಾಡಿದವು. ೧೫೫೪ರ ಜುಲೈನಲ್ಲಿ ಫಿಲಿಪ್‌ನೊಂದಿಗೆ ಮೇರಿಯ ವಿವಾಹ ವೆಸ್ಟ್ ಮಿನಿಸ್ಟರ್‌ನಲ್ಲಿ ನೆರವೇರಿತು. ಬಿಳಿಯುಡುಗೆ ತೊಟ್ಟ ಸುಂದರ ತರುಣ ಫಿಲಿಪ್‌ನನ್ನು ಕಾಯುವಂತೆ ಮಾಡಿ, ತಡವಾಗಿ ಬಂದ ಮೇರಿ ಸರ್ವಾಲಂಕೃತಳಾಗಿದ್ದಳು. ಈಗ ಮೇರಿ ನಿಜವಾಗಿ ಫಿಲಿಪ್‌ನನ್ನು ಪ್ರೀತಿಸಿದ್ದಳು. ಸಾರ್ವಜನಿಕವಾಗಿ ಫಿಲಿಪ್ ಅವಳಿಗೆ ಸಾಕಷ್ಟು ಗಮನವಿತ್ತರೂ, ತೀರಾ ಅನಾಕರ್ಷಕಳಾದ ಮೇರಿಯೊಂದಿಗಿನ ವೈವಾಹಿಕ ಜೀವನದ ಬಗ್ಗೆ ತೀರಾ ನಿರಾಸೆ ಹೊಂದಿದ್ದ. ಎರಡು ಬಾರಿ ಮೇರಿ ತಾನು ಗರ್ಭವತಿ ಎಂದು ಚರ್ಚ್‌ಗಳಲ್ಲಿ ಪೂಜೆ ಏರ್ಪಡಿಸಿದ್ದಳು. ಆದರೆ ರೋಗದಿಂದ ಅವಳ ಗರ್ಭಕೋಶ ಊದಿದ್ದರಿಂದ ಅವಳು ಗರ್ಭವತಿಯಂತೆ ಕಾಣುತ್ತಿದ್ದುದಷ್ಟೆ. ಅವಳ ಈ ಸ್ಥಿತಿ ಮಾತ್ರ ನಿಜಕ್ಕೂ ಕರುಣಾಜನಕ.

ಬಾಳಿನ ಈ ಎಲ್ಲ ನಿರಾಸೆಗಳೂ ಅವಳಲ್ಲಿನ ಕ್ರೌರ್ಯ ತುತ್ತತುದಿಗೇರುವಂತೆ ಮಾಡಿತ್ತು. ಪ್ರಾಟೆಸ್ಟೆಂಟರನ್ನು ಶಿಕ್ಷಿಸಿ, ಕ್ಯಾಥೋಲಿಕ್ ಧರ್ಮವನ್ನು ಪುನಃಸ್ಥಾಪಿಸಲು, ಎಚ್ಚರಿಕೆಯ ಹೆಜ್ಜೆ ಇಡಬೇಕೆಂದೂ ರಾಜಕೀಯ ಶತ್ರುಗಳು ಹಾಗೂ ದೇಶ ದ್ರೋಹಿಗಳನ್ನು ಶಿಕ್ಷಿಸುವುದರಲ್ಲಿ ಮೇರಿ ನಿರ್ದಾಕ್ಷಿಣ್ಯಳಾಗಿರಬೇಕೆಂದು ಹೇಳಿದ್ದ ಚಾರ್ಲ್ಸ್‌ನ ಪ್ರಾಟೆಸ್ಟೆಂಟರನ್ನು ನಿರ್ನಾಮ ಮಾಡುವ ಕೆಲಸ, ಅವಳ ಮದುವೆಯಾದ ಕೆಲ ತಿಂಗಳಲ್ಲಿ ಶುರುವಾಯಿತು.

೧೫೫೫ರ ಫೆಬ್ರವರಿಯಲ್ಲಿ, ಸ್ಮಿತ್‌ಫೀಲ್ಡ್‌ನಲ್ಲಿ ಸುಡಲ್ಪಟ್ಟ ಪಾದ್ರಿ ಜಾನ್ ರೋಜರ್ಸ್ ಅವಳ ಆಳ್ವಿಕೆಯ ಮೊದಲ ಹುತಾತ್ಮನಾದ. ಅದೇ ವಾರ ಲಾರೆನ್ಸ್ ಸ್ಯಾಂಡರ್ಸ್, ಡಾ|| ರ್‍ಔಲಂಡ್ ಟೇಲರ್ ಗ್ಲೌಸೆಸ್ಟರ್‌ನ ಪಾದ್ರಿ ಬಿಷಪ್ ಹೂಪರ್, ಒಬ್ಬೊಬ್ಬರಾಗಿ ಸುಡುಗಂಬಕ್ಕೆ ಆಹುತಿಯಾದರು. ಮತೀಯ ವಿರಸವಿದ್ದರೂ, ಹೂಪರ್ ಮೇರಿಗೆ ನಿಷ್ಠೆಯಿಂದಲೇ ನಡೆದುಕೊಂಡಿದ್ದರೂ, ಅವನನ್ನೇಕೆ ಮೇರಿ ಕೊಲ್ಲಿಸಿದಳೆಂದು ಯಾರಿಗೂ ಅರ್ಥವಾಗಲಿಲ್ಲ. ಜೇನ್‌ಗ್ರೇಗೆ ಬೆಂಬಲವಿತ್ತಿದ್ದ ಲ್ಯಾಟಿಮರ್ ಹಾಗೂ ಲಂಡನ್ನಿನ ಬಿಷಪ್ ರಿಡ್ಲೆಯನ್ನು, ಪರಸ್ಪರದ ಬೆನ್ನಿಗೆ ಸರಪಳಿಯಿಂದ ಬಿಗಿದು, ಸುಡುಗಂಬಕ್ಕೆ ಕಟ್ಟಲಾಯ್ತು. ಲ್ಯಾಟಿಮರ್ ಬೇಗ ಸತ್ತರೂ ರಿಡ್ಲೆಯ ಸಾವು ಅತ್ಯಂತ ಭೀಕರವಾಗಿತ್ತು. ಸಣ್ಣದಾಗಿ ಉರಿಯುತ್ತಿದ್ದ ಬೆಂಕಿ, ಅವನನ್ನು ನಿಧಾನವಾಗಿ ಬೇಯಿಸಿತು. ಜೀವಂತ ಕ್ರಾನ್‌ಮರ್‌ನ ಸುತ್ತ ಗೋಡೆ ಕಟ್ಟಿ ಕೊಲ್ಲಲಾಯ್ತು. ನಾಲ್ಕು ವರ್ಷಗಳ ಮೇರಿಯ ಆಳ್ವಿಕೆಯಲ್ಲಿ ಸುಡಲ್ಪಟ್ಟು ಹುತಾತ್ಮರೆನಿಸಿದ ೨೮೩ ಜನ ಪ್ರಾಟೆಸ್ಟೆಂಟರೂ ಸಾಮಾನ್ಯ ಸರಳ ಜೀವಿಗಳು. ಮೇರಿ ಮನಸ್ಸು ಮಾಡಿದ್ದರೆ, ಈ ನರಯಜ್ಞವನ್ನು ನಿಲ್ಲಿಸಬಹುದಾಗಿತ್ತು. ಆದರೆ ದಯೆ ಅನುಕಂಪವಿಲ್ಲದ ಅವಳ ಹೃದಯ ಕಲ್ಲಾಗಿತ್ತು.

ಫಿಲಿಪ್ ಉದಾರಿ, ಮೃದುಮನಸಿನವನೆನಿಸಿದರೂ ಅವನು ಮೇರಿಯಿಂದ ಮಾನಸಿಕವಾಗಿ ದೂರಸರಿದಿದ್ದ. ಇಂಗ್ಲೆಂಡಿನಲ್ಲಿ ನಡೆಯುತ್ತಿದ್ದ ಈ ಹತ್ಯೆ ಅವನನ್ನು ದಿಗ್ಭ್ರಮೆಗೊಳಿಸುತ್ತಿತ್ತು. ನಲವತ್ತರ ಗಡಿ ದಾಟಿಲ್ಲವಾದರೂ, ಮೇರಿಯ ಸುಕ್ಕುಗಟ್ಟಿದ ಮುಖ, ಬಿಗಿದ ಪುಟ್ಟ ಬಾಯಿ, ಅವಳ ಮಂದದೃಷ್ಟಿ ಇತರರೆಡೆಗೆ ದೀರ್ಘಕಾಲ ನೋಡುವ ಅವಳ ನೆಟ್ಟ ನೋಟ ದಿಗಿಲು ಹುಟ್ಟಿಸುತ್ತಿದ್ದವು. ಉತ್ತಮ ಉಡಿಗೆ, ಆಭರಣಗಳನ್ನು ತೊಟ್ಟಿದ್ದರೂ, ಅವಳಲ್ಲಿ ಸಂತಸ ಮೂಡಿಸುತ್ತಿರಲಿಲ್ಲ. ಅವಳ ರಾಜಸಭೆಯಲ್ಲಿ ಸ್ಮಶಾನ ಮೌನ ಆವರಿಸಿರುತ್ತಿತ್ತು. ದಿನಕ್ಕೆ ೩–೪ ಗಂಟೆಗೂ ಹೆಚ್ಚು ನಿದ್ರಿಸದ ಮೇರಿ, ದಿನಕ್ಕೆ ೯ ಬಾರಿ ಪ್ರಾರ್ಥನೆ ಮಾಡಿ, ರಾಜಕಾರ್ಯಗಳ ಬಗ್ಗೆ ಹೆಚ್ಚು ಶ್ರಮ ವಹಿಸುತ್ತಿದ್ದಳು. ರಾಜಕಾರ್ಯದ ಪ್ರಯುಕ್ತ ದೂರ ದೇಶಗಳಿಗೆ ಫಿಲಿಪ್ ಹೋಗಬೇಕಾದಾಗ ಮೇರಿ ಅತ್ಯಂತ ದುಃಖಿಯಾಗುತ್ತಿದ್ದಳು.

ಫಿಲಿಪ್ ಬಳಿ ಇಲ್ಲದೆ, ಅವಳ ಬಂಜೆತನದರಿವು ಎಲ್ಲರಿಗೂ ಆದಾಗ ಮೇರಿ ತನ್ನೆಲ್ಲ ಕೋಪವನ್ನು ಅಸಂಪ್ರದಾಯವಾದಿಗಳ ಮೇಲೆ ತೋರತೊಡಗಿದಳು. ಅಪರಾಧಿಗಳೆನಿಸಿದವರ ವಿಚಾರಣೆ ಕೂಡ ನಡೆಸುತ್ತಿರಲಿಲ್ಲ. ಸುಡುಗಂಬಕ್ಕೆ ಹೋಗುತ್ತಿದ್ದ ಹುತಾತ್ಮರಿಗೆ ನಮಸ್ಕರಿಸಿ, ಅವರಿಂದ ಆಶೀರ್ವಾದ ತೆಗೆದುಕೊಳ್ಳುತ್ತಿದ್ದ ಜನರ ಮೇಲೆ ಮೇರಿಯ ಕೋಪವುಕ್ಕಿ, ಅವರನ್ನು ಬಂಧಿಸುವಂತೆ ಆಜ್ಞೆ ಮಾಡುತ್ತಿದ್ದಳು. ಜನರ ಮೇಲಿನ ಈ ಕರಾಳ ದೌರ್ಜನ್ಯವನ್ನು ನೋಡಲಾಗದೆ ವಿರೋಧಿಸಿದ ವ್ಯಕ್ತಿಯನ್ನು ರಸ್ತೆಯಲ್ಲಿ ಚಾವಟಿಯಿಂದ ಥಳಿಸಲಾಗುತ್ತಿತ್ತು.

೧೫೫೭ರಲ್ಲಿ ಫಿಲಿಪ್ ಇಂಗ್ಲೆಂಡಿಗೆ ಮರಳಿದ್ದು ಮೇರಿಯ ಮೇಲಿನ ಪ್ರೀತಿಯಿಂದಲ್ಲ; ರಾಜಕೀಯ ಕಾರಣಗಳಿಗಾಗಿತ್ತು. ೧೫೫೮ರಲ್ಲಿ ಮೇರಿ ಗರ್ಭಾಶಯದ ತೊಂದರೆಯಿಂದ ತೀವ್ರ ಅನಾರೋಗ್ಯ ಹೊಂದಿದಳು. ಇದರ ನಡುವೆ ಫ್ರಾನ್ಸಿನ ವಿರುದ್ಧ ಸಾರಿದ ಯುದ್ಧದಲ್ಲಿ 'ಕೆಲೇಸ್' ಕೈಬಿಟ್ಟು ಹೋಗಿತ್ತು. ಈಗ ಸದಾ ಮೇರಿ ಕೈಬಿಟ್ಟು ಹೋದ ಕೆಲೇಸ್‌ಗಾಗಿಯೂ, ಫಿಲಿಪನಿಗಾಗಿಯೂ ಅಳುತ್ತಿದ್ದಳು. ಅಸಂಪ್ರದಾಯವಾದಿಗಳ ಮೇಲಿನ ಯುದ್ಧದಲ್ಲವಳು ಸೋತಿದ್ದಳು. ಮೇರಿ ಈಗ ಕುಗ್ಗತೊಡಗಿದಳು. ನವೆಂಬರ್ ಹತ್ತರಂದು ಮೇರಿ ಐವರಿಗೆ ಮರಣದಂಡನೆ ವಿಧಿಸಿದಳು. ಸ್ವತಃ ಮರಣದಂಚಿನಲ್ಲಿದ್ದರೂ, ಮತ್ತಿಬ್ಬರ ಹತ್ಯೆಗೆ ಸಹಿ ಹಾಕಿದಳು. ಆದರೆ ಆ ಆಜ್ಞೆ ಜಾರಿಗೆ ಬರುವಷ್ಟರಲ್ಲೇ ನವೆಂಬರ್ ೧೭ರಂದು ಮೇರಿ ಮರಣ ಹೊಂದಿದ್ದಳು. ಬೆಳಗಾಗಿ ಆ ಇಬ್ಬರು ಅದೃಷ್ಟಶಾಲಿಗಳನ್ನು ಬಿಡುಗಡೆ ಮಾಡಲಾಯಿತು. ಮೇರಿಯ ಕ್ರೂರ ಆಡಳಿತದ ಪರಿಣಾಮದಿಂದ ಚೇತರಿಸಿಕೊಳ್ಳಲು ಕ್ಯಾಥೋಲಿಕ್ ಪಂಥಕ್ಕೆ ಶತಮಾನಗಳೇ ಬೇಕಾದವು.

ಸದಾ ಸೂರ್ಯೋದಯವಿರುವಲ್ಲಿ

ಸರಸ್ವತಿ ಬುಡೆಕ್ಕಿಲ
ಎಂ. ೪೭, ೩ನೇ ಹಂತ, ಜೆ.ಟಿ.ಕೆ. ಬಡಾವಣೆ,
ಕುವೆಂಪು ನಗರ, ಮೈಸೂರು-೫೭೦ ೦೨೩

'ಏಳು ಎದ್ದೇಳು' ತಾಯಿಯ ಮೆಲುದನಿ. ಧುಗ್ಗನೆ ಕಣ್ಣು ತೆರೆಯುತ್ತೇನೆ. ಸೂರ್ಯೋದಯಕ್ಕೆ ಮೊದಲಿನ ನಸುಕು. ನಿದ್ದೆ ಇನ್ನೂ ಕವಿದೇ ಇದೆ. ಸುತ್ತ ನೋಟ ಹರಿಸಿದರೆ ಮಸುಕಾಗಿ ಕಾಣುವ ಬಾಗಿಲ ಪರದೆ. ಬೇಸಿಗೆಯ ರಜಾದಿನಗಳಿಗಾಗಿ ಮರದದಿಮ್ಮಿಗಳಿಂದ ಕಟ್ಟಿದ ಕುಟೀರವಿದು. ಪಾಚಿ ಹಸಿರು ಬಣ್ಣ ಹಚ್ಚಿದ ತೂಗು ಮಂಚದಲ್ಲಿ ನಾನು ; ಅಮ್ಮ, ಅಕ್ಕ ಮಲಗುವ ಜೋಡಿ ಮಂಚ, ಪಕ್ಕದಲ್ಲಿರುವ ಬರ್ಚ್‌ಮರದ ಕಾಲಿನ ಲೋಹದ ಮೇಜು, ಅದರ ಮೇಲೆ ಮುಸಿಕಟ್ಟಿ ಮಂಕಾದ ಸೀಮೆ ಎಣ್ಣೆಯ ಲಾಟೀನು, ಎಲ್ಲ ಅಸ್ಪಷ್ಟವಾಗಿ ಕಾಣಿಸುತ್ತಿವೆ. ಬೆಳಗಿನ ತಂಗಾಳಿ ಮುಖವನ್ನು ಸ್ಪರ್ಶಿಸುತ್ತಿದೆ. ಬೆಚ್ಚನೆಯ ಹೊದಿಕೆಯೊಳಗೆ, ಇನ್ನೂ ಮಲಗುವ ಆಸೆ. ಹಾಗೇ ಸುರುಳಿ ಸುತ್ತಿ ಮುದುರಿಕೊಳ್ಳುತ್ತೇನೆ.

'ಏಳು ಏಳು' ಅಮ್ಮ ಮತ್ತೆ ಎಚ್ಚರಿಸುತ್ತಾಳೆ. "ಸೂರ್ಯೋದಯದಲ್ಲಿ ಎಂಥ ದಿವ್ಯ ವೈಭವವಿದೆ ಗೊತ್ತೆ?" ಪರದೆ ಸರಿಸಿ ಬಾಗಿಲು ತೆರೆದು ಸದ್ದಾಗದಂತೆ ಕದವಿಕ್ಕಿ ಸರೋವರದೆಡೆಗೆ ನಡೆದುಬಿಟ್ಟಿದ್ದಾಳೆ. ನನ್ನಂಥ ಹದಿನಾಲ್ಕರ ಹುಡುಗರ ಆಸೆಗಳಲ್ಲಿ ಕೊನೆಯದೆಂದರೆ "ಮೂಡುವ ರವಿಯನು ನೋಡುವುದು!" ಹೊರಗೆ ಮಯ್ ಮರಗಟ್ಟಿಸುವ ಚಳಿ ಇದೆ. ಹದಿನೇಳರ ನನ್ನ ಸೋದರಿ ಹೊದಿಕೆಗಳನ್ನು ತಳ್ಳಿ ಎದ್ದು ಕುಳಿತ್ತಿದ್ದಾಳೆ. ನಾನು ಮಹಾ ಪ್ರಯತ್ನದ ಹೋರಾಟ ನಡೆಸಿ ಎದ್ದುಬಿಡುತ್ತೇನೆ, ಅಂತೂ! ನಾವಿಬ್ಬರೂ ನಮ್ಮ ತಂದೆಯ ಎರಡನೇ ಮಹಾಯುದ್ಧದ ಕಂಬಳಿಗಳನ್ನು ರಾತ್ರಿಯ ಹತ್ತಿಯುಡುಗೆಯ ಮೇಲೆ ಬಿಗಿಯಾಗಿ ಹೊದ್ದುಕೊಳ್ಳುತ್ತೇವೆ. ನಮ್ಮ ನಡಿಗೆ ವೇಗವಾಗಿದೆ. ಹೊರಬರುವ ಅವಸರದಲ್ಲಿ ನಮ್ಮಲ್ಲೊಬ್ಬರ ಕೈಗೆ ಬಾಗಿಲ ಹಿಡಿಕೆ ಸರಿಯಾಗಿ ಎಟಕುವುದಿಲ್ಲ. ಬಾಗಿಲಪಡಿ 'ಧಡ್ಡೆ'ಂದು ಮುಚ್ಚಿಕೊಳ್ಳುತ್ತದೆ.

ಮೆದು ಹೆಜ್ಜೆಗಳನ್ನಿಡುತ್ತಾ ಬೂಟುಗಾಲಿನಲ್ಲಿ ಮುಳ್ಳು ಕಂಬಿಯ ದಾರಿಯಲ್ಲಿ, ಜಾರುಬಂಡೆಗಳ ಮೇಲೆ ನೆಗೆದು ಜಾರಿ ಸಾವರಿಸಿಕೊಳ್ಳುತ್ತೇವೆ. ಮುಂದೆ ಸರೋವರದ ತೀರದವರೆಗೆ ತಲುಪಲು ಇಬ್ಬನಿ

ಮೂಲ: ೧೯೯೫ರ ಅಕ್ಟೋಬರ್ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ 'ವೇರ್ ದಿ ಸನ್ ಆಲ್‌ವೇಸ್ ರೈಸಸ್' ಲೇಖನ.

...ರುಚ್ಚಿದ ನಲುವತ್ತೊಂಬತ್ತು ಮೆಟ್ಟಿಲು
...ಗಳ ಮರದ ದಿಮ್ಮಿಯೊಂದಿದೆ. ಜಾಗರೂ
...ಕತೆಯಿಂದ ಮೆಟ್ಟಿಲಿಳಿದು ತೀರಕ್ಕೆ ಓಡು
ತ್ತೇವೆ. ನೀರಲ್ಲಿ ನೆನೆದ ಮರಳ ಮೇಲೆ
ಉಸಿರು ಬಿಗಿ ಹಿಡಿದು ನಿಂತು ದೂರದ
ವರೆಗೂ ಚಾಚಿದ ನಿಶ್ಚಲ ಜಲಾಶಯದ
ಆಚೆ ನಿಬಿಡವಾಗಿ ಬೆಳೆದ ಕಾಡುಮರ
ಗಳ ಮಬ್ಬು ಕತ್ತಲನ್ನು, ಅವರಾಚೆ ಪೂರ್ವ
ದಿಗಂತವನ್ನು ಎವೆಯಿಕ್ಕದೆ ನಿಟ್ಟಿಸುತ್ತೇವೆ.
ಮೆಲ್ಲಮೆಲ್ಲನೆ ಬಾನ ಅಂಚಿನಲ್ಲಿ ಕೆಂಪು ಬೆಳಕಿನ
ಹೊಳೆ ಹೊಳೆವ ಗೆರೆಗಳು ಮೂಡಿ ಹರಡಿ
ಕೊಳ್ಳುತ್ತಿವೆ. ಆಗಸವು ಆರಕ್ತವಾಗ
ತೊಡಗುತ್ತದೆ. ಕಾಡು ಮರಗಳ ಮೇಲ್ತುದಿ
ಯಲ್ಲ ಕೆಂಪು ಬೆಳಕಿನ ಚಾದರದಿಂದ ಆವೃತ
ಗೊಳ್ಳುತ್ತಿದೆ. ಮುಂಬೆಳಗಿನ ಪ್ರಥಮ
ಕಾಂತಿ ರೇಖೆಗಳು ಅಮ್ಮನ ಮೃದು
ಕೂದಲ ಮೇಲೆ ಅರುಣರಾಗವನ್ನು ಸವರು
ತ್ತಿವೆ; ಲೆವೆಂಡರ್, ಗುಲಾಬಿ, ನಸುಗೆಂಪು,
ಕಿತ್ತಳೆ, ಹಳದಿಯಾಗಿ ಹಲವು ಬಣ್ಣ
ಗಳೊಡೆದು ಚಿಗುರಿದಂತೆ, ಮೂಡುದಿಕ್ಕಿಂದ
ಜೀವತುಂಬಿ ಬಂದಂತೆ, ಚಿಮ್ಮಿ ಆಕಾಶದಗ
ಲಕ್ಕೂ ಹಾಸತೊಡಗಿವೆ. ಮಸುಕಾಗಿದ್ದ
ಜಲರಾಶಿ ಆಕಾಶದ ರಂಗನ್ನೆಲ್ಲ ಬಾಚಿ
ತಬ್ಬಿಕೊಂಡಂತೆ ಬಣ್ಣಗೊಳ್ಳತೊಡಗಿದೆ.
ಬಾನಲ್ಲಿ ನೆತ್ತಿಯ ಮೇಲೆ ಕಡು ನೀಲಿಯ
ನಡುವೆ ತಾರೆಯೊಂದು ಇನ್ನೂ ಮಿನುಗು
ತ್ತಲೇ ಇದೆ. ಬೆಳ್ಳಿಮಂಜು ಸರಸ್ಸಿನ ಶಾಂತ
ಜಲದಿಂದೆದ್ದು ಮೇಲಕ್ಕೇರತೊಡಗಿದೆ.
ಎಲ್ಲೆಡೆ ನಿಶ್ಶಬ್ದ; ನಿಶ್ಚಲತೆ! ಥಟ್ಟನೆ
ಮಂಜು ಸರಿದು ಸೂರ್ಯಬಿಂಬದ ಪರಿಧಿ
ರೇಖೆಯ ಕಂಸವೊಂದು ಪ್ರಕಾಶಮಾನವಾಗಿ
ಥಳಥಳಿಸುತ್ತಾ ಕಾಡಿನ ಕತ್ತಲನ್ನು ಭೇದಿ
ಸುತ್ತಾ ಹೊರಬಂದಿದೆ. ಅಷ್ಟರಲ್ಲಿ, ವಿಶ್ವವೆಲ್ಲ
ಎಚ್ಚರಗೊಳ್ಳಲೆಂದು, ಗಾಳಿಯನ್ನು ಬಡಿ
ದೆಬ್ಬಿಸುತ್ತಾ, ಉದ್ದಕಾಲಿನ, ನೀಲಕೊರ
ಳಿನ ನೀಲಿಕೊಕ್ಕರೆ ದೂರದಾಚೆಯ ತೀರ
ದಿಂದ ಜಿಗಿದೆದ್ದು, ನೀರಮೇಲೆ ರೆಕ್ಕೆಗಳನ್ನು
ಬೀಸುತ್ತಾ, ನೀರನ್ನು ತಡವುತ್ತಾ ನಿಧಾನ
ವಾಗಿ ಹಾರಿಹೋಗುತ್ತಿದೆ. ಅದೋ! ಬಾತು
ಗಳೆರಡು ಎಲ್ಲಿಂದಲೋ ಹಾರಿ ಬಂದು
ಸರೋವರದಲ್ಲಿ ಅಲೆ ಎಬ್ಬಿಸತೊಡಗಿವೆ.
ಇತ್ತಲೊಂದು ನೀರಹಕ್ಕಿ ಬೆಳಗಿನ ಆಹಾರ
ಅರಸುತ್ತಾ ನೀರತಡಿಯಲ್ಲೇ ಸಾಗಿ ಅತ್ತ
ಕಡೆಯ ನಡುಗಡ್ಡೆಯ ಬಳಿ ಸಾರಿದೆ.

ಮುಂಜಾವದ ಕುಳಿರ್ಗಾಳಿಯ ಉಸಿರೆಳೆವ
ನಾವು ಮೂವರು ನಮ್ಮ ಹೊದಿಕೆಗಳನ್ನು
ಇನ್ನೂ ಬಿಗಿಗೊಳಿಸುತ್ತೇವೆ. ಬಣ್ಣಬಣ್ಣದ
ಕಿರಣ ಪುಂಜಗಳು ಇಷ್ಟರಲ್ಲಿ ಹೊಸ ದಿನದ
ಆಗಮನದೊಡನೆ ಪ್ರಖರವಾಗತೊಡಗಿವೆ.
ಬಿಳುಪೇರತೊಡಗಿವೆ. ಮಿನುಗುತ್ತಿದ್ದ
ನಕ್ಷತ್ರವೀಗ ಮಾಯವಾಗಿದೆ. ಮೇಲೇಳು
ತ್ತಿರುವ ಬಂಗಾರದ ಚೆಂಡಿನಂಥ ಬಾಲ
ಸೂರ್ಯನನ್ನು ನೋಡುತ್ತಾ ತುಸು
ಹೊತ್ತು ನಾನು, ನನ್ನ ಅಕ್ಕ, ಪೂರ್ವ
ದಿಕ್ಕಿಗೆ ಬೆನ್ನಿಕ್ಕಿ ಮೆಟ್ಟಲೇರುತ್ತೇವೆ.
ಮತ್ತೊಮ್ಮೆ ಅಲ್ಲೇ ನಿಂತು ಪುನಃ
ಸೂರ್ಯನನ್ನು ನೋಡುತ್ತಾ ನಮ್ಮ ಮನೆ
ಯೊಳಗೋಡಿ, ನಮ್ಮ ಹಾಸಿಗೆಯ ಮೇಲೆ,
ಹೊದಿಕೆಯೊಳಗೆ, ಹುದುಗಿಕೊಳ್ಳುತ್ತೇವೆ.

ನನ್ನ ತಾಯಿ ಮುಂಬೆಳಗಿನ ಈ ದೃಶ್ಯ
ಕಾವ್ಯವನ್ನು ಆಸ್ವಾದಿಸುವುದರಲ್ಲೇ ಮಗ್ನ
ಳಾಗಿದ್ದಾಳೆ. ತದೇಕಚಿತ್ತಳಾಗಿ ಅಲ್ಲೇ,
ಕದಲದೆ ನಿಂತಿದ್ದಾಳೆ. ಪ್ರಕೃತಿ ತೆರೆದಿರಿಸಿದ
ಆ ಅದ್ಭುತ ರಂಗಶಾಲೆಯಿಂದೀಚೆಗೆ ಬರಲು

ಆಕೆಗೆ ಒಪ್ಪಿಗೆ ಇಲ್ಲ. ಸ್ವಲ್ಪ ಹೊತ್ತಿನ ಮೇಲೆ ಅವಳ ಪದಧ್ವನಿ ಮರದ ದಿಮ್ಮಿಯ ಕೊನೆಯ ಮೆಟ್ಟಿಲಿಂದ ಕೇಳಿ ಬರುತ್ತದೆ. ಮತ್ತೆ ನಿಧಾನವಾಗಿ ಪರದೆ ಸರಿಸಿ ಕದವಿಕ್ಕಿದ ಸದ್ದಿಲ್ಲದ ಸದ್ದು.

* * *

'ಏಳಿ! ಏಳಿ!' ಪಿಸುದನಿಯಿಂದ ಎಚ್ಚರಿಸುತ್ತೇನೆ. ಮರದ ದಿಮ್ಮಿಗಳ ಆ ಕುಟೀರದೊಳಗೆ ಹಳೆಯ ಲೋಹದ ಮಂಚದಲ್ಲಿ ಮಲಗಿ ನಿದ್ರಿಸುತ್ತಿದ್ದಾರೆ, ನನ್ನ ಹದಿಹರೆಯದ ಹುಡುಗರಿಬ್ಬರು. 'ಬನ್ನಿ, ಸೂರ್ಯೋದಯ ನೋಡಿ! ಅದೆಷ್ಟು ಅದ್ಭುತವಾಗಿದೆ!' ಮತ್ತೆ ಎಚ್ಚರಿಸುತ್ತೇನೆ.

ಇಬ್ಬರು ಎರಡನೇ ಮಹಾಯುದ್ಧದ ಸೈನಿಕರ ಕಂಬಳಿಗಳನ್ನು ಮಂಚದಿಂದ ಸೆಳೆದು ಹೊದ್ದು ನಿದ್ದೆಯ ಗುಂಗಿನಲ್ಲೇ ಆ ಮರದ ಗೂಡಿಂದ ಬೀಳುತ್ತೇಳುತ್ತ ಹೊರ ಬರುವುದನ್ನು ವೀಕ್ಷಿಸುತ್ತೇನೆ. ಬಾಗಿಲು 'ಧಡ್' ಎಂದು ಬಡಿಯುತ್ತದೆ. ಪರ್ವತಾರೋಹಿಗಳ ಚಾಕಚಾಕ್ಯತೆಯಲ್ಲಿ ಮುಳ್ಳುಕಂಬಿಗಳ ನಡುವೆ ಜಾರುಬಂಡೆಗಳ ಮೇಲೆ ಜಿಗಿಯುತ್ತಾ ಇಳಿಯುತ್ತಾರೆ. ಅವರ ಬೂಟುಗಾಲು ಇಬ್ಬನಿಯಿಂದ ತೊಯ್ದ ನಲವತ್ತೊಂಬತ್ತು ಮೆಟ್ಟಿಲುಗಳ ದಿಮ್ಮಿಯ ಮೇಲಿಂದ ನೀರತೀರದವರೆಗೂ ನಡೆದಿದೆ.

ಅವರ ಅಜ್ಜಿ ಮೊದಲೇ ಅಲ್ಲಿ ನಿಂತಿದ್ದಾಳೆ. ಅವಳ ಕೆಂಪುಗೂದಲಲ್ಲಿ ಬಿಳಿಯ ಗೆರೆಗಳು ಮೂಡಿವೆ. ಬಿರಿದರಳುವ ಮುಗುಳು ನಗೆಯ ಮೌನದಿಂದ ಬೆಳಗುತ್ತಾ ಆಕೆ ನಮ್ಮನ್ನು ಸ್ವಾಗತಿಸುತ್ತಾಳೆ. ತನ್ನ ಹೊದಿಕೆಯನ್ನು ಬಿಗಿಯಾಗಿ ಬಂಧಿಸಿಕೊಳ್ಳುತ್ತಾ ಪೂರ್ವಕ್ಕೆ ತಿರುಗುತ್ತಾಳೆ. ನನ್ನ ಹುಡುಗರು ನೆಟ್ಟ ನೋಟದ ಏಕಾಗ್ರತೆಯಿಂದ ನೋಡುತ್ತಿದ್ದಾರೆ. ಆಗಸವನ್ನೆಲ್ಲ ತುಂಬುತ್ತಿದೆ. ಸೂರ್ಯನ ಹೊನ್ನ ಕಾಂತಿ, ಗಾಢ ಬಣ್ಣಗಳ ಕಾರಂಜಿಯನ್ನೇ ಚಿಮ್ಮಿಸುತ್ತಾ ಏರುತ್ತಿದೆ, ಸೋರುತ್ತಿದೆ ಸೂರ್ಯಬಿಂಬದ ಅಂಚು.

ಗಿಡಮರಗಳು, ಖಡ್ಗಮೃಗಗಳು, ಜೀವಜಗವೆಲ್ಲ, ಮತ್ತೆ ಸರೋವರವೂ, ಎಚ್ಚರಗೊಳ್ಳುವ ತುಸುವೇ ಮೊದಲಿನ ಉಷಃಕಾಲ ಕಳೆದಿದೆ. ಅದೋ, ನೀಲಕೊರಳ ಉದ್ದಕಾಲಿನ ನೀಲಿಕೊಕ್ಕರೆ ನೀರ 'ಕೆನ್ನೆ'ಯನ್ನು ಮೆಲುವಾಗಿ ಮುಟ್ಟಿ ತಟ್ಟಿ ಎಚ್ಚರಿಸುತ್ತಾ ಹಾರಲಿದೆ ಇದೀಗ. ನೀರಹಕ್ಕಿಯ ಮಧುರ ಸುಸ್ವರ ಕೇಳಲಿದೆ ಇದೋ ಈಗ!

"ಸುಂದರವಾಗಿದೆಯಲ್ಲಾ ಈ ದೃಶ್ಯಾವಳಿ?" ಎಳೆಯರ ಕಿವಿಯ ಬಳಿಯಲ್ಲೇ ಮೆಲುವಾಗಿ ನುಡಿಯುತ್ತೇನೆ. ಕಿಶೋರರಿಬ್ಬರೂ ಮೌನವಾಗಿ ತಲೆದೂಗುತ್ತಾರೆ; ಕೆಲವು ಕ್ಷಣ ಅಲ್ಲಿ ಬಾನಲ್ಲೇ ಕಣ್ಣಿಟ್ಟು ಮತ್ತೆ ಮನೆಯ ಕಡೆ ತಿರುಗುತ್ತಾರೆ. ಕಂಬಳಿಗಳ ಜೋಲಾಡುವ, ಸಡಿಲುಗೊಂಡ ಜವುರಿಗಳನ್ನೆತ್ತಿ ಬಿಗಿಹಿಡಿದು, ಮತ್ತೊಮ್ಮೆ ಬೆಚ್ಚನೆಯ ಹಾಸಿಗೆಯಲ್ಲಿ ಹುದುಗಿಕೊಳ್ಳಲಿಕ್ಕಾಗಿ ಓಡೋಡಿ ಮರದ ಮೆಟ್ಟಲು ಹತ್ತುತ್ತಾರೆ.

ನನ್ನ ತಾಯಿ, ನಾನು, ಅಲ್ಲೇ ಉಳಿಯುತ್ತೇವೆ. ಗಾಢಸನಿಹದಲ್ಲೇ ನಿಂತು, ಸುಳಿಸುಳಿಯಾಗಿ ಮೇಲೆದ್ದು ಮುಸುಕಲೆಳಸುವ ಬಿಳಿನೀಲಿ ಮುತ್ತಿನ ಬಣ್ಣದ ಮಂಜನ್ನು, ಸರ್ರನೆ ಮೇಲೇರಿ, ನಮ್ಮ ನೆತ್ತಿಯ

...ಮೇಲಿನ ನೀಲಾಕಾಶದಲ್ಲಿ ರೆಕ್ಕೆ ಬಿಚ್ಚಿ ...ಗಾಂಭೀರ್ಯದಿಂದ ಹಾರುತ್ತಾ ಹೋಗುವ ...ಹದ್ದನ್ನು ನೋಡುತ್ತಾ ನಿಲ್ಲುತ್ತೇವೆ. ...ಬಾಲ ರವಿಯ ಕಿರಣಗಳಿಂದ ನಮ್ಮ ...ಮುಖಗಳು ನಸುಬೆಚ್ಚಗಾಗುತ್ತವೆ.

...ನಾವಿಬ್ಬರೂ ಕುಟೀರದ ಕಡೆಗೆ ಹೆಜ್ಜೆ ಇಡುತ್ತೇವೆ. ನಿಧಾನವಾಗಿ ಮೆಟ್ಟಲೇರುತ್ತೇವೆ. ಅರ್ಧ ಏರಿ ಅಲ್ಲೇ ನಿಂತು ಹಿಂದೆ ಅಮ್ಮ ಏನು ಮಾಡುತ್ತಿದ್ದಾಳೆಂದು ನೋಡುತ್ತೇನೆ. ಮೆಟ್ಟಿಲ ದಾರಿಯಲ್ಲಿ ತಾಯಿ ಕಾಣಿಸುತ್ತಿಲ್ಲ. ಅವಳು ಮನ ಬದಲಿಸಿರಬೇಕು. ಮರಗಳೆಡೆಯ ಕಿರಣಗಳ ನಡುವೆ ಆಕೆ ಕಾಣಿಸುತ್ತಿದ್ದಾಳೆ. ನೀರತಡಿಯಲ್ಲಿ ನಿಸ್ತಬ್ಧಳಾಗಿ ನಿಂತ ಆಕೆಯ ಕಾಂತಿಪೂರ್ಣ ಬಿಳಿಗೂವಲ ರಾಶಿ ಹೊಳೆ ಹೊಳೆದು ಮಂಜಿನೊಡನೆ ತೇಲುತ್ತಾ ರವಿಯ ಹೊಂಬಣ್ಣದ ಕಾಂತಕಿರಣಗಳ ಮೇಲೇರ ಬಯಸುವಂತೆ ಕಾಣುತ್ತಿದೆ.



ಶುದ್ಧವಾದ ಆಹಾರದಿಂದ ಶುದ್ಧ ರಕ್ತ ಮತ್ತು ಶುದ್ಧ ಮನಸ್ಸು ಲಭಿಸುತ್ತದೆ. ಶುದ್ಧ ಮನಸ್ಸಿನಲ್ಲಿ ಭಕ್ತಿ ಹುಟ್ಟುತ್ತದೆ. ದೃಢ ಭಕ್ತಿಯಿಂದ ಎಲ್ಲವನ್ನೂ ಸಾಧಿಸಬಹುದು.

—ಶಾರದಾದೇವಿ

ದೊಡ್ಡವರು ಇತರರ ತಪ್ಪುಗಳನ್ನು ಮರೆಯುತ್ತಾರೆ. ಆದರೆ ಸಣ್ಣವರು ಇತರರ ತಪ್ಪುಗಳನ್ನು ಎಲ್ಲರಿಗೂ ಜಾಗಟೆಹೊಡೆದು ಹೇಳುತ್ತಾರೆ.

—ತಿರುಕ್ಕುರಳ್

ಗುಟಕಾ ನಂಟು ಸಾವಿಗೆ ಗಂಟು

ಡಾ|| ಕರವೀರಪ್ರಭು ಕ್ಯಾಲಕೊಂಡ
೨೦೩, ಶಸ್ತ್ರಚಿಕಿತ್ಸಾವಿಭಾಗ, ಕೆ.ಎಂ.ಸಿ ಆಸ್ಪತ್ರೆ
ಹುಬ್ಬಳ್ಳಿ-೫೮೦೦೨೨

ಪರೀಕ್ಷಿದ್ರಾಜ-ತಕ್ಷಕದಂಶನ ಪ್ರಕರಣ ತಿಳಿಸುವುದೇನು ? ಎಂಥ ಸುಭದ್ರ ರಕ್ಷಣಾ ವಲಯಗಳ ನಡುವೆ ವ್ಯಕ್ತಿ ಇದ್ದರೂ "ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ" ಎಂಬ ಚಿರಂತನ ಜೀವನ ಮೌಲ್ಯವನ್ನ. ಜಾತಸ್ಯ ಮರಣಂ ಧ್ರುವಂ ಎಂದು ಇದನ್ನು ಹಾಗೆಯೇ ಬಿಡುವುದು ಮಾರಿಗೌತಣ ಸಿದ್ಧಪಡಿಸಿದಂತೆ. ಇಲ್ಲಿಯ "ಇದು" ಯಾವುದು ಗೊತ್ತೇ ? ಅದರ ಇಂದಿನ ಅವತಾರ ಗುಟಕಾ : ಮಾದಕ ಪದಾರ್ಥದ ಮೋಹಕ ನಾಮ ! ಇದು ವಿಷ, ಬದುಕಿಗೆ ಮಾರಕ, ಆರೋಗ್ಯ ಶೋಷಕ, ಆದರೆ ಈ ಒಂದನ್ನೂ ಅರಿಯದೇ ಕೇವಲ ಗುಟಕಾದ ಆಕರ್ಷಕ ವರ್ಣವೈವಿಧ್ಯಕ್ಕೆ ಮರುಳಾಗಿ ಜಾಹೀರಾತಿನ ಅಮಲಿಗೆ ವಶರಾಗಿ, ವಿಶೇಷತಃ ಯುವಜನಾಂಗ ಗುಟಕಾ ದಾಸ್ಯಕ್ಕೆ ಬೀಳುತ್ತಿದೆ. ಸರ್ಕಾರ ಈ ದಿಶೆಯಲ್ಲಿ ಏನು ಮಾಡಲಿ ಮಾಡದಿರಲಿ ನೀವೇನು ಮಾಡಬಹುದು ? ಗುಟಕಾ ಮತ್ತು ಇತರ ಮಾದಕ ಪದಾರ್ಥಗಳಿಂದ ದೂರವಿರುವುದು, ನಿಮ್ಮ ಪರಿಚಯದವರಿಗೆ ಈ ವಿಚಾರವನ್ನು ತಿಳಿಸುವುದು, ವಿಶೇಷವಾಗಿ ನಿಮ್ಮ ಮಕ್ಕಳ ಬಗ್ಗೆ ಅತಿಶಯ ಎಚ್ಚರಿಕೆ ವಹಿಸುವುದು.

ಹೊಸ ಪಿಡುಗೊಂದು ಇಂದಿನ ಯುವ ಜನಾಂಗವನ್ನು ಮುತ್ತಿದೆ. ಮೌಲ್ಯಗಳನ್ನು ಮೂಲೆಗೊತ್ತಿ, ಆನಂದದ ಅಮಲಿನಲ್ಲಿ ಅಲೆದಾಡಬಯಸುವ, ಅರಿವಿಲ್ಲದಂತೆ ಜಡ್ಡು ಜಾಪತ್ರೆಗಳನ್ನು ಆದರದಿಂದ ಸ್ವಾಗತಿಸುವ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಸುವ ನಮ್ಮ ಸಾಮಾಜಿಕ ಬದುಕಿಗೆ ಅದು ರನ್ನಗನ್ನಡಿ ಹಿಡಿದಿದೆ. ಅಪ್ರಾಪ್ತ ವಯಸ್ಕರೂ ಈ ಚಟಕ್ಕೆ ಬಲಿ ಆಗುತ್ತಿರುವುದು ಅನಾರೋಗ್ಯದ ಬೆಳವಣಿಗೆ. ಇದಕ್ಕೆ ನಮ್ಮ ಜಾಹಿರಾತು ಜಗತ್ತು ಕಾಣಿಕೆಯನ್ನು ಕೊಡನೇ ಬಿಟ್ಟಿಲ್ಲ. ಇಂಥ ಹದಗೆಟ್ಟ ವಾತಾವರಣದಲ್ಲಿ ಬೆಳೆವ ಎಳೆಯರು ಹಾದಿ ತಪ್ಪುವುದು ಸಹಜ. ಹೀಗಾಗಿ ಇಂದು ಶಾಲೆ-ಕಾಲೇಜುಗಳ ಆವರಣದಲ್ಲಿ, ಚಿತ್ರಮಂದಿರಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ರೈಲ್ವೆ ಸ್ಟೇಶನ್‌ಗಳಲ್ಲಿ, ಹೋಟೆಲ್ ಮೋಟೆಲ್‌ಗಳಲ್ಲಿ, ಉದ್ಯಾನಗಳಲ್ಲಿ, ವಿದ್ಯಾರ್ಥಿನಿಲಯಗಳಲ್ಲಿ ಬಣ್ಣ ಬಣ್ಣದ ವೈವಿಧ್ಯಮಯ ಚೀಟಿನ ಪಾಕೇಟುಗಳ ಕಂತೆಗಳು, ಕಸ ಗೂಡಿಸಿದಾಗ ಕೂಡಿಬೀಳುವ ಕೊಂತೆಗಳು ಇವೇ ಗುಟಕಾ ಚೀಟುಗಳು....

ಗುಟಕಾ ಚೀಟಿಗಳಿಗೆ ಭಿನ್ನಭಿನ್ನ ಹೆಸರುಗಳು, "ದೇವನೊಬ್ಬ ನಾಮ ಹಲವು" ಎಂಬ ಹಾಗೆ. ಮಿರಿಮಿರಿ ಮಿಂಚುವ ಮನಮೋಹಕ ಮಿನ್ನ ಮಿನ್ನ ಬಣ್ಣಗಳು. ಹೋಟೆಲ್ ಮುಂದಿನ ಪಾನ್‌ಬೀಡಾ ಅಂಗಡಿಗಳಲ್ಲಿ, ಜನರಲ್ ಸ್ಟೋರ್‌ಗಳಲ್ಲಿ, ರಸ್ತೆಯಂಚಿನ ಡಬ್ಬಾದಂಗಡಿಗಳಲ್ಲಿ ನೇತು ಹಾಕಿರುವ ಗುಟಕಾ ಚೀಟುಗಳು ಎಲ್ಲರಿಗೂ ಗೊತ್ತು. ಇದರ ಸೇವನೆಯಿಂದಾಗುವ ಹಾನಿಗಳು ಜನರಿಗೆ ಗೊತ್ತಿಲ್ಲದಿರುವುದೇ ಆಗಿದೆ ದೊಡ್ಡ ವಿಪತ್ತು. ಈ ಅಜ್ಞಾನದ ಸುತ್ತ ಗಸ್ತು ಹೊಡೆಯುತ್ತಿರುವ ಉತ್ಪಾದಕರು ಸಾವಿಗೆ ಸಂಚಗಾರ ನೀಡುತ್ತಿದ್ದಾರೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಇತ್ತೀಚೆಗೆ ಹೆಚ್ಚುತ್ತಿರುವ ಗುಟಕಾ ಚಟ, ಬಾಯಿಯ ಲೋಳ್ಪರೆಯಲ್ಲಿಯ ನಾರುಗಟ್ಟುವಿಕೆಯ (ಫೈಬ್ರೊಸಿಸ್) ಹಾವಳಿಯ ಹರವನ್ನು ಹೆಚ್ಚಿಸಿದೆ. ಇದು ಬಾಯಿಯ ಕ್ಯಾನ್ಸರಿಗೆ ಅಡಿಪಾಯ ಹಾಕಿ, ಆರೋಗ್ಯದ ಅಡಿಗಲ್ಲುಗಳನ್ನೇ ಬುಡಮೇಲು ಮಾಡುವುದು. ಟಾಟಾರವರ ಮೂಲಭೂತ ಸಂಶೋಧನಾ ಸಂಸ್ಥೆಯ ದಂತ ಘಟಕದ ಡಾ|| ಭೋಸರೆ ಎಂಬವರು ಕೇರಳದ ಎರ್ನಾಕ್ಯುಲಮ್ ಜಿಲ್ಲೆಯಲ್ಲಿ ಮಾಡಿದ ಅಧ್ಯಯನ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ: ಗುಟಕಾ ತಿನ್ನುವುದರಿಂದ ಬಾಯಿಯ ಲೋಳ್ಪರೆ ಗಡುಸಾಗಿ ಗಟ್ಟಿತನ ಹೆಪ್ಪುಗಟ್ಟುವುದು; ಬಾಯಿಯನ್ನು ತೆರೆಯುವುದು ಕಷ್ಟವಾಗುವುದು; ನಾಲಿಗೆ ಸಣ್ಣದಾಗುವುದು; ಬಿರುಸುತನದ ಬಳುವಳಿ ಪಡೆಯುವುದು; ಅಲ್ಲಾಡುವಿಕೆಗೆ ಅಡ್ಡಿಯೊಡ್ಡುವುದು; ನಾಲಿಗೆ ಹೊರಚಾಚಲು ಆಗುವುದಿಲ್ಲ, ಇತ್ಯಾದಿ. ಬಾಯಿಯ ಲೋಳ್ಪರೆಯ ನಾರುಗಟ್ಟುವಿಕೆ ಹಾವಳಿ ೨೦–೪೦ ವರ್ಷದವರಲ್ಲಿ ಹೆಚ್ಚು. ಗುಟಕಾ ಸೇವನೆಯ ಪ್ರಮಾಣಕ್ಕನುಗುಣವಾಗಿ ಈ ತೊಂದರೆಯ ತೀವ್ರತೆ ಕಾಣಿಸುವುದು. ಇಲ್ಲಿಯೂ ಒಂದು ಆಶಾ ರೇಖೆ ಇದೆ. ಕಾಲ ಮಿಂಚುವ ಮುನ್ನ ಗುಟಕಾ ಸೇವನೆಯನ್ನು ಸಂಪೂರ್ಣವಾಗಿ ನಿಲ್ಲಿಸಿದರೆ ದವಡೆಯನ್ನು ಪೂರ್ಣವಾಗಿ ತೆರೆಯಲು ಸಾಧ್ಯವಾಗುತ್ತದೆ.

ಪ್ರಾರಂಭದ ಹಂತದಲ್ಲಿ ಲೋಳ್ಪರೆ ಬಿಳಚಿಕೊಳ್ಳುವುದು. ಬೆಳ್ಳಗೆ ಸಂಗಮರಿಕಲ್ಲಿನ ಹಾಗೆ ಕಾಣಿಸುವುದು. ಬಿಗಿತದ ಅಪ್ಪುಗೆಯಲ್ಲಿ ಬಾಯಿ ತೆರೆಯುವುದು ನಿರ್ಬಂಧಗೊಳ್ಳುವುದು. ಬಹಳಷ್ಟು 'ಬಾಯಿ ಉರುಪು' ಬಂಧನದಲ್ಲಿ ತತ್ತರಿಸುವರು. ಈ ಉರುಪು ಮಸಾಲೆ ಆಹಾರ ಪದಾರ್ಥಗಳನ್ನು ಸೇವಿಸಿದಾಗ ಮತ್ತಷ್ಟು ಹೆಚ್ಚುವುದು. ಲಾಲಾರಸ ಬತ್ತಬಹುದು ಅಥವಾ ಹೆಚ್ಚಾಗಲೂಬಹುದು.

ಡಾ|| ಭೋಸಲೆಯವರ ಅಧ್ಯಯನ ಬಾಯಿಯ ಲೋಳ್ಪರೆಯ ಗಡಸುಗಟ್ಟುವಿಕೆಯ ಹಾವಳಿ ಎರ್ನಾಕ್ಯುಲಮ್‌ದಲ್ಲಿ ದೇಶದ ಉಳಿದ ಪ್ರದೇಶಗಳಿಗಿಂತ ಹೆಚ್ಚಿರುವುದು ಸ್ಫಟಿಕ ಸ್ಪಷ್ಟ. ರೋಗಿಗಳನ್ನು ತಪಾಸಿಸಿದಾಗ ಇದು ಕ್ಯಾನ್ಸರಾಗಿ ಮಾರ್ಪಾಡಾಗುವುದನ್ನು ಸಾಬೀತು ಪಡಿಸಿದೆ.

ಗುಟಕಾ ಚೀಟುಗಳಲ್ಲಿ ಧಾರಾಳವಾಗಿರುವ ಮೆಂಥೋಲ್ ಎಂಬ ಅಂಶ ಬಾಯಿಯ ಕ್ಯಾನ್ಸರ್ ಉಂಟು ಮಾಡುತ್ತದೆ. ೧೯೮೮ರ ನಿಯಮದಂತೆ ೧ ಕಿಲೋ ಪಾನ್ ಮಸಾಲೆ

ಯಲ್ಲಿ ಕೇವಲ ೦.೩ ಗ್ರಾಂ ಮೆಂಥೋಲ್ ಮಾತ್ರ ಸೇರಿಸಬೇಕು. ಆದರೆ, ಉತ್ಪಾದಕರು ೧ ಕಿಲೋ ಪಾನ್‌ಮಸಾಲೆ ತಯಾರಿಸಲು ಅದಕ್ಕೆ ಹದಿನೈದು ಪಟ್ಟಿಗಿಂತ ಹೆಚ್ಚು (೪:೫ ಗ್ರಾಂ) ಮೆಂಥೋಲ್ ಹಾಕಿ ಬಿಡುತ್ತಾರೆ. ಇದರಿಂದ ಪಾನ್‌ಮಸಾಲೆಯ ರುಚಿ ಹೆಚ್ಚುತ್ತದೆ; ನಿಜ, ಆದರೆ ರುಚಿಯ ರಂಗಿನಲ್ಲಿಯೇ ಕ್ಯಾನ್ಸರಿನ ರಂಗೋಲಿ ಕಾಣಿಸುವುದು. ಬಾಯಿಯ ಕ್ಯಾನ್ಸರಿನ ನಿಶ್ಚಿತ ಲಕ್ಷಣಗಳೇನೂ ಇಲ್ಲ. ಬಾಯಿಯಲ್ಲಿ ಗೋಚರಿಸುವ ಅಸಾಧಾರಣ ಕಲೆಗಳು ಬಹುದಿನಗಳವರೆಗೆ ಬೇರುಬಿಟ್ಟರೆ, ತಜ್ಞ ವೈದ್ಯರ ಸಲಹೆಯನ್ನು ತುರ್ತಾಗಿ ಪಡೆಯಬೇಕು.

ಸಾಮಾನ್ಯವಾಗಿ ಗುಟಕಾವನ್ನು ಬಾಯಲ್ಲಿ ಬಹಳ ಹೊತ್ತು ಅಗಿಯುತ್ತಾರೆ. ಆಚಾರವಿಲ್ಲದ ನಾಲಿಗೆಗೆ ಅರ್ಬುದ ಅಪ್ಪಿಬಿರುಸಾಗಬಹುದು. ಗಂಟಲಿಗೆ ಗಾಪ್ಟ ಅಡರಿ ಕೆಮ್ಮಿನ ಕಾಣಿಗೆ ಸಿಗಬಹುದು. ಗಂಟಲಿಗೆ ಗಂಟಗಡ್ಡೆಗಳು ಗಂಟುಬೀಳಬಹುದು. ಗುಟಕಾವನ್ನು ಅಗಿದು ಅಗಿದು ಉಗಿದರೂ ಗೊತ್ತಿಲ್ಲದಂತೆ ಅಲ್ಪ ಸ್ವಲ್ಪ ಗುಟಕಾ ಅನ್ನನಾಳದ ಮೂಲಕ ಹೊಟ್ಟೆಯನ್ನು ಸೇರುತ್ತದೆ. ಇದರಿಂದ ಅನ್ನಮಾರ್ಗದಲ್ಲಿ ಉರಿತ ಉಂಟಾಗಿ, ಕೆರಳಿ ಹುಣ್ಣಾಗಬಹುದು. ಹಿಂದಕರೂಳು ದಕ್ಕದಂತಾಗಿ ವಾಂತಿಯಾಗಬಹುದು. ಎದೆಯಲ್ಲಿ ಕಿಚ್ಚು ತುಂಬಿದಂತಾಗಬಹುದು. ಹುಳಿ ಹುಳಿ ನೀರು ಬಾಯಲ್ಲಿ ಬರಬಹುದು. ಇಸಾಬೇವಿನ ಕಾಯಿಯಂಥ ಹಚ್ಚ ಹಸುರಿನ ಪಿತ್ತ ಕೀಳಬಹುದು. ಕೊರತೆಯ ಕಾಯಿಲೆಗಳ ಕರಿನೆರಳು ಕಾಣಿಯಬಹುದು. ಇವೆಲ್ಲ ಜೀವಿಯನ್ನು ಹಿಂಡಿ ಹಿಪ್ಪೆಮಾಡುತ್ತವೆ. ತೊಡಕು ತೊಂದರೆಗಳ ಉದಾರ ಉಡುಗೊರೆ ನೀಡುತ್ತವೆ.

ಮತ್ತೊಂದು ಭೀಕರ ಸುದ್ದಿ ಇತ್ತೀಚಿಗೆ ಬಿತ್ತರಗೊಂಡಿದೆ. ವಂಶವಾಹಿಗಳ ಮೇಲೆ ಗುಟಕಾ ದುಷ್ಪರಿಣಾಮ ಬೀರುತ್ತದೆ ಎಂಬುದನ್ನು ವಿಜ್ಞಾನಿಗಳು ಪ್ರಯೋಗಗಳ ಮೂಲಕ ಸಾದರಪಡಿಸಿದ್ದಾರೆ. ಇದನ್ನು 'ಗುಟಕಾ ಜೀನೊಟಾಕ್ಸಿಕ್ ಪರಿಣಾಮ' ಎಂದು ಕರೆದಿರುವರು. ಪ್ರಯೋಗ ಶಾಲೆಯಲ್ಲಿ ಮಾನವ ಜೀವಕೋಶಗಳ ಮೇಲೆ ಒಮ್ಮೆ ೦.೦೧ ಮಿ.ಗ್ರಾಂ. ನಷ್ಟು ಗುಟಕಾ ಅಂಶವನ್ನು ಹಾಕಿದಾಗ ಅವುಗಳಲ್ಲಿ ವಿಚಿತ್ರ ಬದಲಾವಣೆಗಳಾದವು. ಬರಬಹುದಾದ ಭೀಕರ ವ್ಯಾಧಿಗಳ ಸುಳುವುಗಳನ್ನು ನೀಡಿದವು. ಇನ್ನು ನಿಯಮಿತವಾಗಿ ಗುಟಕಾ ಸೇವಿಸುವುದರ ಜೀವಕೋಶಗಳ ಮೇಲೆ ಎಂಥ ಕೆಟ್ಟ ಪರಿಣಾಮ ಉಂಟಾಗಬಹುದು ಎಂಬುದನ್ನು ಒದುಗರೇ ಊಹಿಸಿಕೊಳ್ಳಬಹುದು.

ಗುಟಕಾ ಕ್ಷಾರಯುಕ್ತವಾಗಿರುತ್ತದೆ. ಹೀಗಾಗಿ ಸೇವಿಸಿದಾಗ ಗಂಟಲಿನ ಕೆರೆತ ಉಂಟಾಗುತ್ತದೆ. ಮುಖಕ್ಕೆ ಶರೀರದ ರಕ್ತವೆಲ್ಲ ಹರಿದು ಬಂದಂತಾಗಿ, ಮುಖವೆಲ್ಲ ಅಂಜೂರಿಯ ಹಾಗೆ ಕೆಂಪಾಗುತ್ತದೆ. ತಲೆ ಭಾರವಾಗುತ್ತದೆ. ತಲೆ ಸುತ್ತುತ್ತದೆ. ಹೃದಯದ ಬಡಿತ ಹೆಚ್ಚುವುದು. ಭಯಭೀತಿ ಮುತ್ತುವುದು, ಹೊಟ್ಟೆಯಲ್ಲಿ ತಳಮಳ, ಮನದಲ್ಲಿ ಕಳವಳ, ಎದೆ ಬಿಗಿದಂತಾಗಿ ವಾಂತಿ ಬಂದಂತಾಗಬಹುದು ಸಂಕಟ ಸುರಿಯುವುದು. ತಪತಪ ಬೆವರು ಬಸಿಯುವುದು. ಆಗ ಮನಸ್ಸಿಗೆ ಸಮಾಧಾನ

ವಾಗುವುದು. ಗುಟಕಾ ಸೇವನೆಯಿಂದ ಹೃದಯದ ಧಮನಿಗಳೂ ಸಂಕುಚಿತಗೊಳ್ಳುತ್ತವೆ. ಹೀಗಾಗಿ ಇಡೀ ಶರೀರಕ್ಕೆ ರಕ್ತ ಸರಬರಾಜುಮಾಡುವ ಹೃದಯವೇ ರಕ್ತ ಪೂರೈಕೆಯ ಕೊರತೆಗೆ ತುತ್ತಾಗುತ್ತದೆ. ತತ್ತರಿಸುತ್ತದೆ. ಇದರಿಂದಾಗಿ ಗುಟಕಾ ಸೇವಿಸುವವರಲ್ಲಿ ಎದೆನೋವು ಕಾಣಿಸಿಕೊಳ್ಳಬಹುದು. ಈ ಎಲ್ಲ ಬದಲಾವಣೆಗಳಿಗೆ ಕಾರಣ ಗುಟಕಾದಲ್ಲಿ ಬೆರೆತಿರುವ ಹಾನಿಕಾರಕ ಪದಾರ್ಥಗಳು.

ಗುಟಕಾ ಸೇವನೆಯಿಂದ ಉತ್ಸಾಹ ಮಿಕ್ಕುವುದು. ಸ್ಫೂರ್ತಿ ಉಂಟಾಗುವುದೆಂದು ಅದನ್ನು ಸೇವಿಸುವವರು ಹೇಳುತ್ತಾರೆ. ಈ ಭಾವನಾತ್ಮಕ ಸಂವೇದನೆಯ ಆನಂದ ಜನರನ್ನು ಗುಟಕಾ ಸೇವಿಸಲು ಪ್ರೇರೆಪಿಸುತ್ತದೆ. ಜೊತೆಗೆ ದೂರದರ್ಶನ ಹಾಗೂ ಪತ್ರಿಕೆಗಳಲ್ಲಿ ಉತ್ಪಾದಕರು ನೀಡುವ ಆಕರ್ಷಕ ಜಾಹಿರಾತುಗಳೂ ಜನರನ್ನು ಮರುಳುಮಾಡುವುವು. ಗುಟಕಾ ಸೇವನೆಗೆ ಪ್ರಚೋದಿಸುವುದು ಈ ಎಲ್ಲ ಕಾರಣಗಳು ಒಂದಕ್ಕೊಂದು ಪೂರಕ, ಪೋಷಕ, ಪರಿಪೂರಕವಾಗಿ ಕಾರ್ಯನಿರ್ವಹಿಸುವುದರ ಪ್ರಯುಕ್ತ ಗುಟಕಾ ಚಟ ದಿಲ್ಲಿಯಿಂದ ಹಳ್ಳಿಗೂ ಹಬ್ಬಿದೆ; ಹಬ್ಬುತ್ತಲಿದೆ. ತನ್ನ ಬಲಿಷ್ಠ ಕಬಂಧ ಬಾಹುಗಳಿಂದ ಬಂಧಿಸುತ್ತದೆ. ಬಂಧಿತರು ಈ ಬಂಧನದಿಂದ ಬಿಡುಗಡೆಗೆ ಪ್ರಯತ್ನಿಸುವುದಿಲ್ಲ. ಪ್ರಯತ್ನಪಟ್ಟರೂ ವಿಫಲಿತರಾಗುವರು. ಯಾವುದೋ ಸಬೂಬು ಹೇಳಿ ಗುಟಕಾದ ಸೆಳವಿನ ಸುಳಿಯಲ್ಲಿ ಗಿರಕಿ ಹೊಡೆಯುವರು. ಹೊರಬರಲು ಹಾದಿ ಕಾಣದೆ ಹೊರಳಾಡುವರು, ವಿಲಿ ವಿಲಿ ಒದ್ದಾಡುವರು.

"ಕಲಿತ ಚಟ ಕಲ್ಲು ಹಾಕಿದರೂ ಬಿಡುವುದಿಲ್ಲ" ಎಂಬುದು ಗುಟಕಾ ವಿಷಯದಲ್ಲಂತೂ ಸತ್ಯ. ಬಹಳ ಮಂದಿ ಆಗೊಮ್ಮೆ ಈಗೊಮ್ಮೆ ಮೋಜಿಗಾಗಿ, ಕುತೂಹಲಕ್ಕಾಗಿ, ಮಿತ್ರರ ಒತ್ತಾಯಕ್ಕಾಗಿ, ಏನಾಗುವುದೆಂಬುದನ್ನು ಅರಿಯುವುದಕ್ಕಾಗಿ ಗುಟಕಾ ಸೇವಿಸುತ್ತಾರೆ. ಒಮ್ಮೆ ತಿಂದವರಿಗೆ ಪದೇ ಪದೇ ಅದನ್ನು ತಿನ್ನಬೇಕೆನ್ನುವ ತವಕ ಹೆಚ್ಚುತ್ತದೆ. ಪ್ರಾರಂಭದಲ್ಲಿ ಅಲ್ಪ ಸ್ವಲ್ಪ ಪ್ರಮಾಣಕ್ಕೆ ಸಿಗುತ್ತಿದ್ದ ಖುಷಿ, ಉತ್ಸಾಹ ದಿನಗಳೆದಂತೆ ಮಾಯವಾಗುವುದು. ಮೊದಲಿನ ಖುಷಿಯನ್ನು ಪಡೆಯುವ ಮನೋಭಾವಕ್ಕೆ ಮಣಿದು ಹೆಚ್ಚು ಹೆಚ್ಚು ಪ್ರಮಾಣ ಸೇವಿಸುತ್ತ ಹೋಗುವುದು ಅನಿವಾರ್ಯವಾಗುತ್ತದೆ. ತಾಳಿಕೆ, ಮಾನಸಿಕ ಅವಲಂಬನೆಯ ಅನಂತರ ವ್ಯಸನಿಯ ಪಟ್ಟ ಗಟ್ಟಿಗೊಳ್ಳುವುದು. ಪ್ರತಿ ದಿನ ೧೦–೧೨ ಗುಟಕಾ ಚೀಟುಗಳನ್ನು ತಿನ್ನುವವರನ್ನು 'ಗುಟಕಾ ವ್ಯಸನಿಗಳು' ಎನ್ನಬಹುದು. ಅದು ಸಿಗದಾಗ ಅವರು ಪ್ರಾಣ ಹೋದವರಂತೆ ಒದ್ದಾಡುವರು ಗುಟಕಾದ ಮೋಹದ ಆಳ ಊಹೆಗೆ ನಿಲುಕದ್ದು, ಅದನ್ನು ಪಡೆಯಲು ತಮ್ಮಲ್ಲಿಯ ಯುಕ್ತಿ, ಶಕ್ತಿ ಸಾಮರ್ಥ್ಯಗಳನ್ನೆಲ್ಲ ಬಳಸುವರು, ಈ ಆಸೆಯ ಮುಂದೆ ವೈಯಕ್ತಿಕ, ಸಾಮಾಜಿಕ, ನೈತಿಕ ಕಟ್ಟುನಿಟ್ಟುಗಳು ಕರಗಿ ಹೋಗುವವು ಬಿಸಿಲಿಗಿಟ್ಟ ಬರ್ಫದಂತೆ.

ಗುಟಕಾ ಮಾರಾಟದಲ್ಲಿ ಅತ್ಯಂತ ಲಾಭ ದೊರೆಯುತ್ತಿರುವುದನ್ನು ಕಂಡು ಈಗ ಇವರಲ್ಲಿ ಕಲಬೆರಕೆಮಾಡಿ ಮಾರಾಟ ಮಾಡುವ ಉತ್ಪಾದಕರೂ ಹುಟ್ಟಿಕೊಂಡಿದ್ದಾರೆ. ಚವುಳು, ಮಣ್ಣು, ಕೆಟ್ಟುಹೋದ

ಕಾಚು, ಬೂಸ್ಟು, ಹಿಡಿದ ಅಡಿಕೆ, ಕೊಳೆತ ಏಲಕ್ಕಿ, ಮರದ ಸೆಕ್ಕೆ ಮೊದಲಾದವುಗಳನ್ನು ಗುಟಕಾದಲ್ಲಿ ಬೇಕಾಬಿಟ್ಟಿಯಾಗಿ ಬೆರೆಸುತ್ತಿದ್ದಾರೆ. ಕಲಬೆರೆಕೆ ನಿರೋಧಕ ಕಾನೂನಿನ ಪ್ರಕಾರ ನಿಷೇಧಿಸಲ್ಪಟ್ಟ ರೌಕಿನ್ ಎಂಬ ಪದಾರ್ಥವನ್ನು ಎಷ್ಟೋ ಉತ್ಪಾದಕರು ಗುಟಕಾದಲ್ಲಿ ಬೆರೆಸುತ್ತಿದ್ದಾರೆ. ಇಂಥ ಹಾಳು ಮೂಳು ಪದಾರ್ಥಗಳು ಹಾಗೂ ರಾಸಾಯನಿಕಗಳನ್ನು ಕಲಬೆರಕೆಮಾಡಿ, ಬೆರೆಸುವ ಸುಗಂಧ ದ್ರವ್ಯಗಳಲ್ಲಿ ಅವೆಲ್ಲ ಮುಚ್ಚಿಹೋಗುವಂತೆ ಮಾಡುವ ಕಲೆ ಕರಗತಮಾಡಿಕೊಂಡು ಸ್ಥಳೀಯ ಬೇಡಿಕೆಗಳನ್ನು ಪೂರೈಸುವ ಉತ್ಪಾದಕರು, ಮಾರಾಟಗಾರರು ಹಾಗೂ ಅಂಗಡಿಯವರು ಲಾಭವನ್ನು ದೋಚುತ್ತಾರೆ. ಆದರೆ, ಸಮಸ್ತ ದುಷ್ಪರಿಣಾಮಗಳನ್ನು ಭೋಗಿಸುವವರು ಹಣತೆತ್ತು ಸೇವಿಸುವ ಬಡಪಾಯಿಗಳು ಜನಸಾಮಾನ್ಯರ ಜೀವನಶೈಲಿ ಸುಧಾರಿಸುವುದಾಗಿ ಘೋಷಣೆ ಮಾಡುವ ಸರಕಾರ, ಅವರ ಪ್ರಾಣಾಪಾಯಕ್ಕೆ ಕಾರಣೀಭೂತವಾಗಿರುವ ಗುಟಕಾ ತಯಾರಿಸುವ ಕಂಪನಿಗಳಿಗೆ ಪರವಾನಿಗೆ ನೀಡುತ್ತಿರುವುದು ವಿಪರ್ಯಾಸ. ಕಂಪನಿಗಳು ಕೊಡುವ ನೋಟಿನ ಕಟ್ಟುಗಳೆದುರು ಸಾರ್ವಜನಿಕರ ಜೀವ ಕ್ಷುಲ್ಲಕವಾಗಿ ಕಾಣುತ್ತಿರುವುದೊಂದು ದೊಡ್ಡ ದುರಂತ!

ವಿದ್ಯಾರ್ಥಿ ಸಮುದಾಯದಲ್ಲಿ ಅಪಾಯಕರ ರೀತಿಯಲ್ಲಿ ಹೆಚ್ಚುತ್ತಿರುವ ಗುಟಕಾ ಸೇವನೆಯು ಸಮಸ್ಯೆ ಕೇವಲ ಸಾಮಾಜಿಕ ಮತ್ತು ಆರೋಗ್ಯದ ಸಮಸ್ಯೆ ಮಾತ್ರವಲ್ಲ; ಒಂದು ದೇಶದ ಯುವಜನಾಂಗ ಎದುರಿಸುತ್ತಿರುವ ಭೀಕರ ಸಮಸ್ಯೆಕೂಡ. ಆ ದೇಶದ ಯುವಕರ ಮಾನಸಿಕ ಗೊಂದಲದ ಅಸ್ಥಿರ ಮನಸ್ಥಿತಿಯ ಪ್ರತೀಕ ಕೂಡ. ಈಗ ಗುಟಕಾ ಬೇರೆ ಬೇರೆ ಬಣ್ಣಗಳಲ್ಲಿ, ರೂಪಗಳಲ್ಲಿ ರುಚಿಗಳಲ್ಲಿ ಅಂಗಡಿಗಳಲ್ಲಿ ಅಲಂಕೃತಗೊಂಡು ಯುವ ಪೀಳಿಗೆಯ ಮನಸೆಳೆದು 'ಮಂದವಿಷವಾಗಿ' ಅವರ ಹೊಟ್ಟೆ ಸೇರುತ್ತದೆ. ಇದರ ಉತ್ಪಾದನೆ, ಪ್ರಚಾರ ನಿರಂತರವಾಗಿ ಮುಂದುವರಿದರೆ ಮತ್ತಷ್ಟು ಮುಖವಾಡ ತೊಟ್ಟು ಮಾರುಕಟ್ಟೆಯಲ್ಲಿ ರಾರಾಜಿಸಬಹುದು. ಹಲವಾರು ಹೊಸ ಹೊಸ ರೋಗಗಳನ್ನು ಗೊತ್ತಿಲ್ಲದಂತೆ ಹೊತ್ತುತರಬಹುದು.

ಯುವ ಪೀಳಿಗೆ ದಿನದಿಂದ ದಿನಕ್ಕೆ ಹವ್ಯಾಸ ರೂಪದಲ್ಲಿ ಗುಟಕಾಕ್ಕೆ ಗುಲಾಮನಾಗುತ್ತಲಿದೆ. ವಿಚಿತ್ರ ಆದರೂ ಸತ್ಯ ಎನ್ನುವಂತೆ ಸಮಾಜದಲ್ಲಿಯ ಕೆಲವು ಗೌರವಾನ್ವಿತ ವ್ಯಕ್ತಿಗಳು ಹಾಗೂ ಹೆಚ್ಚಿನ ವಿದ್ಯಾರ್ಹತೆ ಹೊಂದಿದವರು ಗುಟಕಾಕ್ಕೆ ಶರಣು ಹೋಗುತ್ತಿದ್ದಾರೆ. ಈ ಎಲ್ಲ ಕಾರಣಗಳಿಂದಾಗಿ ಗುಟಕಾ ಹಾವಳಿ ಸಾಂಕ್ರಾಮಿಕ ಸ್ವರೂಪತಾಳಿ ಹೂಂಕರಿಸುತ್ತಿದೆ....

ಆದ್ದರಿಂದ ಸರಕಾರ, ಸಾಮಾಜಿಕ ಚಿಂತಕರು, ತಂದೆ ತಾಯಿಗಳು, ಬುದ್ಧಿಜೀವಿಗಳು ಇದರ ಬಗ್ಗೆ ಪೂರ್ಣ ಗಮನ ಹರಿಸಿ ಗುಟಕಾ ಉತ್ಪಾದನೆ, ಮಾರಾಟ ಮತ್ತು ಅನುಭೋಗ ನಿಯಂತ್ರಿಸಬೇಕು. ಇಲ್ಲದಿದ್ದರೆ ಬರುವ ಯುವ ಪೀಳಿಗೆ ಕೇವಲ ಹಣವನ್ನು ಕಳೆದುಕೊಳ್ಳದೆ, ತನ್ನ ಆರೋಗ್ಯವನ್ನು ಕಳೆದುಕೊಳ್ಳುವುದರ ಜೊತೆಯಲ್ಲಿ ಇಡೀ ದೇಶವೇ ಅನಾರೋಗ್ಯದ ಆಗರವಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಭಾರತದಲ್ಲಿ ಪ್ರತಿವರ್ಷ ೨೫೦ ಕೋಟಿ ರೂಪಾಯಿ ಮೌಲ್ಯದ ಗುಟಕಾ ಮಾರಾಟವಾಗುತ್ತಿದೆ, ಎಂಬುದು ಬೆಚ್ಚಿ ಬೀಳಿಸುವ ಸಂಗತಿ. ಜಾಹಿರಾತಿನ ಪ್ರಭಾವಶಾಲಿ ಮಾಧ್ಯಮಗಳ ಮೂಲಕ ಪ್ರಚಾರ ಪಡೆಯುತ್ತಿರುವ ಗುಟಕಾ ದಿನೇದಿನೇ ಹೆಚ್ಚು ಹೆಚ್ಚು ಜನರನ್ನು ತಲುಪುತ್ತಲೇ ಇದೆ. ಕರಾಳ ಕಪಿಮುಷ್ಟಿಯಲ್ಲಿ ಕುತ್ತುಗಳ ಕಾಣಿಕೆ ಕೊಡುತ್ತಲೇ ಇದೆ. ಜನರ ದೌರ್ಬಲ್ಯವನ್ನೇ ಬಂಡವಾಳವಾಗಿಸಿಕೊಂಡ ಗುಟಕಾ ಕಂಪನಿಗಳ ಮಾರಾಟವ ವಹಿವಾಟು ದಿನೇ ದಿನೇ ಹೆಚ್ಚುತ್ತಲೇ ಇದೆ. ಕಂಪನಿಗಳ ಕಾಸಿನ ಕಟ್ಟುಗಳು ನಾಡನಾಯಕರ ಬಾಯಿಗೆ ಭದ್ರ ಬೀಗ ಹಾಕಿವೆ. ಹಾಕುತ್ತಲೂ ಇವೆ. ಹೀಗಾಗಿ ಈ ನಾಡಿನಲ್ಲಿ ಜನರ ಜೀವಕ್ಕೆ ಪುಡಿಕಾಸಿನ ಬೆಲೆಯೂ ಇಲ್ಲ. ಕಾರಣ ಬುದ್ಧಿಜೀವಿಗಳು ಕಾಲ ಮಿಂಚುವ ಮೊದಲು ಬೀದಿಗಿಳಿಯಬೇಕು. ಸಮೂಹ ಮಾಧ್ಯಮಗಳನ್ನು ಸಮರ್ಥವಾಗಿ ಬಳಸಿಕೊಂಡು ಗುಟಕಾದ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಬೇಕು. ಆರೋಗ್ಯದ ಅರಿವು ಅರಳಿಸಬೇಕು. ಆಗ ನಾಡಿನ ಯುವಶಕ್ತಿ ದೊಡ್ಡ ಶಕ್ತಿಯಾಗಿ ಬೆಳೆದೀತು! ಇಲ್ಲವಾದಲ್ಲಿ ಬತ್ತಿ ಹೋದೀತು!! ಭಾರತಾಂಬೆಯ ಒಡಲು ಬರಿದಾದೀತು!!!



ಶಕ್ತಿಯೇ ಜೀವನದ ಶ್ರೇಷ್ಠ ಮಾರ್ಗದರ್ಶಕ. ಧರ್ಮದ ಉಳಿದ ವಿಷಯಗಳಲ್ಲಿ ಹೇಗೋ ಹಾಗೆ, ನಿಮ್ಮನ್ನು ದುರ್ಬಲಗೊಳಿಸುವ ಪ್ರತಿಯೊಂದನ್ನೂ ತ್ಯಜಿಸಿಬಿಡಿ, ಅದಕ್ಕೂ ನಿಮಗೂ ಸಂಬಂಧ ಬೇಡ.

—ಸ್ವಾಮಿ ವಿವೇಕಾನಂದ

ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ವಿಜೇತ ಡಾ. ವಿ. ಪ್ರಕಾಶ್

ರಂಗಧಾಮಯ್ಯ
ಬಿ. ೯೪, ಸಿಎಫ್‌ಟಿಆರ್‌ಐ ಕಾಲೋನಿ
ಮೈಸೂರು-೫೭೦೦೧೩

ಪ್ರತಿಯೊಬ್ಬ ವ್ಯಕ್ತಿಯ ಅಗತ್ಯವಾಗಿರುವ ಆಹಾರ, ಪ್ರಾಯಶಃ ಅದೇ ಕಾರಣಕ್ಕೆ ತನ್ನತ್ತ ಜನರ ಗಮನ ಸೆಳೆಯದಿರುವುದು ಒಂದು ರೀತಿಯ ವ್ಯಂಗ್ಯವಾಗಿದೆ. ವಾಸ್ತವವಾಗಿ ರಾಷ್ಟ್ರದ ಆರ್ಥಿಕ ಸದೃಢತೆಗೆ ಆಹಾರ ವಹಿಸುವ ಪಾತ್ರವನ್ನು ಗಣನೆಗೆ ತೆಗೆದುಕೊಳ್ಳಬೇಕಾದದ್ದು ಅನಿವಾರ್ಯ.

ಆಹಾರವಾಗಿ ಪರಿವರ್ತನೆಗೊಳ್ಳುವುದಕ್ಕೆ ಮೊದಲು ಬೆಳೆದಂಥ ಬೆಳೆ ಕೆಲವು ಸಂಸ್ಕರಣಾ ಮಜಲುಗಳ ಮೂಲಕ ಹಾದು ಹೋಗಬೇಕಾಗುತ್ತದೆ. ಆಹಾರ ತಂತ್ರಜ್ಞಾನದ ಪ್ರವೇಶವಾಗುವುದು ಈ ಹಂತದಲ್ಲೇ. ಕೃಷಿಯ ಮೂಲಕ ಲಭ್ಯವಾಗುವ ಉತ್ಪನ್ನವನ್ನು ಆಹಾರವಾಗಿ ಪರಿವರ್ತನೆಗೊಳಿಸುವ ಪ್ರಕ್ರಿಯೆಯನ್ನು ಸಲೀಸುಗೊಳಿಸುವುದಷ್ಟೇ ಅಲ್ಲದೆ ಗ್ರಾಹಕರಿಗೆ ಗರಿಷ್ಠ ಪ್ರಮಾಣದ ಅನುಕೂಲತೆಯನ್ನು ಕಲ್ಪಿಸಿಕೊಡುತ್ತದೆ. ಧಾನ್ಯ ಒಕ್ಕಣೆಯ ನಂತರದ ಪ್ರಕ್ರಿಯೆಯಲ್ಲಿ ತೊಡಗಿಕೊಂಡು ಸಾಗಣೆ, ದಾಸ್ತಾನು, ಸಂಸ್ಕರಣೆ ಹಾಗೂ ಅಂತಿಮವಾಗಿ ಗ್ರಾಹಕರಿಗೆ ವಿತರಣೆಯಾಗುವ ಹಂತದವರೆಗೆ ಆಹಾರ ತಂತ್ರಜ್ಞಾನ ಮುಖ್ಯಪಾತ್ರ ವಹಿಸುತ್ತದೆ. ಸಂಶೋಧನೆ ಮತ್ತು ಅಭಿವೃದ್ಧಿ ಅಂಗದ ಮೂಲ ಉದ್ದೇಶವೂ ಕೂಡ ಇದೇ ಆಗಿದೆ. ಸಂಸ್ಕೃತಿ, ಪರಂಪರೆ ಹಾಗೂ ತಂತ್ರಜ್ಞಾನದ ಪ್ರಗತಿಗೆ ಅನುಗುಣವಾಗಿ ಆಹಾರ ಸಂಸ್ಕರಣದ ತಂತ್ರಜ್ಞಾನ ನಿರಂತರವಾಗಿ ಬದಲಾವಣೆಗೊಳ್ಳಬೇಕಾಗುತ್ತದೆ.

ಆಹಾರ ಉತ್ಪನ್ನವು ಮೂಲ, ಅನ್ವಯಿಕ ಹಾಗೂ ನಿರ್ವಹಣಾ ವಿಜ್ಞಾನಗಳಾದ ಭೌತಶಾಸ್ತ್ರ, ರಾಸಾಯನಶಾಸ್ತ್ರ, ಜೀವರಸಾಯನಶಾಸ್ತ್ರ, ಪೌಷ್ಟಿಕತೆ, ಸೂಕ್ಷ್ಮಜೀವಶಾಸ್ತ್ರ ಹಾಗೂ ಇಂಜಿನಿಯರಿಂಗ್ ಮುಂತಾದ ಶಾಸ್ತ್ರಗಳ ಪರಸ್ಪರಾವಲಂಬನೆಯನ್ನು ಅನಿವಾರ್ಯಗೊಳಿಸುತ್ತದೆ. ಭಾರತೀಯ ಆಹಾರ ಕೈಗಾರಿಕೆಯು ಈ ವಿಭಿನ್ನ ಬಗೆಯ ಶಾಸ್ತ್ರಗಳ ನಡುವಿನ ಅಂತರವನ್ನು ಕಡಿಮೆಮಾಡಬೇಕಾಗಿದೆ. ಆಹಾರ ವಿಜ್ಞಾನ ಹಾಗೂ ತಂತ್ರಜ್ಞಾನದ ಎಲ್ಲ ಶಾಖೆಗಳಲ್ಲಿ ಲಭ್ಯವಾಗುವ ಸೇವೆಗಳನ್ನು

ಕೈಗಾರಿಗೆ ಒದಗಿಸುವ ಕೆಲಸದಲ್ಲಿ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯ ನಿರತವಾಗಿದೆ.

ವಿಜ್ಞಾನ ಹಾಗೂ ಕೈಗಾರಿಕಾ ಸಂಶೋಧನಾ ಮಂಡಳಿ (ಸಿ.ಎಸ್.ಐ.ಆರ್.)ಯ ಆಶ್ರಯದಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಪ್ರಯೋಗಾಲಯಗಳ ಸರಣಿಯಲ್ಲಿ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯ ಮೂರನೆಯದು. ೧೯೫೦ರಲ್ಲಿ ಸ್ಥಾಪಿತವಾದ ಈ ಸಂಸ್ಥೆ ಆಹಾರ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಗಳಲ್ಲಿ ಅಗ್ರಮಾನ್ಯವಾದುದೆಂಬ ಖ್ಯಾತಿಗೆ ಪಾತ್ರವಾಗಿದೆ. ಸುಮಾರು ೩೫೦ ಮಂದಿ ವಿಜ್ಞಾನಿಗಳು, ತಂತ್ರಜ್ಞರು ಹಾಗೂ ಇಂಜನಿಯರುಗಳು, ಸುಮಾರು ೪೫೦ ಮಂದಿ ಕುಶಲ ಕಾರ್ಮಿಕರು ಹಾಗೂ ಆಡಳಿತ ಸಿಬ್ಬಂದಿಗಳನ್ನೊಳಗೊಂಡ ಈ ಸಂಸ್ಥೆ ಈ ಬಗೆಯ ಸಂಸ್ಥೆಗಳಲ್ಲೇ ಬೃಹತ್ತಾದುದೆನ್ನಬೇಕು. ಕೈಗಾರಿಕೆಯ ಬೇಡಿಕೆಗಳನ್ನು ಹಾಗೂ ರಾಷ್ಟ್ರದ ನಿರೀಕ್ಷೆಯನ್ನು ಈಡೇರಿಸುವ ದಿಶೆಯಲ್ಲಿ ಈ ಸಂಸ್ಥೆ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ವಿಸ್ತಾರಗೊಳ್ಳುತ್ತಾ ಬಂದಿದೆ. ಕೇಂದ್ರ ಆಹಾರ ಸಂಶೋಧನಾಲಯ ಈವತ್ತು ಪೌಷ್ಟಿಕ ಆಹಾರ ಸಂಸ್ಕರಣೆಯಲ್ಲಿ ಮೊದಲಸ್ಥಾನದಲ್ಲಿರುವಂತೆಯೇ ತಂತ್ರಜ್ಞಾನಗಳ ವರ್ಗಾವಣೆಯ ಕೆಲಸದಲ್ಲೂ ತೊಡಗಿಕೊಂಡಿದೆ. ಆಹಾರ ವಿಜ್ಞಾನ ಹಾಗೂ ತಂತ್ರಜ್ಞಾನದ ಬಗೆಗಿನ ರಾಷ್ಟ್ರೀಯ ಮಾಹಿತಿ ಕೇಂದ್ರ ತನ್ನ ದತ್ತ ಆಧಾರಿತ (ಡೇಟಾಬೇಸ್) ಸೇವೆಗಳ ಮೂಲಕ ಆಹಾರ ಕೈಗಾರಿಕೆಯನ್ನು ಬೆಂಬಲಿಸುತ್ತಿದೆ. ಇಲ್ಲಿ ಸಂಶೋಧನೆ, ಅಭಿವೃದ್ಧಿ ಹಾಗೂ ಕೈಗಾರಿಕೆಗೆ ಅಗತ್ಯವಾದ ಅನೇಕ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳು ಲಭ್ಯವಾಗಿವೆ. ಕೃಷಿ-ಆಧಾರಿತ ಆಹಾರ ಕೈಗಾರಿಕೆಗಳಿಗೆ ಸಂಶೋಧನೆ ಮತ್ತು ಅಭಿವೃದ್ಧಿ ಸಹಾಯವು ಈ ಸಂಸ್ಥೆಯ ಮೂಲಕ ಇಂದು ದೊರೆಯುತ್ತಿದೆ.

ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯವು ಅನೇಕ ಸಂಸ್ಥೆಗಳೊಡನೆ ಸಂಪರ್ಕವಿಟ್ಟುಕೊಂಡಿದೆ. ಅವುಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ: ಆಹಾರ ಮತ್ತು ಪೌಷ್ಟಿಕತಾ ಮಂಡಳಿ, ಭಾರತ ಆಹಾರ ನಿಗಮ, ಟೀ ಮಂಡಳಿ, ಕಾಫಿ ಮಂಡಳಿ, ಸಾಂಬಾರಪದಾರ್ಥಗಳ ಮಂಡಳಿ, ಕೃಷಿ ಹಾಗೂ ಸಂಸ್ಕರಿತ ಆಹಾರ ರಫ್ತು ಅಭಿವೃದ್ಧಿ ಪ್ರಾಧಿಕಾರ, ಇತರೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮಂಡಳಿಗಳು, ಜೀವತಂತ್ರಜ್ಞಾನ ಇಲಾಖೆ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ಅಭಿವೃದ್ಧಿ ಯೋಜನೆ, ವಿಶ್ವ ಶಿಶುಕಲ್ಯಾಣ ದತ್ತಿ, ಕೃಷಿ ಸಂಸ್ಥೆಗಳ ಒಕ್ಕೂಟ ಮತ್ತು ಇನ್ನೂ ಅನೇಕ ವಿಶ್ವಮಟ್ಟದ ಸಂಸ್ಥೆಗಳು.

ಕೇಂದ್ರ ಆಹಾರ ಸಂಶೋಧನಾಲಯದ ನಿರ್ದೇಶಕರ ಸ್ಥಾನದ ಜವಾಬ್ದಾರಿಯ ಪರಿಚಯ ಮಾಡಿಕೊಡುವ ಸಲುವಾಗಿ ಈ ಮೇಲಿನ ಪೀಠಿಕೆ ಅಗತ್ಯವಾಯಿತು.

ಈ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸುವ ಸಲುವಾಗಿ ನಿರ್ದೇಶಕರಾದ ಡಾ|| ವಿಶ್ವೇಶ್ವರಯ್ಯ ಪ್ರಕಾಶ್ ಅವರು ಮುಂಜಾನೆ ನಾಲ್ಕು ಗಂಟೆಗೇ ಸಂಸ್ಥೆಗೆ ಬಂದು ತಮ್ಮ ಕರ್ತವ್ಯವನ್ನು ಪ್ರಾರಂಭಿಸುತ್ತಾರೆ ಎಂದರೆ ಅದು ಉತ್ಪ್ರೇಕ್ಷೆಯು ಮಾತಾಗದು. ಮುಂಜಾನೆ ನಾಲ್ಕುಗಂಟೆಗೆ ಪ್ರಾರಂಭವಾಗಿ ರಾತ್ರಿ ಏಳಾದರೂ ಆಯಿತು ಎಂಟಾದರೂ ಆಯಿತು—ನಿರಂತರವಾಗಿ ಕೆಲಸದಲ್ಲಿ ತೊಡಗಿಕೊಳ್ಳು ತ್ತಾರೆ. ಇವರ ಕಾರ್ಯವೈಖರಿಯಲ್ಲಿ ಎದ್ದು ಕಾಣುವ ಅಂಶವೆಂದರೆ ಇವರ ಕಕ್ಷೆಯ 'ತೆರೆದಬಾಗಿಲು.' ಮಧ್ಯೆ ಯಾವುದೇ ತೆರೆ–ಪರದೆಗಳಿಲ್ಲದೆ ಬಾಗಿಲಿಗೆ ಎದುರಾಗಿ ಪಾರದರ್ಶಕವಾಗಿ ಕೂರುವ ಪ್ರಕಾಶರು ಇಂಥ ಎತ್ತರದ ಸ್ಥಾನಗಳಲ್ಲಿ ಸಾಮಾನ್ಯ ವಾಗಿ ವಿರಾಜಮಾನವಾಗುವ ವರ್ಗಭೇದವನ್ನು ಒಂದೇ ಏಟಿಗೆ ಧ್ವಂಸಮಾಡಿದ್ದಾರೆ. ಸಂಸ್ಥೆಯ ಶ್ರೇಷ್ಠ ವಿಜ್ಞಾನಿಯಿಂದ ಹಿಡಿದು ನಾಲ್ಕನೇ ದರ್ಜೆಯ ನೌಕರನವರೆಗೆ ಯಾರುಬೇಕಾದರೂ, ಯಾವ ಸಮಯದಲ್ಲಾದರೂ ತಮ್ಮನ್ನು ಭೇಟಿಯಾಗ ಬಹುದು ಎಂದು ಹೇಳುತ್ತಾರೆ. ಬಾಗಿಲು ಹಾಕಿಕೊಂಡು, ಬಾಗಿಲಲ್ಲಿ ಕಾಯುವವ ನೊಬ್ಬನನ್ನು ಕೂರಿಸಿದರೇನೇ ತೊಂದರೆ, ಹೀಗೆ ತೆರೆದುಬಿಟ್ಟರೆ ಯಾವ ಸಮಸ್ಯೆಯೂ ಇರೋದಿಲ್ಲ ಎಂದು ಖಡಾಖಂಡಿತವಾಗಿ ನುಡಿಯುತ್ತಾರೆ.

ಇಷ್ಟೆಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುವ ಒತ್ತಡದಲ್ಲಿ ತಮ್ಮ ಕೌಟುಂಬಿಕ ಜೀವನ ಸರಾಗವಾಗಿ ಸಾಗಿದೆಯೇ ಎಂದು ಕೇಳಿದರೆ ನಿರ್ದೇಶಕರು ಅದನ್ನೂ ಸಲೀಸು ಗೊಳಿಸಿಕೊಂಡಿರುವ ಉಪಾಯವನ್ನು ಬಿಡಿಸಿ ತೋರಿಸುತ್ತಾರೆ. ಹಗಲು ಮಡದಿ–ಮಕ್ಕಳನ್ನು ಭೇಟಿಯಾಗಲು ಕಷ್ಟವಾಗುವುದರಿಂದ ರಾತ್ರಿ ಭೋಜನವನ್ನು ಮಾತ್ರ ಎಲ್ಲರೂ ಒಟ್ಟಿಗೇ ಕುಳಿತುಮಾಡಬೇಕು. ಶಾಲೆ ಕಲಿಯುತ್ತಿರುವ ಮಕ್ಕಳು ತಮ್ಮ ಶಾಲೆಯಲ್ಲಿ ಅಂದು ನಡೆದ ವಿಚಾರಗಳನ್ನು ವಿಶದವಾಗಿ ತಿಳಿಸಬೇಕು. ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಧ್ಯಾಪಕಿಯಾಗಿರುವ ಇವರ ಶ್ರೀಮತಿಯವರೂ ಸಹ ಅವರ ಅನುಭವಗಳನ್ನು ಹಂಚಿಕೊಳ್ಳಬೇಕು. ಇನ್ನು ನಿರ್ದೇಶಕರಿಗೆ ಯಾವುದೇ ಬಗೆಯ ರಿಯಾಯಿತಿ, ವಿನಾಯಿತಿಗಳಿಲ್ಲ, ಅವರೂ ಸಂಸ್ಥೆಯಲ್ಲಿ ಆ ದಿನ ತಮಗಾದ ಅನುಭವ ಗಳನ್ನು ಅವರೊಡನೆ ಹಂಚಿಕೊಳ್ಳುತ್ತಾರೆ. ಹೀಗೆ ಕೌಟುಂಬಿಕ ಬಂಧ ಹಾಗೂ ಸಂಬಂಧಕ್ಕೆ ನಿತ್ಯ ಬೆಸುಗೆ ಹಾಕಿ ಕಾಪಾಡಿಕೊಳ್ಳುವ ಕಲೆಯನ್ನು ಡಾ|| ಪ್ರಕಾಶ್ ರೂಢಿಸಿಕೊಂಡಿದ್ದಾರೆ. ಸ್ವಲ್ಪದರಲ್ಲಿ ಅವರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ಈ ಎರಡು ಸಂಗತಿಗಳು ಸಾಕು ಎಂದು ತೋರುತ್ತದೆ.

ನಮ್ಮ ರಾಷ್ಟ್ರದಲ್ಲೇ ವಿಜ್ಞಾನಿಗಳಿಗೆ ಸಲ್ಲುವ ಅತ್ಯುನ್ನತ ಪ್ರಶಸ್ತಿಯಾದ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿಯನ್ನು ಗೆದ್ದಿರುವ ಡಾ|| ವಿಶ್ವೇಶ್ವರಯ್ಯ ಪ್ರಕಾಶ್ ಅಪ್ಪಟ ಕನ್ನಡಿಗರು. ಹಲವು ಭಾಷೆಗಳು ಹಾಗೂ ಹಲವು, ಸಂಸ್ಕೃತಿಗಳ ಬೀಡಾದ ಕೇಂದ್ರ ಆಹಾರ ಸಂಶೋಧನಾಲಯದ ಅಗ್ರಪೀಠದಲ್ಲಿ ಕುಳಿತಿರುವ ಪ್ರಕಾಶರು

ಇತರ ಭಾಷೆಯ ಜನರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸದ್ದಿಲ್ಲದೆ ಕನ್ನಡದ ಕೆಲಸವನ್ನು ಮಾಡುತ್ತಿದ್ದಾರೆ. ಅದರ ಮೊದಲ ಹೆಜ್ಜೆಯಾಗಿ ಎಲ್ಲ ವಿಭಾಗಗಳಿಗೂ ಕನ್ನಡದ ಫಲಕಗಳನ್ನು ತೂಗುಹಾಕುವ, ಕನ್ನಡ ವಾತಾವರಣವನ್ನು ನಿರ್ಮಾಣ ಮಾಡುವ ಕಾರ್ಯ ಈಗಾಗಲೇ ಅನುಷ್ಠಾನಗೊಂಡಿದೆ. ಕನ್ನಡ ರಾಜ್ಯೋತ್ಸವದ ಅಂಗವಾಗಿ ಸಂಸ್ಥೆಯಲ್ಲಿ ಜರುಗುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಕೊಡುವುದರ ಜೊತೆಗೆ ಲಗುಬಗೆಯಿಂದ ಆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಆಹಾರ ವಿಜ್ಞಾನ ಕ್ಷೇತ್ರಕ್ಕೆ ಡಾ॥ ವಿ. ಪ್ರಕಾಶರು ಸಲ್ಲಿಸಿರುವ ಸೇವೆಯ ವೈಶಿಷ್ಟ್ಯವನ್ನರಿತೇ ಇವರಿಗೆ ಪ್ರತಿಷ್ಠಿತ ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿ ಪ್ರಾಪ್ತವಾಗಿದೆ. ವಾಸ್ತವವಾಗಿ, ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿಯ ಬಗ್ಗೆಯೇ ಸ್ವಲ್ಪ ಮಾಹಿತಿ ನೀಡುವುದು ಅವಶ್ಯಕವಾಗಿತ್ತು. ಸದ್ಯಕ್ಕೆ ಅದನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಡಾ॥ ಪ್ರಕಾಶರ ಕೊಡುಗೆಯ ಒಂದು ಪಕ್ಷಿ ನೋಟವೂ ಕೂಡ ಅಷ್ಟೇ ಮುಖ್ಯವಾದ ಕೆಲಸವಾಗಿದ್ದು, ಅವರ ಸಂಶೋಧನೆಯ ಕಿರುನೋಟ ಈ ಲೇಖನ.

—ಸಂ

ಮೈಸೂರಿನಲ್ಲಿರುವ ಕೇಂದ್ರ ಆಹಾರ ತಂತ್ರವಿದ್ಯಾ ಸಂಶೋಧನ ಸಂಸ್ಥೆಯ ನಿರ್ದೇಶಕ ಡಾಕ್ಟರ್ ವಿಶ್ವೇಶ್ವರಯ್ಯ ಪ್ರಕಾಶ್ (೧೯೫೧) ಅವರಿಗೆ ೧೯೯೬ರ ಸಾಲಿನ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ಪ್ರದಾನವಾಗಿರುವುದು ಅರ್ಹತೆಗೆ ಸಕಾಲದಲ್ಲಿ ಸಂದ ಘನ ಗೌರವ. ಶ್ರೀಯುತರು ಈ ಸಂಸ್ಥೆಯ ನಿರ್ದೇಶಕರೂ ಹೌದು. ಕರ್ನಾಟಕ ರಾಜ್ಯ ಸರ್ಕಾರ ೯೬ರ ರಾಜ್ಯೋತ್ಸವದಲ್ಲಿ ಪ್ರಕಾಶ್‌ರಿಗೆ ಪ್ರಶಸ್ತಿಯಿತ್ತು ಸನ್ಮಾನಿಸಿರುವುದು ಕನ್ನಡಮ್ಮನ ಈ ಸುಪುತ್ರನಿಗೆ ತಾಯಿ ಹರಸಿ ಮುಂದೆ ಸಾಗಲು ಊಡಿರುವ ಅಧಿಕ ಚಾಲನ ಬಲ.

ಪ್ರೋಟೀನ್ ಅಧ್ಯಯನ ಕುರಿತಂತೆ ಬಿಎಸ್‌ಸಿ (ಮೈಸೂರಿನ ಯುವರಾಜ ಕಾಲೇಜ್) ಓದುತ್ತಿದ್ದ ದಿನಗಳಿಂದಲೂ ಆಸಕ್ತಿ. ಜೀವರಸಾಯನ ವಿಜ್ಞಾನ ಎಂಎಸ್‌ಸಿ ಪದವಿ ಪಡೆದ ಬಳಿಕ, ತಾವು ಈಗ ನಿರ್ದೇಶಕರಾಗಿರುವ ಸಂಸ್ಥೆಯಲ್ಲಿಯೇ ಉನ್ನತ ಸಂಶೋಧನೆಯನ್ನು ಮುಂದುವರಿಸಿದರು. ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟೊರೇಟ್ ಪಡೆದರು. ಈ ನಿರಂತರ ಜ್ಞಾನಪಿಪಾಸು ಅಮೆರಿಕದ ಟೆಕ್ಸಾಸ್ ಮತ್ತು ಮೆಸಾಚುಸೆಟ್ಸ್ ವಿಶ್ವವಿದ್ಯಾಲಯಗಳಲ್ಲಿಯೂ ತಮ್ಮ ಅಧ್ಯಯನ ಸಂಶೋಧನೆಗಳನ್ನು ಮುಂದುವರಿಸಿ ಅರಿವಿನ ಹರವನ್ನು ವಿಸ್ತರಿಸಿದ್ದಾರೆ.

ಡಾ॥ ವಿಶ್ವೇಶ್ವರಯ್ಯ ಪ್ರಕಾಶ್ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಪಡೆದ ನಂತರ ೧೯೭೨ರಲ್ಲಿ

ಆಹಾರ ಸಂಶೋಧನಾ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದರು. ಬೀಜ ಪ್ರೋಟೀನು ವಿಭಾಗದಲ್ಲಿ ಅವರು ನಡೆಸಿದ ಸಂಶೋಧನೆಗಾಗಿ ಭಟ್ನಾಗರ್ ಪ್ರಶಸ್ತಿ ಪಡೆದಿರುವ ಶ್ರೀಯುತರು ಪ್ರಸ್ತುತ ಮೈಸೂರಿನ ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆಸಕ್ತಿ, ವೃತ್ತಿ, ಸಂಸ್ಥೆ ಮೂರೂ ಪರಸ್ಪರ ಪೂರಕ ಪೋಷಕವಾಗಿ ಬೆಸೆದು ಕೊಂಡಿರುವುದೊಂದು ವಿರಳ ಸಂಗತಿ. ಜೊತೆಗೆ ಇವುಗಳ ಕೇಂದ್ರಬಿಂದುವಾದ ವ್ಯಕ್ತಿ ಸಹೃದಯ ಜ್ಞಾನಪರಿವ್ರಾಜಕನೂ ಆಗಿದ್ದರೆ ಅಲ್ಲಿ ಕಾಣುವುದೇನು? ಸತತ ಜ್ಞಾನ ಪರಿಕ್ರಮಣ. ಯಶಸ್ಸುಗಳು ಈ ಪರಿಕ್ರಮಣದ ವೇಳೆ ತೀರ ಸಹಜವಾಗಿ ಎದುರಾಗುವ ಲಾಭಾಂಶಗಳು. ಡಾ. ಪ್ರಕಾಶ್‌ರ ಜೀವನ-ಸಂಶೋಧನೆ-ಯಶಸ್ಸು ದಿವ್ಯ ನಿದರ್ಶನ.

ವೈಜ್ಞಾನಿಕ ಸಂಶೋಧನಾ ವಿವರ

ನಮ್ಮ ಆಹಾರದಲ್ಲಿ ಪ್ರೋಟೀನಿನ ಪಾತ್ರ ಬಹಳ ಹಿರಿದು. ಕಟ್ಟಡದ ಇಟ್ಟಿಗೆಗಳಂತೆ ನಮ್ಮ ದೇಹರಚನೆಗೆ ಅನುವಾಗುವ ಜೀವಾಧಾರ ವಸ್ತು ಪ್ರೋಟೀನ್. ದೇಹಕೋಶಗಳ ಆಂತರಿಕ ಕ್ರಿಯೆಗಳಲ್ಲಿ ಇವು ಕಿಣ್ವಗಳಾಗಿ ಕೂಡ ಕಾರ್ಯಚಾಲನೆ ಮಾಡುತ್ತವೆ. ಅಕ್ಕಿ, ಬೇಳೆ, ಎಣ್ಣೆಬೀಜಗಳು ಹಾಗೂ ಅನೇಕ ತರಕಾರಿಗಳಲ್ಲಿ ಪ್ರೋಟೀನುಗಳಿವೆ. ಜೀವಪ್ರಪಂಚದಲ್ಲಿ ಕಂಡುಬರುವ ನೂರಾರು ಬಗೆಯ ಪ್ರೋಟೀನುಗಳ ಅತಿ ಸಂಕೀರ್ಣ ಪದಾರ್ಥಗಳು. ಪ್ರೋಟೀನುಗಳಲ್ಲಿ ನಿರ್ದಿಷ್ಟ ಸರಣಿಗಳಾಗಿ ಜೋಡಣೆಗೊಂಡಿರುವ ಅಮೈನೊ ಆಮ್ಲಗಳೆಂಬ ಪ್ರತ್ಯಾಮ್ಲೀಯ ಘಟಕಗಳು. ಇವುಗಳ ಗುಣಲಕ್ಷಣ ವೈವಿಧ್ಯಗಳಿಗೆ ಕಾರಣ. ಈ ಘಟಕಗಳ ಸರಣಿಯಲ್ಲಿ ವ್ಯತ್ಯಾಸ ಮಾಡಿ, ಅಂದರೆ ಚಿಕ್ಕ ಅನುಕ್ರಮ ತುಂಡುಗಳನ್ನು ತೆಗೆದು ನಮ್ಮ ಆವಶ್ಯಕತೆಗೆ ತಕ್ಕಂತೆ ಬೇರೆ ಅನುಕ್ರಮಗಳ ನಡುವೆ ತೂರಿಸಿ ಪ್ರೋಟೀನ್ ಎಂಜಿನಿಯರಿಂಗ್ ವಿಧಾನದ ಮೂಲಕ ಅಪೇಕ್ಷಿತ ಗುಣವುಳ್ಳ ಪ್ರೋಟೀನುಗಳನ್ನು ಶಿಲ್ಪಿಸಬಹುದು. ಹೀಗಾಗಿ, ಇಂದು ಪ್ರೋಟೀನಿನ ಬಗೆಗಿನ ಮೂಲಭೂತ ಅಧ್ಯಯನಗಳು, ಸಂಶೋಧನೆಗಳು ಅವ್ಯಾಹತವಾಗಿ ನಡೆಯುತ್ತಿವೆ.

ಅನೇಕ ಆಹಾರಪದಾರ್ಥಗಳು ಪ್ರೋಟೀನುಭರಿತವೆಂದು ಹೇಳದೆಯಾದರೂ ಇವು ಅತಿ ಹೆಚ್ಚು ಪ್ರಮಾಣದಲ್ಲಿ ಕಂಡು ಬರುವುದು ಎಣ್ಣೆ ಬೀಜಗಳಲ್ಲಿ. ಇವುಗಳಲ್ಲಿಯ ಪ್ರೋಟೀನುಗಳನ್ನು 'ಬೀಜ ಪ್ರೋಟೀನು' (ಸೀಡ್ ಪ್ರೋಟೀನ್)ಗಳೆಂದೇ ಕರೆಯುತ್ತಾರೆ. ವಿಶೇಷವಾಗಿ ಎಣ್ಣೆ ತೆಗೆದ ಮೇಲೆ ದೊರೆಯುವ ಹಿಂಡಿಯಲ್ಲಿ ಅತ್ಯಧಿಕ ಮಟ್ಟದಲ್ಲಿ ಪ್ರೋಟೀನು ಇರುತ್ತದೆ. ಅನ್ವಯ ಪೌಷ್ಟಿಕತೆಯಲ್ಲಿ ಪ್ರೋಟೀನುಗಳಿಗೆ ಅಗಾಧ ಉಪಯೋಗವಿದೆ. ಎಣ್ಣೆಬೀಜಗಳು ಎಣ್ಣೆಯ ಪ್ರಧಾನ ಮೂಲಗಳಷ್ಟೆ. ಇವುಗಳಲ್ಲಿರುವ ಪ್ರೋಟೀನುಗಳು ಕೇವಲ ಮೊಳೆಯುವಿಕೆಯಲ್ಲಿ ಪಾತ್ರವಹಿಸುತ್ತವೆ ಎಂದೂ ಅಂದರೆ ಕಾಳಿನ ದಾಸ್ತಾನು ಅವಧಿಯಲ್ಲಿ ತನ್ನ ಕಾರ್ಯಕ್ಷಮತೆಯನ್ನು ಉಳಿಸಿಕೊಳ್ಳುವ ಅಂಶವೆಂದೂ ಬಹಳ ಕಾಲದವರೆಗೆ ತಿಳಿಯಲಾಗಿದ್ದಿತು. ಆದರೆ ಇಂದಿನ ವೈಜ್ಞಾನಿಕ ಸಾಹಿತ್ಯದ ನೆರೆಗೆ ಈ ವಿಚಾರ ಬದಲಾಗುತ್ತಿದೆ.

ಬೀಜ ಪ್ರೋಟೀನುಗಳ ಬಗೆಗೆ ೧೯೬೦ರಲ್ಲಿ ಸಂಶೋಧನೆ ಆರಂಭವಾಗಿದ್ದಿತು. ಅಲ್ಪಬೆ

ವಿನ್, ಗ್ಲಾಬ್ಯುಲಿನ್‌ಗಳೂ ಸೇರಿದಂತೆ ಪ್ರೋಟೀನಿನ ಇತರ ಅಂಶಗಳ ಬಗೆಗೆ ಇವು ತೊಡಕಾಗಿದ್ದವು. ಈಚೆಗೆ, ಎಂದರೆ ೧೯೮೦ರ ದಶಕದಲ್ಲಿ, ಅತಿ ಕರಾರುವಾಕ್ಕಾಗಿರುವ, ನಿಷ್ಕೃಷ್ಟವಾದ ಜೀವಭೌತ ವಿಜ್ಞಾನದ ಅನೇಕ ವಿಧಾನಗಳು ರೂಢಿಗೆ ಬಂದಮೇಲೆ, ನಿಜವಾಗಿ ಪ್ರೋಟೀನುಗಳ ಪಾತ್ರವೇನು ಎಂಬ ಮೂಲಭೂತ ಪ್ರಶ್ನೆ ಒಂದು ಮಹತ್ವದ ವಿಷಯವಾಗಿ ಪರಿಣಮಿಸಿತು.

ಅನೇಕ ಬಗೆಯ ಎಣ್ಣೆ ಬೀಜಗಳಿವೆ. ಇವುಗಳಲ್ಲಿರುವ ಪ್ರೋಟೀನುಗಳಲ್ಲಿ ಬಹಳ ಹೋಲಿಕೆ ಇರುವುದು ತಿಳಿದಿದೆ. ಪ್ರೋಟೀನುಗಳ ಈ ಕುಟುಂಬದಲ್ಲಿ, ಇವುಗಳ ಪ್ರಧಾನ ಪ್ರೋಟೀನು ಅಂಶಗಳು ಎಂದರೆ ೧೧ ಎಸ್ ಪ್ರೋಟೀನು ಅಂಶ ಮತ್ತು ಅಪ್ರಧಾನ ಪ್ರೋಟೀನು ಅಂಶಗಳು ಎಂದರೆ ೩ ಎಸ್ ಪ್ರೋಟೀನು ಅಂಶ–ಇವುಗಳ ವರ್ತನೆ ಪ್ರೋಟೀನು ವ್ಯವಸ್ಥೆಯ ಕುತೂಹಲಕಾರೀ ಅಂಶಗಳಾಗಿ, ಅಧ್ಯಯನ ವಿಷಯಗಳಾಗಿವೆ. ಉದಾಹರಣೆಗೆ ನೆಲಗಡಲೆ ಬೀಜದಲ್ಲಿ ಮತ್ತು ಸೋಯಾ ಅವರೆಯಲ್ಲಿ ೧೧ ಎಸ್ ಪ್ರೋಟೀನು ಅಂಶಗಳಿವೆ. ಇವುಗಳ ನಡುವೆ ಎಂಥ ಸಾಮ್ಯ ಅಥವಾ ಸಂಬಂಧವಿದೆ ಎಂಬುದು ಮುಖ್ಯ. ಇದನ್ನು ಆಧರಿಸಿ ನೆಲಗಡಲೆ, ಎಳ್ಳು, ಸೋಯಾ ಅವರೆ, ಸಾಸಿವೆ, ಹತ್ತಿಬೀಜ ಮತ್ತು ಇತರ ಎಣ್ಣೆ ಬೀಜಗಳ ಪ್ರೋಟೀನುಗಳಲ್ಲಿ ರಚನಾ ಸಾಮ್ಯವಿದೆ ಎಂಬ ಒಂದು ಆಧಾರ ಕಲ್ಪನೆಯನ್ನು ಪ್ರತಿಪಾದಿಸಲಾಯಿತು. ನೇರ ಮಾಪನ ಆಧಾರಗಳು ಇಲ್ಲದಿರುವುದರಿಂದ ಇದನ್ನು ಪ್ರಮಾಣೀಕರಿಸುವುದು ಅಷ್ಟು ಸುಲಭವಲ್ಲ. ಆದರೆ ಲೈಗಾಂಡ್ ಬಂಧಕ (ಸಂಕೀರ್ಣ ಲವಣವೊಂದರಲ್ಲಿ ಕೇಂದ್ರ ಪರಮಾಣುವಿಗೆ ಬಂಧಿಸಿಕೊಂಡಿರುವ ಪರಮಾಣು ಅಥವಾ ಅಣು ಅಥವಾ ಅಯಾನು), ಉಷ್ಣತೆ, ಆಮ್ಲೀಯತೆಯ ಮಟ್ಟ, ಗುಣಬದಲಾವಣೆಯ ಕಾರಕಗಳು, ಲವಣಗಳಿಂದಾಗಿ ಇವುಗಳ ವಿಯೋಜನೆ ಮತ್ತು ಗುಣಬದಲಾವಣೆಯಂಥ ವರ್ತನೆಗಳು ಹಾಗೂ ಪ್ರೋಟೀನುಗಳನ್ನು ಸರಳ ಘಟಕಗಳಾಗಿ ವಿಘಟಿಸುವ ವಿವಿಧ ಪ್ರೊಟಿಯೊಲಿಟಿಕ್ ಎನ್‌ಜೈಮುಗಳೊಡನೆ ಇವುಗಳ ವರ್ತನೆ–ಇಂತಹ ಪರೋಕ್ಷ ವಿಧಾನಗಳಿಂದ ಮಾಪನಗಳನ್ನು ನಿರ್ಧರಿಸಬೇಕಾಗುತ್ತದೆ.

ಈ ಎಲ್ಲವೂ ಒಂದು ಮುಖ್ಯ ಆಧಾರ ಕಲ್ಪನೆಗೆ ಎಡೆಮಾಡಿಕೊಡುತ್ತವೆ. ಅಮೈನೊ ಆಮ್ಲಗಳ ಸರಣಿ ಅಥವಾ ಅನುಕ್ರಮತೆಗಳ ಭಿನ್ನತೆಗೆ ಅನುಗುಣವಾಗಿ ಬಹುಶಃ ಈ ಪ್ರೋಟೀನುಗಳ ಮೇಲ್ಮೈ ಲಕ್ಷಣಗಳು ವ್ಯತ್ಯಾಸಗೊಂಡರೂ ವಿಭಿನ್ನ ದ್ರಾವಣಗಳಲ್ಲಿ ಅವುಗಳ ರಚನೆಗೆ ಸಂಬಂಧಪಟ್ಟ ವರ್ತನೆಯಲ್ಲಿ ಸಾದೃಶ್ಯವಿರುವುದು ಸಾಧ್ಯವಿದೆ. ಈ ಗುಣವನ್ನು ಆಧರಿಸಿ, ಬೇರೆ ಬೇರೆ ದ್ರಾವಣಗಳಲ್ಲಿ ಅವು ನಿರೀಕ್ಷಿತ ಗುಣಗಳನ್ನು ಪ್ರದರ್ಶಿಸುವುವೇ ಎಂಬುದನ್ನು ನಿರ್ಧರಿಸಿ, ಅವುಗಳ ಮೂಲಭೂತ ವರ್ತನೆಗಳಲ್ಲಿ ಮುಕ್ತ ವೈವಿಧ್ಯವನ್ನು ಉಂಟುಮಾಡಬಹುದು. ಇದಕ್ಕಾಗಿ ಪ್ರೋಟೀನುಗಳ ವಿಯೋಜನೆ ಮತ್ತು ಗುಣ ಬದಲಾವಣೆ ಕಾರ್ಯಗಳನ್ನು ಶಾಖಗತಿ ವಿಜ್ಞಾನ (ಥರ್ಮೋಡೈನಮಿಕ್ಸ್) ವಿಶ್ಲೇಷಣೆಯ ಮೂಲಕ ಸಾಧಿಸಬೇಕಾಗುತ್ತದೆ. ಆದರೆ, ಅತ್ಯಂತ ಖಚಿತವಾಗಿ ಕಾರ್ಯಮಾಡುವ ವೈಜ್ಞಾನಿಕ ಉಪಕರಣ

ಗಳಾದ ಸ್ಟಾಪ್ಡ್ ಫ್ಲೋ ಸ್ಪೆಕ್ಟ್ರೊಫೊಟೊಮೆಟ್ರಿ, ವಿಶ್ಲೇಷಣಾತ್ಮಕ ಅಲ್ಟ್ರಾಸೆಂಟ್ರಿಫ್ಯೂಜ್, ಸ್ಪೆಕ್ಟ್ರೊ ಫ್ಲೋರಿಮೀಟರ್ ಹಾಗೂ ನಿಖರ ಸಾಂದ್ರತಾ ಮಾಪಕ (ಡೆನ್ಸಿಟೊಮೀಟರ್) ಗಳ ನೆರವಿನಿಂದ ಇದು ಸಾಧ್ಯವಾಗಬಲ್ಲದು. ಇದರ ಜೊತೆಗೇ, ಮೈಕ್ರೊಕೆಲೊರಿಮೆಟ್ರಿ ಎಂಬ ಉಷ್ಣತೆಯ ಸೂಕ್ಷ್ಮ ಪರಿಮಾಣಗಳನ್ನು ಅಳೆಯುವ ಸಾಧನದಿಂದ, ಪ್ರತ್ಯೇಕವಾಗಿ ಶಾಖಗತಿ ವೈಜ್ಞಾನಿಕ ಮೌಲ್ಯಗಳನ್ನು ಪಡೆಯುವುದು ಅಗತ್ಯ. ವಿಶೇಷವಾಗಿ, ಸಹ ದ್ರಾವಣಗಳು ಮತ್ತು ಲೈಗಾಂಡ್‌ಗಳಿಗೆ ಸಂಬಂಧಪಟ್ಟ ಅವಲೋಕನಗಳು ಪ್ರೋಟೀನು ರಚನೆಗಳನ್ನೇ ಸ್ಥಿರೀಕರಿಸುವುದರಲ್ಲಿ ಬಹಳ ಮುಖ್ಯವಾಗಿವೆ. ಈ ಫಲಿತಾಂಶವನ್ನು ಕೆಲವು ಕಿಣ್ವಗಳಿಗೂ ಬೃಹದಣುಗಳಿಗೂ ಅನ್ವಯಿಸಬಹುದು. ನಿರ್ಯಾತ ಯೋಗ್ಯ ಸೀಗಡಿ ಮೀನುಗಳಲ್ಲಿ ತೊಟ್ಟಿಕ್ಕುತ್ತಿದ್ದ ದ್ರವದಿಂದ ಉಂಟಾಗುವ ಗುಣ ನಷ್ಟವನ್ನು ಇಂಥ ಒಂದು ಅನ್ವಯದಿಂದಾಗಿಯೇ ನಿಯಂತ್ರಿಸಬಹುದೆಂದು ಕಂಡು ಬಂದಿತು. ಪ್ರೋಟೀನಿನ ವಿಯೋಜನೆ ಮತ್ತು ಗುಣ ಬದಲಾವಣೆಯ ಕಾರ್ಯ ರೀತಿಯನ್ನು ಅನ್ವಯಿಸಿ ನಿರ್ದಿಷ್ಟ ಲವಣಗಳಿಂದ ಪ್ರೋಟೀನನ್ನು ಸ್ಥಿರೀಕರಿಸಿ, ಸೀಗಡಿದ್ರವ ತೊಟ್ಟಿಕ್ಕಿ ನಷ್ಟವಾಗದಂತೆ ತಡೆಯಲಾಗಿದೆ. ಅಂದರೆ ಒಂದು ಮೂಲಭೂತ ಸಂಶೋಧನೆಯ ಜಾಡು ಹಿಡಿದು, ದೀರ್ಘಾವಧಿಯ ಯುಕ್ತ ಸಂಶೋಧನೆಯನ್ನು ಹಮ್ಮಿಕೊಂಡು ಇಂಥ ಅತಿ ಉಪಯುಕ್ತ ಫಲಿತಾಂಶಗಣನ್ನು ಗಳಿಸಬಹುದು ಮತ್ತು ಅವುಗಳ ಅನ್ವಯದಿಂದ ಸಮಾಜಕ್ಕೆ ಹೆಚ್ಚಿನ ಪ್ರಯೋಜನಗಳನ್ನು ಸಲ್ಲಿಸಬಹುದು.

ಬೀಜ ಪ್ರೋಟೀನುಗಳಿಂದ, ಅದರಲ್ಲಿಯೂ ಅಂತಿಮವಾಗಿ ಅವುಗಳ ಕಾರ್ಯಾಚರಣೆಯ ದೃಷ್ಟಿಯಿಂದ ಬೀಜಕ್ಕೆ ಇನ್ನೂ ಹೆಚ್ಚಿನ ಮಹತ್ವದ ಉಪಯೋಗವಿರಬೇಕು. ಅನೇಕ ಘಟಕಾಂಶಗಳಿರುವ ಈ ಪ್ರೋಟೀನುಗಳಲ್ಲಿ ಅವುಗಳ ಪ್ರತಿಯೊಂದು ಉಪಾಂಗಗಳ ಪಾತ್ರವನ್ನೂ ಪರಿಗಣಿಸಿದುದೇ ಆದರೆ ಈ ಪ್ರೋಟೀನುಗಳ ಬಹು ಆಯಾಮ ಕಾರ್ಯಾಚರಣೆಯಿಂದ ಅನೇಕ ಲಾಭಗಳನ್ನು ಪಡೆಯಬಹುದು.

ಒಟ್ಟಿನಲ್ಲಿ ಇಂಥ ಆಧಾರ ಮಾಹಿತಿಯ ಮೇಲೆ ವೈವಿಧ್ಯಯುತ ಪರಿಣಾಮಗಳಿಗಾಗಿ ಇನ್ನೂ ಅಧ್ಯಯನ ನಡೆಯಬೇಕಾಗಿದೆ. ವಿಯೋಜಿತ ಪರಿಸ್ಥಿತಿಗಳಲ್ಲಿ ಪ್ರೋಟೀನಿನ ಉಪಘಟಕಗಳ ವರ್ತನೆ ಹೇಗಿರುತ್ತದೆ? ಇವು ಒಂದಾಗಿ ಮತ್ತೆ ಮೂಲ ಅಣುವನ್ನು ಹೋಲುವ ಅಣು ಉಂಟಾಗಬಹುದೆ? ಹಾಗಿದ್ದರೆ ಈ ರೀತಿ ಹೊಸದಾಗಿ ಉಂಟಾದ ಮೂಲವನ್ನು ಹೋಲುವ ಅಣುವಿನಲ್ಲಿ ಮೂಲ ಅಣುವಿನ ಲಕ್ಷಣಗಳು ಇರುತ್ತವೆಯೆ? ಇಂಥ ಅತಿ ಚಿತ್ತಾಕರ್ಷಕ ಪ್ರಶ್ನೆಗಳು ನಮ್ಮ ಮುಂದೆ ನಿಲ್ಲುತ್ತವೆ. ಪ್ರಕೃತಿಯಲ್ಲಿ ಈ ಪ್ರೋಟೀನುಗಳ ಪಾತ್ರವೇನು ಎಂಬುದನ್ನು ಕುರಿತು ಒಬ್ಬ ವಿಜ್ಞಾನಿಯಲ್ಲ, ವಿಜ್ಞಾನಿಗಳ ಬಳಗವೇ ಅಧ್ಯಯನ ಮಾಡಬೇಕಾಗುವುದು. ಇದರಿಂದ ಜೀವ ವಿಜ್ಞಾನ ಅಧ್ಯಯನ, ಜ್ಞಾನ ಸಂಪತ್ತು ವೃದ್ಧಿಸಿ, ಅದರ ದಿಗಂತಗಳು ತೆರೆದುಕೊಳ್ಳಬಲ್ಲವು.

ರಾಷ್ಟ್ರೀಯ ವಯಸ್ಕರ ಶಿಕ್ಷಣದ ದಾರಿದೀಪಗಳು

ಟಿ. ಆರ್. ನಾಗಪ್ಪ

೨೯೦೪, ೨ನೇ ಮುಖ್ಯ ರಸ್ತೆ,
ಚಾಮುಂಡಿಪುರಂ, ಮೈಸೂರು-೪

ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ೧೯೭೮ರಲ್ಲಿ ಜಾರಿಗೆ ಬಂದ ಬೃಹತ್ ಕಾರ್ಯಕ್ರಮ. ಅದರ ವ್ಯಾಪ್ತಿಯಲ್ಲಿ ೧೦ ಕೋಟಿ ಅನಕ್ಷರಸ್ಥರನ್ನು ಅರಿವು ಕ್ರಿಯಾಶೀಲತೆಯನ್ನೊಳಗೊಂಡಂತೆ ಅಕ್ಷರಸ್ಥರನ್ನಾಗಿ ಮಾಡಬೇಕಿತ್ತು. ಈ ದೃಷ್ಟಿಯಿಂದ ವಯಸ್ಕರ ಶಿಕ್ಷಣ ಕೇಂದ್ರಗಳು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪ್ರಾರಂಭವಾಗಿವೆ. ಅಂಚೆಪೇದೆ ಹಾಗೂ ಇತರ ಅಭಿವೃದ್ಧಿ ಅಧಿಕಾರಿಗಳು ಭೇಟಿ ಮಾಡದ ಹಳ್ಳಿಗಳನ್ನು ವಯಸ್ಕರ ಶಿಕ್ಷಣ ಕೇಂದ್ರಗಳು ಮುಟ್ಟಿರುವುದು ಸಮಾಧಾನ ಪಟ್ಟುಕೊಳ್ಳಬೇಕಾದ ಅಂಶ.

ವಯಸ್ಕರ ಶಿಕ್ಷಣ ಕೇಂದ್ರಗಳ ಯಶಸ್ಸು ನಿಷ್ಠೆ ಮತ್ತು ಶ್ರದ್ಧೆಯಿಂದ ಸೇವೆ ಸಲ್ಲಿಸಬಲ್ಲ ಉಪಾಧ್ಯಾಯರನ್ನು ಅವಲಂಬಿಸಿದೆ. ಅಂತಹವರ ಪ್ರಮಾಣ ಎಷ್ಟು ಎಂದು ಹೇಳಲು ಸಾಧ್ಯವಿಲ್ಲ. ಆದರೂ ಈ ಸಂದರ್ಭದಲ್ಲಿ ಕೆಲವು ಉದಾಹರಣೆಗಳನ್ನು ಕೊಡಬಹುದು. ಬಿಹಾರದ ಪಾಟ್ನನಗರ. ಅಲ್ಲಿ ಶೈತಪುರ ಬಂಡ್‌ಟೋಲಿ ಎಂಬ ಹರಿಜನ ಬಸ್ತಿ. ಅಲ್ಲೊಂದು ವಯಸ್ಕರ ಶಿಕ್ಷಣ ಕೇಂದ್ರ. ಅದರ ಉಪಾಧ್ಯಾಯ ಲಾಲಾ ಬಾಬುದಾಸ್. ಅನೌಪಚಾರಿಕ ಶಿಕ್ಷಣ ಕ್ಷೇತ್ರಕ್ಕೆ ಹೇಳಿ ಮಾಡಿಸಿದ ವ್ಯಕ್ತಿ ಎಂದು ಹೇಳಿದಲ್ಲಿ ಅತಿಶಯೋಕ್ತಿ ಆಗಲಾರದು. ಆತ ಕೇಂದ್ರಕ್ಕೆ ಹತ್ತಿರವಿರುವ ಕಾರ್ಖಾನೆಯಲ್ಲಿ ಒಬ್ಬ ನೌಕರ. ಆವನು ವಯಸ್ಕರ ಶಿಕ್ಷಣ ಕೇಂದ್ರಕ್ಕೆ ಪ್ರತಿ ನಿತ್ಯ ಕಾಲಕ್ಕೆ ಸರಿಯಾಗಿ ಹಾಜರಾಗುವನು. ಕಾರ್ಖಾನೆಯ ಕೆಲಸದ ಪರಿಣಾಮವಾಗಿ ಕೆಲವು ವೇಳೆ ಆತ ಕೇಂದ್ರಕ್ಕೆ ತಡವಾಗಿ ಹಾಜರಾಗಬಹುದು. ಅದರಿಂದ ಕೇಂದ್ರದ ಕಾರ್ಯ ಕುಂಠಿತವಾಗದು. ವಿದ್ಯಾರ್ಥಿಗಳು ಕಾಲಕ್ಕೆ ಸರಿಯಾಗಿ ಕೇಂದ್ರಕ್ಕೆ ಹಾಜರಾಗಿ ಓದುಬರಹದಲ್ಲಿ ತೊಡಗುವರು. ಉಪಾಧ್ಯಾಯರ ಮತ್ತು ಕಲಿಯುವವರ ಮಧ್ಯೆ ಬಾಂಧವ್ಯ ಚೆನ್ನಾಗಿದೆ.

ಈ ತೆರನಾದ ಉಪಾಧ್ಯಾಯರು ಸಾಮಾನ್ಯವಾಗಿ ಯಾರ ಕಣ್ಣಿಗೂ ಬೀಳುವುದಿಲ್ಲ. ಕ್ಷೇತ್ರದ ಕಾರ್ಯಕರ್ತರು ಅಂತಹವರನ್ನು ಗುರುತಿಸಿ ಗೌರವಿಸಬೇಕು.

ಡೆಹರಾಡೂನಿನ ಹತ್ತಿರ ಸಿಂಬುವಾಲ ಎಂಬ ಇನ್ನೊಂದು ಸಣ್ಣ ಹಳ್ಳಿ. ಅದು ಕೊಲಘಟ್ ಎಂಬ ಗ್ರಾಮ ಸಭೆಯ ವ್ಯಾಪ್ತಿಗೆ ಬರುತ್ತದೆ. ಅಲ್ಲೊಂದು ಮಹಿಳಾ ವಯಸ್ಕರ ಶಿಕ್ಷಣ ಕೇಂದ್ರ. ಅದರ ಉಪಾಧ್ಯಾಯಿನಿ ವಿಜಯರಾಜೆವನ್ಯಿ.

ಆಕೆಯ ಶ್ರದ್ಧೆ ಮತ್ತು ಉತ್ಸಾಹ ಮಾದರಿ ಹಾಗೂ ಅನುಕರಣೀಯ. ಆಕೆ ಉಪಾಧ್ಯಾಯಿನಿ ಮಾತ್ರ ಅಲ್ಲ. ಸಮಾಜಸೇವಾ ಕರ್ತೆಯೂ ಹೌದು. ಕಾರಣ ಆ ಸ್ಥಾನಕ್ಕೆ ಬೇಕಾದ ಗುಣಗಳು ಆಕೆಯಲ್ಲಿ ಮೂರ್ತಿವತ್ತಾಗಿ ಬೆಳೆದಿವೆ. ತನ್ನ ವಿದ್ಯಾರ್ಥಿನಿಯರ ಬೌದ್ಧಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ನಿರತಳಾಗಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಕಲಿಯುವವರೆಲ್ಲರನ್ನೂ ಕೂಡಿಸಿ 'ಮಕರ ಸಂಕ್ರಾಂತಿ ಸಮಿತಿ' ಎಂಬ ಸಂಘ ರಚಿಸಿರುವಳು. ಅವರು ಧೂಪ ತಯಾರಿಕೆಯಲ್ಲಿ ತೊಡಗಿರುವರು. ಅದರಿಂದ ಅವರಿಗೆ ಸ್ವಲ್ಪಮಟ್ಟಿನ ವರಮಾನದೊರಕುತ್ತಿದೆ. ಅದಕ್ಕಾಗಿ 'ಮಹಿಳಾ ಸಹಕಾರಿ ಉದ್ಯೋಗ' ಎಂಬ ಸಹಕಾರ ಸಂಘ ಸ್ಥಾಪನೆ ಆಗಿದೆ. ಅದು ೧೯೮೯ರ ಜೂನ್ ತಿಂಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಮಹಿಳಾ ವಿದ್ಯಾರ್ಥಿನಿಯರು ಪ್ರತಿ ದಿನ ಸುಮಾರು ೨ ಗಂಟೆ ಕಾಲ ಧೂಪ ತಯಾರಿಕೆಯಲ್ಲಿ ದುಡಿದು ತಲಾ ಸರಾಸರಿ ನಾಲ್ಕು ರೂಪಾಯಿ ಸಂಪಾದಿಸುತ್ತಿರುವರು.

ಪುದುಕೋಟೆ ನಗರದಿಂದ ೨೫ ಕಿ.ಮೀ. ದೂರದಲ್ಲಿ ಮಾನಕೊಟ್ಟೆ ಎಂಬ ಗ್ರಾಮ. ಅದರ ಹತ್ತಿರ ಅಭಿನವ ಮನು ಅಂಬೇಡ್ಕರ್ ಹೆಸರಿನ ಗ್ರಾಮ ಇದೆ. ಆ ಗ್ರಾಮದಲ್ಲಿ ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಕಲಿತ ಐದು ಮಂದಿ ಮಹಿಳೆಯರು ಇರುವರು. ಜೊತೆಗೆ ಮೂವರು ಗಂಡಸರು ೧೧ನೆಯ ತರಗತಿ ಪಾಸಾಗಿರುವರು. ಅವರು ತಮ್ಮ ಕಲಿಕೆಯನ್ನು ಅಲ್ಲಿಗೇ ನಿಲ್ಲಿಸಿಲ್ಲ. ಬದಲಾಗಿ ತಮ್ಮ ಕಲಿಕೆಯನ್ನು ಮುಂದುವರಿಸಲು ಬಯಸಿದರು. ಅಲ್ಲಿ ಬ್ಯಾಂಕಿನ ಕೆಲವು ಅಧಿಕಾರಿಗಳು ಪುಕ್ಕಟೆ ಪಾಠ ಹೇಳಲು ಮುಂದಾಗಿರುವರು. ಅದು ಗ್ರಾಮಸ್ಥರಿಗೆ ಒಂದು ವರವಾಗಿ ಪರಿಣಮಿಸಿದೆ. ಹಿಂದೆ ಅಲ್ಪಸ್ವಲ್ಪ ಕಲಿತವರು ಬ್ಯಾಂಕಿನ ಅಧಿಕಾರಿಗಳ ಹತ್ತಿರ ಕಲಿಯಲು ಹೋಗುವರು. ಹೀಗೆ ಓದಿ ಎಂಟನೆಯ ತರಗತಿಯ ಪರೀಕ್ಷೆಗೆ ಕೂಡಲು ಇಷ್ಟಪಟ್ಟಿರುವರು.

ಗ್ರಾಮಸ್ಥರ ಉತ್ಸಾಹ ಹೆಚ್ಚಿನದು. ಇಡೀ ಗ್ರಾಮ ಸಾಕ್ಷರತಾ ಗ್ರಾಮ ಆಗಬೇಕೆಂಬುದು ಅವರ ಆಸೆ. ಆದ್ದರಿಂದ ಎಲ್ಲ ಗ್ರಾಮಸ್ಥರು ಓದು ಕಲಿಯಲು ರಾತ್ರಿ ಒಟ್ಟಾಗಿ ಉತ್ಸಾಹದಿಂದ ಸೇರುವರು. ಉಪಾಧ್ಯಾಯರು ಯಾವ ಸಂಭಾವನೆಯಿಲ್ಲದೆ ಪುಕ್ಕಟೆ ಓದು ಬರಹ ಕಲಿಸುತ್ತಿರುವುದು ಮೆಚ್ಚುವ ಸಂಗತಿ. ಈ ಉಪಾಧ್ಯಾಯರು ವಯಸ್ಕರ ಶಿಕ್ಷಣ ಇಲಾಖೆಯಿಂದ ತರಬೇತು ಪಡೆದಿರುವರು. ಇಂತಹ ಕೇಂದ್ರಗಳ ಯಶಸ್ಸು ಇನ್ನಿತರ ಗ್ರಾಮಗಳ ಮೇಲೆ ಹೆಚ್ಚಿನ ಪರಿಣಾಮಬೀರುವುವು.

ಜೀವನದಲ್ಲಿ ಹೊಸ ಬೆಳಕು

ಸಾಕ್ಷರತೆ ಸುಲಭವಾಗಿ ಯಾರನ್ನೂ ಆಕರ್ಷಿಸುವುದಿಲ್ಲ. ಹಾಗೆ ಆಕರ್ಷಿತರಾದವರು ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಸೇರಿ ತಮ್ಮ ಜೀವನದಲ್ಲಿ ಹೊಸ ಬೆಳಕನ್ನು ಕಂಡಿದ್ದಾರೆ.

ಆಂಧ್ರ : ನಲ್ಲೂರಿನ ಲತೀಫ್‌ಗೆ ಇನ್ನೂ ೧೯ ವರ್ಷ. ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಕಲಿತವನು. ಆತನದು ಒಳ್ಳೆಯ ನಡವಳಿಕೆ. ಅವನೊಡನೆ ಮಾತನಾಡುವುದೇ ಒಂದು ರೀತಿಯ ಸಂತೋಷ. ವಿದ್ಯಾರ್ಥಿಯಾ

ದ್ದಾಗ ವಯಸ್ಕರ ಶಿಕ್ಷಣ ಇಲಾಖೆ ಮತ್ತು ಡಿ.ಆರ್.ಡಿ.ಎ ಸಹಾಯದಿಂದ ಹೊಲಿಗೆ ಕಲಿತು ದಿನಕ್ಕೆ ೨೦–೨೫ ರೂಪಾಯಿ ಸಂಪಾದಿಸುತ್ತಿವನು. ಗ್ರಾಮದಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣ ಕೇಂದ್ರಕ್ಕೆ ತನ್ನ ಪಾಲಿನ ಸೇವನ್ನು ನೀಡುತ್ತಿರುವನು.

ಮೇಲ್ಕಂಡ ಗ್ರಾಮದ ಹತ್ತಿರ ಉಪಾರಲಪಲ್ಲಿ ಎಂಬ ಗ್ರಾಮ. ಅಲ್ಲಿ ಒಂದು ಮಹಿಳಾ ಕೇಂದ್ರ. ವೆಂಕಟೇಶ್ವರಮ್ಮ ಒಬ್ಬ ವಿದ್ಯಾರ್ಥಿನಿ. ವಯಸ್ಸು ೧೭. ಅವಳಿಗೆ ಕಿವಿ ಕೇಳಿಸದು, ಮಾತೂ ಬರದು. ಹೀಗಿದ್ದರೂ ಆಕೆ ಕಷ್ಟಪಟ್ಟು ಓದು ಬರಹ ಕಲಿತಳು. ಚಿತ್ರಗಳು, ಚಿತ್ರಪಟಗಳು, ದೃಕ್‌ಸಾಧನಗಳು ಮತ್ತು ಸಂಜ್ಞೆ ಮುಂತಾದವು ಆಕೆ ಕಲಿಯಲು ನೆರವಾದವು. ಆಕೆ ಈಗ ತನ್ನ ಮನಸ್ಸಿನಲ್ಲಿರುವುದನ್ನು ಸುಲಭವಾಗಿ ಬರೆದು ತೋರಿಸಬಲ್ಲಳು. ಡಿ.ಆರ್.ಡಿ.ಎ ಕೊಡುವ ವಿಶೇಷ ಅನುದಾನ ೩೦೦೦ ರೂ.ಗಳನ್ನು ಪಡೆದು ಒಂದು ಅಂಗಡಿಯನ್ನು ತೆರೆಯಲು ಇಚ್ಛಿಸಿರುವಳು.

ಒರಿಸ್ಸ: ಬೋಲಂಗೀರ್ ನಗರದಿಂದ ಐದುಮೈಲಿ ಗ್ಯೆಂಟಾಲಿಗ್ರಾಮ. ತಾರುಣಿದೀಪ್ ಅಲ್ಲಿಯ ವಯಸ್ಕರ ಶಿಕ್ಷಣ ಕೇಂದ್ರದ ಮಹಿಳಾ ವಿದ್ಯಾರ್ಥಿನಿ. ಕೇಂದ್ರಕ್ಕೆ ಸೇರುವ ಮುನ್ನ ಆಕೆ ಅಂಜುಕುಳಿ. ಆಕೆಯ ಗಂಡನ ಕಸಬು ಕಾಡಿನಲ್ಲಿ ಸೌದೆ ಕಡಿಯುವುದು. ಅವನ ಸಂಪಾದನೆಯಲ್ಲಾ ಕುಡಿತಕ್ಕೆ ಮುಡಿಪು. ಕುಡಿದಾಗ ಹೆಂಡತಿಯನ್ನು ಹೊಡೆಯುವುದು ಅವನಿಗೆ ಅಂಟಿರುವ ಚಾಳಿ. ಹೆಂಡತಿ ಕೇಂದ್ರಕ್ಕೆ ಸೇರಿ ಓದು ಬರಹ ಕಲಿತಳು. ಪರಿಣಾಮ ಅವಳ ಜೀವನ ಚೈತನ್ಯದ ಚಿಲುಮೆ ಹಾಗೂ ಮಾದರಿ ಆಯಿತು.

ವಯಸ್ಕರ ಶಿಕ್ಷಣ ಕೇಂದ್ರದ ಸಹಪಾಟಿಯರ ಸಂಪರ್ಕದಿಂದ ಆಕೆಯಲ್ಲಿ ಉತ್ಸಾಹ ಮೂಡಿತು. ಶಾಲಾ ಉಪಾಧ್ಯಾಯಿನಿ ಆಕೆಗೆ ಸ್ಫೂರ್ತಿ ನೀಡಿದಳು. ತಾರುಣಿದೀಪ್ ಉಪಾಧ್ಯಾಯಿನಿಯನ್ನು 'ದೀದಿ' ಎಂದು ಅಕ್ಕರೆಯಿಂದ ಕರೆಯುವಳು. 'ದೀದಿ'ಯ ಸಹಾಯದಿಂದ ತನ್ನ ಗಂಡ ಕುಡಿಯುವುದನ್ನು ಬಿಡಿಸಿದಳು. ಅಂದಿನಿಂದ ಅವಳ ಭಾಗ್ಯೋದಯ ಆಯಿತು. ಕುಡಿತದ ಹಣ ಉಳಿಯಿತು. ಅದರಿಂದ ಸಂಸಾರ ನಿರ್ವಹಿಸಿ ಉಳಿದ ಹಣವನ್ನು ಬ್ಯಾಂಕಿನಲ್ಲಿ ಶೇಖರಿಸಿದಳು. ಅದು ೪೫೦ ರೂಪಾಯಿ ಆಯಿತು. ಅದರಿಂದ ಆಡಿನ ಮರಿಯನ್ನು ಕೊಂಡು ಬೆಳೆಸಿ ಅವನ್ನು ೯೦೦ ರೂ.ಗಳಿಗೆ ಮಾರಿದಳು. ಈ ಹಣದಿಂದ ಅವಳು ತನ್ನ ಮನೆಗೆ ಬೇಕಾದ ಪಾತ್ರೆಗಳು, ಜೊತೆಗೆ ಮಗಳ ಮದುವೆಗೆ ಬೇಕಾದ ಒಡವೆಗಳನ್ನು ಕೊಂಡಳು.

ಈಗ ಅವಳು ಮೂರು ಮಕ್ಕಳ ತಾಯಿ. ಎರಡು ಗಂಡು, ಒಂದು ಹೆಣ್ಣು. ಕುಟುಂಬ ಯೋಜನೆಯ ಅಗತ್ಯತೆಯನ್ನು ಅರಿತು ಆಪರೇಷನ್ ಮಾಡಿಸಿಕೊಂಡಳು. ಇದಕ್ಕೆಲ್ಲಾ ಪ್ರೇರಕ ಶಕ್ತಿ ಕೇಂದ್ರದ ಉಪಾಧ್ಯಾಯಿನಿ 'ದೀದಿ'. ಮಕ್ಕಳ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿದು ಅವುಗಳನ್ನು ಶಾಲೆಗೆ ತಪ್ಪದೇ ಕಳುಹಿಸುವಳು. ಈಗ ಅವಳ ಜೀವನ ಸುಧಾರಿಸಿದೆ. ಲವಲವಿಕೆಯಿಂದ ಕೂಡಿದೆ. ಇವಕ್ಕೆಲ್ಲಾ ಮನೆಯಲ್ಲಿ ಅಕ್ಷರ ದೀಪ ಅವತರಿಸಿದ್ದೇ ಕಾರಣ.

ಗಂಡನ ಕಾಗದ ಓದುವವರು ಯಾರು?

ಇದೇ ಹಳ್ಳಿಯ ಕೇತಕಿದಾಸ್ ಒಬ್ಬ ಮಹಿಳೆ. ವಯಸ್ಸು ೨೬. ಆಕೆ ನಾಲ್ಕು ಮಕ್ಕಳ ತಾಯಿ. ಮೂರು ಹೆಣ್ಣು, ಒಂದು ಗಂಡು. ಆಕೆ ಅನಕ್ಷರಸ್ಥೆ. ಅವಳ ಗಂಡ ಸಂಬಾಲಪುರ ಉಕ್ಕಡದಲ್ಲಿ ಕೆಲಸ ಮಾಡು ವನು. ಗಂಡ ಬರೆದ ಕಾಗದವನ್ನು ಓದಿಸಲು ಹಲವಾರು ಮಂದಿಯ ಹತ್ತಿರ ಓಡಾಡುವ ಪರಿಸ್ಥಿತಿ ಅವಳದು. ಓದಿಸಿದ ಕಾಗದಕ್ಕೆ ಉತ್ತರ ಬರೆಸುವುದು ಕಷ್ಟವಾಗಿತ್ತು. ಇದರಿಂದ ಆಕೆ ವಯಸ್ಕರ ಶಿಕ್ಷಣ ಕೇಂದ್ರಕ್ಕೆ ಸೇರಿ ಓದು ಕಲಿತಳು. ಈಗ ಗಂಡನ ಕಾಗದ ತಾನೇ ಓದುವಳು. ತಾನೇ ಉತ್ತರ ಬರೆ ಯುವಳು. ಮನಿ ಆರ್ಡರ್‌ಗೆ ರುಜು ಹಾಕಿ ಹಣ ಪಡೆಯುವಳು. ಬದಲಾದ ತನ್ನ ಪರಿಸ್ಥಿತಿಗೆ ಹಿಗ್ಗುವಳು.

ಕಲಿಕೆ–ಗಳಿಕೆ

ಓದು ಬರಹ ಕಲಿತು ಪ್ರಯೋಜನ ವೇನು? ಈ ರೀತಿ ಪ್ರಶ್ನೆ ಮಾಡುನವರು ಬಹುಮಂದಿ. ಕಲಿಕೆಯ ಜೊತೆಗೆ ಗಳಿಕೆ ಆದರೆ ಒಳ್ಳೆಯದು. ಓದು ಬರಹದ ಜೊತೆಗೆ ಸಂಪಾದನೆಯ ಮಾರ್ಗ ಕಲಿಸಿದಲ್ಲಿ ಅಂತಹ ವಯಸ್ಕರ ಶಿಕ್ಷಣ ಕೇಂದ್ರಗಳು ಯಶಸ್ವಿ ಯಾಗಿ ನಡೆಯುವುವು. ಜೊತೆಗೆ ಕಲಿಯು ವವರು ಹೆಚ್ಚು ಆಕರ್ಷಕರಾಗುವರು. ಕಾರಣ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸು ವುದು.

ಆಂಧ್ರ: ಕಲಿಕೆ–ಗಳಿಕೆ

ಕರ್ನೂಲು ಜಿಲ್ಲೆಯಲ್ಲಿ ವಯಸ್ಕರ ಶಿಕ್ಷಣ ಇಲಾಖೆ ಇತರ ಅಭಿವೃದ್ಧಿ ಇಲಾಖೆ ಗಳೊಡನೆ ಸಹಕರಿಸುತ್ತಿದೆ. ಅದರಿಂದ ಸ್ವಲ್ಪಮಟ್ಟಿನ ಯಶಸ್ಸು ಕಂಡುಬಂದಿದೆ. ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿ (ಡಿ.ಆರ್. ಡಿ.ಎ.) ಯ ನೆರವಿನಿಂದ ವಯಸ್ಕರ ಶಿಕ್ಷಣ ಕೇಂದ್ರದ ಮಹಿಳೆಯರು ಹೊಲಿಗೆ ಮತ್ತು ಚಿತ್ರದ ಕೆಲಸದಲ್ಲಿ ತರಬೇತಿ ಪಡೆದಿರುವರು.

ಕರ್ನೂಲಿನಿಂದ ಬೆಂಗಳೂರಿಗೆ ಹೋಗುವ ಹೆದ್ದಾರಿ. ಕರ್ನೂಲಿನಿಂದ ೨೫ ಕಿ.ಮಿ. ದೂರದಲ್ಲಿ ಉಲುಂಡಕೊಂಡ ಎಂಬ ಗ್ರಾಮ. ಅಲ್ಲೊಂದು ಮಹಿಳಾ ವಯಸ್ಕರ ಶಿಕ್ಷಣ ಕೇಂದ್ರ. ಈ ಕೇಂದ್ರದ ೧೩ ಮಂದಿ ಮಹಿಳಾ ವಿದ್ಯಾರ್ಥಿನಿಯರು ಸ್ವಯಂ ಉದ್ಯೋಗದ ಯೋಜನೆಯ ಆಶ್ರಯದಲ್ಲಿ ಹೊಲಿಗೆಯಲ್ಲಿ ತರಬೇತಿ ಪಡೆಯುತ್ತಿರು ವರು. ಇವರೆಲ್ಲರೂ ಕೇಂದ್ರದ ಹತ್ತಿರ ವಿರುವ ಐದು ಗ್ರಾಮದವರು. ತರಬೇತಿ ಪಡೆಯುವ ಪ್ರತಿಯೊಬ್ಬ ಮಹಿಳೆಗೆ ಮಾಹೆ ಯಾನ ೨೦೦ ರೂ. ಸಂಭಾವನೆ ದೊರೆಯು ವುದು. ತರಬೇತಿಯ ಅವಧಿ ೬ ತಿಂಗಳು. ಅನಂತರ ಪ್ರತಿಯೊಬ್ಬ ಮಹಿಳೆ ಒಂದೊಂದು ಹೊಲಿಗೆ ಯಂತ್ರ ಪಡೆಯುವ ವ್ಯವಸ್ಥೆ ವುಂಟು.

ಕರ್ನೂಲಿನಲ್ಲಿ ನಡೆದ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಕ್ಷೇತ್ರದಲ್ಲಿ ಈ ತೆರನಾದ ೧೯ ಘಟಕಗಳಿವೆ. ಅವುಗಳಲ್ಲಿ ೨೭೦ ಮಂದಿ ಮಹಿಳೆಯರು ತರಬೇತಿ ಪಡೆಯುತ್ತಿರುವರು.

ಸಮಾಜ ಕಲ್ಯಾಣ ಇಲಾಖೆ ಹಲವಾರು ಹಾಸ್ಟಲುಗಳನ್ನು ನಡೆಸುತ್ತಿದೆ. ಹಾಸ್ಟಲಿನ ವಿದ್ಯಾರ್ಥಿಗಳಿಗೆ ಬೇಕಾದ ಶಾಲಾ ಸಮವಸ್ತ್ರ ಗಳನ್ನು ಪನ್ಯಮ್ ಮತ್ತು ಬಂಗನಪಲ್ಲಿ ಮಹಿಳೆಯರು ಹೊಲಿದು ಸರಬರಾಜು

ಮಾಡುತ್ತಿರುವರು. ಸರಕಾರ ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಸರಬರಾಜುಮಾಡುತ್ತಿರುವುದು ಸರಿಯಷ್ಟೆ. ಆ ವಸ್ತ್ರಗಳನ್ನು ಹೊಲಿದು ಒದಗಿಸುವವರು ಮೇಲೆ ಹೇಳಿದ ಗ್ರಾಮಗಳ ಮಹಿಳೆಯರು. ಹೊಲಿಗೆಯಲ್ಲಿ ತರಬೇತಿ ಪಡೆದ ಮಹಿಳೆಯರಿಗೆ ಕೈತುಂಬ ಕೆಲಸ ಇದೆ. ಅವರು ತಮ್ಮ ಗೃಹಕೃತ್ಯದ ಕೆಲಸದೊಂದಿಗೆ ಬಿಡುವುಮಾಡಿಕೊಂಡು ಕಲಿಕೆ–ಗಳಿಕೆ ವಿದ್ಯೆಯನ್ನು ಕಲಿತಿರುವುದು ಹೆಚ್ಚಲ್ಲವೆ?

ಮೇಲೆ ಹೇಳಿದ ನಗರದ ಹತ್ತಿರ ತುಂಗಭದ್ರ. ಅದರ ದಡದಲ್ಲಿ ವಸಂತನಗರ ಗ್ರಾಮ. ಅದರ ಹತ್ತಿರದಲ್ಲೇ ರಾಯಲು ಸೀಮೆ ಕಾಗದದ ಕಾರ್ಖಾನೆ. ಅಲ್ಲೊಂದು ವಯಸ್ಕರ ಶಿಕ್ಷಣ ಕೇಂದ್ರ. ಅಲ್ಲಿ ಕಾರ್ಮಿಕರ ಸಂಸಾರಕ್ಕೆ ಸೇರಿದ ಮಹಿಳೆಯರೇ ಕಲಿಯುವವರು. ಅವರಿಗೆ ಓದು ಬರಹದ ಜೊತೆಗೆ ಪ್ಲಾಸ್ಟಿಕ್‌ದಾರದಿಂದ ಚಿತ್ರದ ಹೆಣಿಗೆ ಕೆಲಸದಲ್ಲಿ ತರಬೇತು ನಡೆಯಿತು. ಅದು ೩ ತಿಂಗಳ ತರಬೇತಿ. ತರಬೇತಿ ಪಡೆಯುವ ಶಿಕ್ಷಣಾರ್ಥಿಗೆ ತಿಂಗಳಿಗೆ ೨೦೦ ರೂ. ಶಿಷ್ಯವೇತನ ಡಿ.ಆರ್.ಡಿ.ಎ ತರಬೇತಿ ಸಾಮಗ್ರಿಯ ಖರ್ಚು ತಲಾ ೩೦ ರೂ.ಗಳನ್ನು ನೀಡುವುದು. ತರಬೇತಿಯ ನಂತರ ಮಹಿಳೆಯರು ಸಹಕಾರ ಸಂಘ ಸ್ಥಾಪಿಸುವರು. ಕಾರ್ಖಾನೆ ಇದುವರೆವಿಗೆ ಚಿತ್ರದ ಕೆಲಸವನ್ನು ಹೊರಗಡೆ ಗುತ್ತಿಗೆಗೆ ಕೊಡುತ್ತಿದೆ. ಇನ್ನು ಮುಂದೆ ಮಹಿಳಾ ಸಂಘಕ್ಕೆ ಕೊಡುವುದಾಗಿ ಕಾರ್ಖಾನೆಯ ಅಧಿಕಾರಿಗಳು ಒಪ್ಪಿರುವರು. ಆಗ ಮಹಿಳೆಯರು ಮನೆಯಲ್ಲೇ ಕುಳಿತು ಬಿಡುವಿನ ವೇಳೆಯಲ್ಲಿ ತಮ್ಮ ಗಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

ಗುಡಿಪಾಡು: ಕರ್ನೂಲಿನಿಂದ ಕೇವಲ ೨೦ ಕಿಲೋಮೀಟರ್ ದೂರ ಗುಡಿಪಾಡು ಗ್ರಾಮ. ಅಲ್ಲಿಯ ಜನಸಂಖ್ಯೆ ೩೦೦೦. ೧೯೮೫–೮೭ರ ಅವಧಿಯಲ್ಲಿ ಪ್ರತಿವರ್ಷ ಗಂಡಸರಿಗೆ ಎರಡು, ಮಹಿಳೆಯರಿಗೆ ಒಂದರಂತೆ ವಯಸ್ಕರ ಶಿಕ್ಷಣ ಕೇಂದ್ರಗಳು ನಡೆದವು. ಅಲ್ಲಿ ಕಲಿಯಲು ಉತ್ಸಾಹ ಕುಂದಿಲ್ಲ. ಬದಲಾಗಿ ಹೆಚ್ಚಿದೆ. ಹೆಚ್ಚುಮಂದಿ ಕಲಿಯಲು ಮುಂದೆ ಬರುತ್ತಿರುವುದು ಶುಭಸೂಚನೆ. ಓದುಕಲಿತ ಗಂಡಸರು ತಮ್ಮ ಹೆಂಡತಿಯರನ್ನು ಮಹಿಳಾ ಕೇಂದ್ರಗಳಿಗೆ ಸೇರುವಂತೆ ಒಲುಮೆಯ ಒತ್ತಾಯ ಹಾಕಿದರು. ವಯಸ್ಕರ ಶಿಕ್ಷಣ ಇಲಾಖೆ ಇಲ್ಲಿಯ ನವಸಾಕ್ಷರರ ಆರ್ಥಿಕ ಪ್ರಗತಿಯನ್ನು ಸುಧಾರಿಸಲು ಪ್ರಯತ್ನಿಸಿದ್ದು ಸ್ತುತ್ಯಾರ್ಹ. ಡಿ.ಆರ್.ಡಿ.ಎ ರಿಯಾಯಿತಿ ದರದಲ್ಲಿ ೨೪ ಒಳ್ಳೆಯ ತಳಿ ಎಮ್ಮೆಗಳನ್ನು ಕಲಿಯುವವರಿಗೆ ಒದಗಿಸಿತು. ಪ್ರತಿಯೊಂದು ಎಮ್ಮೆಯ ಬೆಲೆ ೩೦೦೦ ರೂ.ಗಳು. ಅದರಲ್ಲಿ ೧೦೦೦ ರೂ. ಸಬ್ಸಿಡಿ. ಉಳಿದ ೨೦೦೦ ರೂಪಾಯಿಗಳನ್ನು ಮಾತ್ರ ಅವರು ಹಿಂತಿರುಗಿಸಬೇಕಾಗಿತ್ತು. ಪ್ರತಿಯೊಂದು ಎಮ್ಮೆ ದಿನಕ್ಕೆ ೧೦–೧೫ ಲೀಟರು ಹಾಲು ಕರೆಯುತ್ತಿತ್ತು. ಹೀಗೆ ಕರೆದ ಹಾಲನ್ನು ಡೈರಿ ಸಹಕಾರ ಸಂಘಗಳಿಗೆ ಒಯ್ಯುವ ವ್ಯವಸ್ಥೆ ಇತ್ತು. ರಿಯಾಯಿತಿ ದರದಲ್ಲಿ ಮೇವು ಒದಗುತ್ತಿತ್ತು. ಹಾಲಿನಿಂದ ಬಂದ ವರಮಾನದಿಂದ ಸಾಲವನ್ನು ಹಿಂತಿರುಗಿಸುತ್ತಿರುವರು.

ಮಹಿಳಾ ವಿದ್ಯಾರ್ಥಿನಿಯರು ಹೊಲಿಗೆಯಲ್ಲಿ ತರಬೇತಿ ಪಡೆಯುತ್ತಿರುವರು. ತರಬೇತಿ ಅಂತ್ಯದಲ್ಲಿ ಡಿ.ಆರ್.ಡಿ.ಎ ಹೊಲಿಗೆ ಯಂತ್ರಗಳನ್ನು ನೀಡುವ ವ್ಯವಸ್ಥೆ ಇದೆ. ಹಗಲು ಹೊಲಿಗೆ ತರಬೇತಿ, ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ರಾತ್ರಿ ಓದು ಬರಹ ಕಲಿಯುವುದು ಅವರಿಗೆ ಅಭ್ಯಾಸ ಆಗಿದೆ. ಜನಜೀವನ ಸುಧಾರಿಸಲು ವಯಸ್ಕರ ಶಿಕ್ಷಣ ಕೇಂದ್ರದ ಮೌನಕ್ರಾಂತಿ ಕಾರಣ.

ಉತ್ತರ ಪ್ರದೇಶ: ರಾಯ್‌ಬರೇಲಿಯಿಂದ ಕೇವಲ ೫ ಕಿಲೋಮಿಟರ್ ದೂರದಲ್ಲಿ ಗಾಡಿಖಾಸ್ ಎಂಬ ಹಿಂದುಳಿದ ಗ್ರಾಮ. ಅಲ್ಲೊಂದು ವಯಸ್ಕರ ಶಿಕ್ಷಣ ಕೇಂದ್ರ. 'ರಾಣಬೆನಿ ಮಾಧವ ಜನಕಲ್ಯಾಣ ಸಮಿತಿ' ಒಂದು ಸ್ವಯಂಸೇವಾ ಸಂಸ್ಥೆ. ಅದು ಈ ಗ್ರಾಮದಲ್ಲಿ ಒಂದು ಬೆಂಕಿಕಡ್ಡಿ ತಯಾರಿಕೆ ಕೇಂದ್ರವನ್ನು ಸ್ಥಾಪಿಸಿತು. ಕೇಂದ್ರದ ವಿದ್ಯಾರ್ಥಿನಿಯರು ಬೆಂಕಿಕಡ್ಡಿಯನ್ನು ಪೆಟ್ಟಿಗೆಯಲ್ಲಿ ತುಂಬುವ ಕೆಲಸ ಮಾಡುವರು. ಪೆಟ್ಟಿಗೆಯ ಮೇಲೆ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಚಿತ್ರದ ಲೇಬಲನ್ನು ಅಂಟಿಸುವುದು ಅವರ ಕೆಲಸ. ಉದ್ದೇಶ ಎರಡು. ೧) ಕಲಿಯುವವರು ಪ್ರೋತ್ಸಾಹಿತರಾಗಲು ಅವಕಾಶ. ೨) ಕಾರ್ಯಕ್ರಮಕ್ಕೆ ಪ್ರಚಾರ. ಮಹಿಳಾ ವಿದ್ಯಾರ್ಥಿನಿಯರು ಮಾಡುವ ಕೆಲಸದ ಪ್ರಮಾಣಕ್ಕೆ ಅನುಗುಣವಾಗಿ ದಿನಕ್ಕೆ ೧೦ ರೂ.ಗಳಿಂದ ೧೨ ರೂಪಾಯಿ ಕೂಲಿಯನ್ನು ಸಂಪಾದಿಸುವರು. ಮಹಿಳೆಯರಿಗೆ ಕಲಿಕೆ ಅನಿವಾರ್ಯ ಎಂಬ ಅರಿವನ್ನು ಅಲ್ಲಿಯ ವಾತಾವರಣ ಮೂಡಿಸಿದೆ.

ಯುವತಿ ಮಂಡಲಿ, ರಾಣಿಬಾಗ್, ಈ ಗ್ರಾಮದಲ್ಲಿ ಕೆಲವು ಮಂದಿ ಓದು ಕಲಿತ ಮಹಿಳೆಯರು. ಅಂತಹವರು ಸ್ಫೂರ್ತಿಯ ನೆಲೆ ತಾನೆ? ಅಂತಹ ಮಹಿಳೆ ಏನು ಸಾಧಿಸಬಲ್ಲಳು ಎಂಬುದಕ್ಕೆ ರಾಣಿಬಾಗ್ ಒಂದು ಉದಾಹರಣೆ. ಓದು ಬರಹ ಕಲಿತ ಮಹಿಳೆಯರು ಒಂದು ಸಂಘ ಕಟ್ಟಿರುವರು. ಅದು ಕಾನೂನಿನ ಪ್ರಕಾರ ನೊಂದಾಯಿಸಲ್ಪಟ್ಟಿದೆ. ಸಂಘದ ೧೫ ಮಂದಿ ಮಹಿಳೆಯರು ಎಚ್.ಎಂ.ಟಿ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವರು. ಅವರ ಪೈಕಿ ಹಿಂದೆ ಕೇಂದ್ರದಲ್ಲಿ ಓದಿದವರು. ಇನ್ನು ಕೆಲವರು ನವಸಾಕ್ಷರರು,

ಕೆಲವರು ಮಹಿಳೆಯರು ಪ್ರಾರಂಭದಲ್ಲಿ ಕಾರ್ಖಾನೆಯಲ್ಲಿ ತರಬೇತು ಪಡೆದರು. ತರಬೇತಿಯ ಜೊತೆಗೆ ಶಿಷ್ಯವೇತನ ಸಹ ದೊರೆಯಿತು. ಓದುಬರಹ ಕಲಿತಿದ್ದು ಅವರಿಗೆ ಒಳ್ಳೆಯದೇ ಆಯಿತು. ಓದುಬರಹ ಬಾರದಿದ್ದಲ್ಲಿ ಅವರು ತರಬೇತಿಗೆ ಆಯ್ಕೆ ಆಗುವುದು ಕಷ್ಟ ಆಗುತ್ತಿತ್ತು. ಇದು ಸಂಘ ಸ್ಥಾಪಿಸಿದವರಲ್ಲಿ ಒಬ್ಬಳಾದ ಚಂದ್ರಾವತಿಯ ಅನಿಸಿಕೆ

ಎಚ್.ಎಂ.ಟಿ. ಕಾರ್ಖಾನೆ ಈ ಸಂಘಕ್ಕೆ ಮೇಜು, ಕುರ್ಚಿ ಮುಂತಾದ ಪೀಠೋಪಕರಣಗಳನ್ನು ನೀಡಿದೆ. ಸಂಘದ ಕಟ್ಟಡದಲ್ಲಿ ಕೆಲಸಮಾಡಲು ಎರಡು ಕೊಠಡಿಗಳಿವೆ. ಗಡಿಯಾರದ ಭಾಗಗಳನ್ನು ಕೂಡಿಸುವ ಕೆಲಸ ಬಹಳ ಜಾಗರೂಕತೆಯಿಂದ ಕಾಲಕ್ಕೆ ಸರಿಯಾಗಿಮಾಡಬೇಕು. ಪ್ರತಿಯೊಬ್ಬರು ತಿಂಗಳಿಗೆ ೧೫೦ ರೂ. ನಿಂದ ೩೫೦ ರೂ. ದುಡಿಯುವರು.

ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಓದು ಬರಹ ಕಲಿತವರು ಮತ್ತು ನವಸಾಕ್ಷರರಿಗೆ ಕಾರ್ಖಾನೆ ಕೆಲಸ ಒದಗಿಸಿದೆ. ಕೆಲಸಮಾಡು ವಾಗ ಕಣ್ಣಿಗೆ ಹಾಕಿಕೊಳ್ಳಲು ಬೇಕಾದ ಸೂಕ್ಷ್ಮದರ್ಶಕವನ್ನು ಒದಗಿಸಿದೆ. ಕೆಲಸ ಯಾಂತ್ರಿಕ ಎಂದು ಹೇಳಬೇಕಾಗಿಲ್ಲ. ನಿತ್ಯವೂ ಒಂದೇ ತೆರನಾದ ಕೆಲಸಮಾಡ ಬೇಕು. ಮಹಿಳೆಯರು ತಾಳ್ಮೆಗೆ ಹೆಸರಾದ ವರು. ಆದ್ದರಿಂದ ಅವರು ತಾಳ್ಮೆಗೆಡದೆ ತಮ್ಮ ಪಾಲಿಗೆ ಬಂದಿರುವ ಕೆಲಸವನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿರುವುದು ಒಂದು ವಿಶೇಷ. ತಮ್ಮ ಕಾಲಮೇಲೆ ತಾವು ನಿಲ್ಲಬಹುದು ಎಂಬ ದೃಢವಿಶ್ವಾಸ ಮತ್ತು ನಂಬಿಕೆ ಅವರಲ್ಲಿ ಮೂಡಿದೆ.

ರಾಜಾಸ್ಥಾನ: ಅಜ್ಮೀರಿನ ವಾಲ್ ಬಜಾರ್ ಒಂದು ಕೊಳಚೆ ಪ್ರದೇಶ. ಅಲ್ಲಿ ಒಂದು ವಯಸ್ಕರ ಶಿಕ್ಷಣ ಕೇಂದ್ರ. ೧೫ ಮಂದಿ ಮಹಿಳಾ ವಿದ್ಯಾರ್ಥಿನಿಯರಿಗೆ ಬಾಟಿಕ್ ಚಿತ್ರ ಕೆಲಸದಲ್ಲಿ ತರಬೇತಿ ದೊರೆ ಯಿತು. ಅವಧಿ ೬ ತಿಂಗಳು. ಈ ಅವಧಿ ಯಲ್ಲಿ ತರಬೇತಿ ಪಡೆಯುವ ಪ್ರತಿಯೊಬ್ಬ ಶಿಕ್ಷಣಾರ್ಥಿಗೂ ಮಾಹೆಯಾನ ೧೨೫ ರೂ. ಶಿಷ್ಯವೇತನ ದೊರೆಯಿತು. ಈ ತೆರನಾದ ಕಲೆಗೆ ಬೇಡಿಕೆ ಇದೆ. ಕಲಿತವರು ಮಾಹೆಯಾನ ೨೫೦ ರೂ.ಗಳಿಗೆ ಕಡಿಮೆ ಇಲ್ಲದೆ ಸಂಪಾದಿಸುವರು.

ಟೋಂಕ್ ಜಿಲ್ಲೆಯ ವಯಸ್ಕರ ಶಿಕ್ಷಣ ಉಪಾಧ್ಯಾಯರ ಪೈಕಿ ಅನೇಕರು ಸರಪಂಚ ರಾಗಿ ಆಯ್ಕೆ ಆಗಿರುವರು. ಈ ಹೊಸ ಸ್ಥಾನ ದೊರಕಿರುವುದರಿಂದ ಅವರಿಗೆ ಆಗಿರುವ ಸಂತೋಷ ಅಷ್ಟಿಷ್ಟಲ್ಲ. ಹೀಗಾಗಿ ಅವರು ತಮ್ಮ ಕ್ಷೇತ್ರದಲ್ಲಿ ಸಾಕ್ಷರತಾ ಪ್ರಚಾರಕ್ಕೆ ಹೆಚ್ಚಿನ ಸೇವೆ ಸಲ್ಲಿಸುತ್ತಿರು ವರು.

ಅಜ್ಮೀರ್ ವಯಸ್ಕರ ಶಿಕ್ಷಣ ಸಂಸ್ಥೆ ೧೯೭೦ರಿಂದ ಸೇವೆ ಸಲ್ಲಿಸುತ್ತಿದೆ. ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಆಶ್ರಯ ದಲ್ಲಿ ೩೦೦ ಕೇಂದ್ರಗಳನ್ನು ಈ ಸಂಸ್ಥೆ ಪ್ರಾರಂಭಿಸಿತು. ವಯಸ್ಕರ ಶಿಕ್ಷಣ ಕಾರ್ಯ ದೊಂದಿಗೆ ವರಮಾನನೀಡಬಲ್ಲ ಕಸುಬು ಗಳನ್ನು ಅವರಿಗೆ ಕಲಿಸುತ್ತಿದೆ. ೧೩ ಕೇಂದ್ರ ಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಣ್ಣುಗಳು ಕೆಡದಂತೆ ಶೇಖರಿಸುವುದು, ಚಪ್ಪಲಿ ತಯಾರಿಕೆ, ಬಾಟಿಕ್‌ಕಲೆ, ಚರ್ಮ ಮತ್ತು ರೆಕ್ಸಿನ್ ಕೆಲಸ ಮುಂತಾದ ಕಸಬು ಗಳನ್ನು ಕಲಿಸುತ್ತಿರುವರು. ಗ್ರಾಮ ಕುಟೀರ ಉದ್ಯೋಗದ ಆಶ್ರಯದಲ್ಲಿ ೩೧೫ ಮಂದಿ ಹೊಲಿಗೆಯಲ್ಲಿ, ೩೬೮ ಮಂದಿ ಹಣ್ಣನ್ನು ಕೆಡದಂತೆ ಶೇಖರಿಸುವುದು, ೪೪೭ ಮಂದಿ ಕಸೂತಿ ಕೆಲಸದಲ್ಲಿ ತರಬೇತಿ ಪಡೆದಿರುವರು. ಅವರ ಪೈಕಿ ಎಷ್ಟು ಮಂದಿ ಈ ಕಸುಬುಗಳಲ್ಲಿ ತೊಡಗಿರುವರು ಎಂಬ ಬಗ್ಗೆ ವಿವರಗಳಿಲ್ಲ.

ತಮಿಳುನಾಡು: ಕುಂಡಕವಾಯಲ್ ಇನ್ನೊಂದು ಹಳ್ಳಿ. ಅಲ್ಲಿನ ವಯಸ್ಕರ ಶಿಕ್ಷಣ ಕೇಂದ್ರಕ್ಕೆ ವಯಸ್ಕರ ಶಿಕ್ಷಣ ಇಲಾಖೆ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರ ಅಭಿವೃದ್ಧಿ ಇಲಾಖೆಗಳು ನೆರವು ನೀಡಿವೆ.

೧. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಈ ಗ್ರಾಮದ ಅಭಿವೃದ್ಧಿಗೆ ಒಟ್ಟು ರೂ. ೯೨,೦೦೦ ಗಳ ಧನಸಹಾಯ ನೀಡಿದೆ. ೧) ಪಂಪುಸೆಟ್ಟು ಕೊಳ್ಳಲು, ೨) ೧೬

ಜೊತೆ ಎತ್ತುಗಳನ್ನು ಕೊಳ್ಳಲು, ೩) ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಒಬ್ಬ ವಿಧವೆ ಓದುಬರಹ ಕಲಿಯುತ್ತಿರುವಳು. ಆಕೆಗೆ ಜೀವನ ನಿರ್ವಹಣೆಗೆ ಅಂಗಡಿಯನ್ನು ತೆರೆಯಲು ನೆರವು ದೊರೆತಿದೆ.

೨. ವಯಸ್ಕರ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಬ್ಯಾಂಕಿನಿಂದ ಪಡೆದ ಸಾಲವನ್ನು ತಪ್ಪದೇ ತೀರಿಸುತ್ತಿರುವವರು. ಜೊತೆಗೆ ಸ್ವಲ್ಪ ಹಣವನ್ನು ಅಂಚೆ ಕಚೇರಿಯ ಉಳಿತಾಯ ಖಾತೆಯಲ್ಲಿ ಕೂಡಿಟ್ಟಿರುವರು.

೩. ಕೇಂದ್ರದಲ್ಲಿ ಕಲಿಯುತ್ತಿರುವವರು ಮಹಿಳೆಯರು ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳಲು ಹೊಲಿಗೆ, ವೈರ್ ಬ್ಯಾಗ್ ತಯಾರಿಕೆ, ಸೋಪು ತಯಾರಿಕೆ, ಉಡುಪನ್ನು ಸಿದ್ಧಪಡಿಸುವುದು ಮುಂತಾದ ಕಸುಬುಗಳಲ್ಲಿ ತರಬೇತಿ ಪಡೆಯಲು ಇಚ್ಛಿಸುವರು.

ಪಲ್ಲತ್ತುವಾಯಲ್ : ಇದು ದೂರದ ಒಳನಾಡಿನ ಹಳ್ಳಿ. ಅಲ್ಲಿ ಎತ್ತರವಾಗಿ ಹೆಚ್ಚು ಪ್ರಮಾಣದಲ್ಲಿ ಹುಲ್ಲು ಬೆಳೆಯುವುದು. ಅದರಿಂದ ಚಾಪೆ ಹೆಣೆಯಬಹುದು. ಮೊದಮೊದಲು ಹೊರಗಿನ ವ್ಯಾಪಾರಿಗಳು ಹುಲ್ಲನ್ನು ಸಾಗಿಸುತ್ತಿದ್ದರು. ವಯಸ್ಕರ ಶಿಕ್ಷಣ ಇಲಾಖೆಯ ಪ್ರಯತ್ನದ ಫಲವಾಗಿ ಹುಲ್ಲುಹೊರಗೆ ಹೋಗುವುದು ನಿಂತಿತು. ಹಳ್ಳಿಯ ಹೆಂಗಸರು ಈ ಹುಲ್ಲಿನಿಂದ ಗ್ರಾಮದಲ್ಲೇ ಚಾಪೆ ಹೆಣೆಯುತ್ತಿರುವರು. ಹಗಲಿನಲ್ಲಿ ಹೆಂಗಸರು ತಮ್ಮ ಗೃಹಕೃತ್ಯದೊಂದಿಗೆ ಚಾಪೆಹೆಣೆಯುವುದರಲ್ಲಿ ತೊಡಗುವರು. ಒಂದೊಂದು ಚಾಪೆಯ ಬೆಲೆ ೧೦ ರಿಂದ ೧೨ ರೂಪಾಯಿಗಳು. ಈ ಕಸುಬಿನಿಂದ ಅವರ ವರಮಾನ ಹೆಚ್ಚಿದೆ. ರಾತ್ರಿ ಕಾಲದಲ್ಲಿ ಚಾಪೆಹೆಣಿಕೆ ಕೇಂದ್ರ ವಯಸ್ಕರ ಶಿಕ್ಷಣ ಕೇಂದ್ರವಾಗಿ ಪರಿವರ್ತನೆ ಆಗುವುದು.

ಕರ್ನಾಟಕ : ಯಲಿಯೂರು ಒಂದು ಸಣ್ಣ ಗ್ರಾಮ. ಮಂಡ್ಯದಿಂದ ೧೦ ಕಿ.ಮೀ. ಅಲ್ಲಿ ಎರಡು ವಯಸ್ಕರ ಶಿಕ್ಷಣ ಕೇಂದ್ರಗಳು. ಒಂದು ಗಂಡಸರಿಗೆ ಇನ್ನೊಂದು ಮಹಿಳೆಯರಿಗೆ. ಪುಟ್ಟಚಿನ್ನಮ್ಮ ಮಹಿಳಾ ಕೇಂದ್ರದ ಉಪಾಧ್ಯಾಯಿನಿ. ಆಕೆ ತನ್ನದೇ ಆದ ರೀತಿಯಲ್ಲಿ ಮಿಂಚುಪಟ ಮತ್ತು ಇತರ ಬೋಧನಾಸಾಮಗ್ರಿಗಳನ್ನು ತಯಾರಿಸಿ ಬಳಸುತ್ತಿರುವಳು. ಮಹಿಳೆಯರಿಗೆ ಲಕೋಟೆಗಳನ್ನು ತಯಾರಿಸುವುದು, ಸೋಪು ತಯಾರಿಕೆ, ಸೋಪಿನಪುಡಿ ತಯಾರಿಕೆಯಲ್ಲಿ ತರಬೇತಿ ನಡೆಯಿತು. ಸೋಪಿನ ಪುಡಿಯನ್ನು ಗ್ರಾಮಸ್ಥರೇ ಕೊಳ್ಳುವರು. ಗಂಡಸರಿಗೆ ಸೀಮೆಸುಣ್ಣ ತಯಾರಿಕೆಯಲ್ಲಿ ತರಬೇತು ನಡೆದಿದೆ. ವಿವಿಧ ಕುಟೀರ ಕೈಗಾರಿಕೆಗಳ ತರಬೇತಿನ ಬಗ್ಗೆ ಮಂಡಳ ಪಂಚಾಯತಿ ಹೆಚ್ಚಿನ ಆಸಕ್ತಿವಹಿಸಿತು.

ಕರ್ನಾಟಕದ ಸವದತ್ತಿ ತಾಲ್ಲೂಕು ದೇವದಾಸಿಯರ ತವರು ಎಂದರೆ ತಪ್ಪಿಲ್ಲ. ಅಲ್ಲಿ ಮನೋಲಿ ಎಂಬ ಗ್ರಾಮದಲ್ಲಿ ವಯಸ್ಕರ ಶಿಕ್ಷಣ ಕೇಂದ್ರ. ಕೇಂದ್ರದ ೩೦ ಮಂದಿ ವಿದ್ಯಾರ್ಥಿನಿಯರು ದೇವದಾಸಿಯರು. ಇಲ್ಲಿ ಟ್ರೈಸಮ್ ಅಡಿಯಲ್ಲಿ ಒಂದು ಹೊಲಿಗೆ ಕೇಂದ್ರ ಪ್ರಾರಂಭವಾಯಿತು. ಕೇಂದ್ರಕ್ಕೆ ಬರಲು ಸರಕಾರ ಬೆಳಗ್ಗೆ ೯ ರಿಂದ ಸಂಜೆ ೫ ಗಂಟೆವರೆವಿಗೆ ಬಸ್ಸು ಪಾಸಿನ ಸೌಲಭ್ಯವನ್ನು ವಿದ್ಯಾರ್ಥಿನಿ

ಯರಿಗೆ ನೀಡಿತು. ತರಬೇತಿ ಪಡೆಯುವ ಪ್ರತಿಯೊಬ್ಬ ಮಹಿಳೆಗೆ ಮಾಹೆಯಾನ ೨೦೦ ರೂ. ವಿದ್ಯಾರ್ಥಿ ವೇತನ ದೊರೆಯುವುದು. ಕಡೆಗೆ ಒಂದು ಹೊಲಿಗೆ ಯಂತ್ರ ಸಿಗಲಿದೆ. ಅದರಿಂದ ಸ್ವಲ್ಪ ಮಟ್ಟಿಗೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಬಹುದು.

ಬಾಯಿದ್ದೂ ಮೂಕರು—ಈಗ?

ಓದು ಬರಹ ಬಾರದವರು ಒಂದು ರೀತಿಯಲ್ಲಿ ಮೂಕರು. ತಮ್ಮ ಮನಸ್ಸಿನಲ್ಲಿರುವ ಭಾವನೆಗಳನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳಲಾರರು. ಸಾಕ್ಷರತೆಯು ಈ ಮೌನ ಮುದ್ರೆಯನ್ನು ತೆರೆಯುತ್ತದೆ.

ಒರಿಸ್ಸ: ಬಾಕ್ಸಿಬಾರಿ ಕಿಯಂಜಾರೋ ನಗರದಿಂದ ೨೫ ಕಿ.ಮೀ. ದೂರ. ಅದು ಕಾಡುಗಳ ಮಧ್ಯೆ ಇರುವ ಸುಂದರಹಳ್ಳಿ. ಅಲ್ಲಿ ೫೦ ಕುಟುಂಬಗಳಿವೆ. ಕಸುಬು ವ್ಯವಸಾಯ. ವ್ಯವಸಾಯಕ್ಕೆ ಮಳೆಯೇ ಆಸರೆ. ಅವರು ಬೆಳೆಯುವ ಫಸಲು ವರ್ಷಪೂರ್ತಿ ಸಾಲದು. ವರ್ಷದ ಆರು ತಿಂಗಳಲ್ಲಿ ಅವರು ಯಾವುದಾದರೂ ಉದ್ಯೋಗ ಹುಡುಕಿಕೊಂಡು ಹೋಗಲೇಬೇಕು.

ಇಲ್ಲಿ ೧೯೮೫–೮೬ ರಲ್ಲಿ ಒಂದು ಮಹಿಳಾ ಕೇಂದ್ರ ಆರಂಭವಾಯಿತು. ಕೇಂದ್ರಕ್ಕೆ ಸೇರಿದವರು ೩೦ ಮಂದಿ ಮಹಿಳೆಯರು. ಅವರ ಪೈಕಿ ಓದು ಕಲಿತವರು ೧೯ ಮಂದಿ. ಅವರು ಈಗ ಅಲ್ಲಿಲ್ಲ. ಮದುವೆ ಆಗಿ ಗಂಡನ ಮನೆಗೆ ಹೋಗಿರುವರು. ಅವರ ಪೈಕಿ ಮೂರು ಮಂದಿ ತಮ್ಮ ತಂದೆತಾಯಂದಿರೊಡನೆ ಪತ್ರವ್ಯವಹಾರ ಇಟ್ಟುಕೊಂಡಿರುವರು. ಮರು ವರ್ಷ ಅಲ್ಲೇ ಇನ್ನೊಂದು ಕೇಂದ್ರ ಆರಂಭವಾಯಿತು. ಉಪಾಧ್ಯಾಯಿನಿ ಮತ್ತು ಗ್ರಾಮ ಮುಖಂಡರು ವಯಸ್ಕರ ಶಿಕ್ಷಣ ಕೇಂದ್ರದ ವಿಚಾರದಲ್ಲಿ ಆಸಕ್ತಿ ವಹಿಸಿದರು. ವಯಸ್ಕರ ಶಿಕ್ಷಣ ಕೇಂದ್ರದ ಫಲ ಅಲ್ಲಿ ಎದ್ದು ಕಾಣುತ್ತಿದೆ. ಕೆಲವು ವರ್ಷಗಳ ಹಿಂದೆ ಅವರು ಅಧಿಕಾರಿಗಳನ್ನು ಕಂಡು ಮಾತನಾಡಲು ಹೆದರುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಅವರು ಧೈರ್ಯವಾಗಿ ತಮ್ಮ ಮನಸ್ಸಿನಲ್ಲಿರುವುದನ್ನು ಅಧಿಕಾರಿಗಳ ಮುಂದೆ ಹೇಳಬಲ್ಲರು.

ಶೋಷಣೆಯಿಂದ ಪಾರು

ತಮಿಳು ನಾಡು: ನೀಲಗಿರಿ ಟೀ ತೋಟಗಳಲ್ಲಿ ಗಿರಿಜನ ಮಹಿಳೆಯರೇ ಹೆಚ್ಚಾಗಿ ಕೂಲಿಕಾರರು. ಅವರ ಕೆಲಸ ೮ ಗಂಟೆಗೆ ಪ್ರಾರಂಭ. ಅಲ್ಲಿಂದ ಸತತವಾಗಿ ೮ ಗಂಟೆ ಕಾಲ ದುಡಿಯುವರು. ಆದರೆ ಅವರಿಗೆ ದೊರೆಯುವ ದಿನಗೂಲಿ ಕೇವಲ ಏಳು ರೂಪಾಯಿ. ಈ ಕೂಲಿಗಾರರನ್ನು ಹೊಂಚುವ ಕಂಟ್ರ್ಯಾಕ್ಟರಿಗೆ ದೊರೆಯುವ ಹಣ ತಲಾ ಒಬ್ಬರಿಗೆ ೧೫ ರೂ.ಗಳು.

ಅಲ್ಲಿ ನಡೆದ ವಯಸ್ಕರ ಶಿಕ್ಷಣ ಕೇಂದ್ರಗಳು ಕಲಿಯುವವರ ನಡವಳಿಕೆಗಳನ್ನು ಬಹುಮಟ್ಟಿಗೆ ಸುಧಾರಿಸಿವೆ. ಟೀ ಎಸ್ಟೇಟಿನ ಮಾಲೀಕರೂ ಸಹ ತಮ್ಮ ಮನೋಭಾವನೆಯನ್ನು ಬದಲಾಯಿಸಿಕೊಂಡಿರುವರು. ಓದು ಬರಹ ಕಲಿಯುವ ಅಗತ್ಯವನ್ನು ಅವರು ಮನಗಂಡಿದ್ದಾರೆ. ಓದು ಕಲಿಯುವುದರಿಂದ ಅವರ ಉತ್ಪಾದನಾ ಶಕ್ತಿ ಹೆಚ್ಚುವುದು. ಜೊತೆಗೆ ಜೀವನದಲ್ಲಿ ಒಂದು ರೀತಿಯ ಶಿಸ್ತನ್ನು ಮೂಡಿಸುವುದು ಎಂಬುದು ಅವರ ಇತ್ತೀಚಿನ ಕಲ್ಪನೆ.

ಕಾರ್ಮಿಕರ ಶೋಷಣೆ ನಿಂತಿದೆ. ಮಹಿಳೆಯರು ತಾವು ಕಿತ್ತ ಟೀ ಎಲೆಯನ್ನು ತೂಗುವುದರಲ್ಲಿ ಮೋಸ ನಡೆಯುತ್ತಿತ್ತು. ಈಗ ಅವರು ಎಲೆಯನ್ನು ತೂಗುವಾಗ ತೂಕವನ್ನು ಪರಿಶೀಲಿಸುವರು. ಈಗ ಅವರಿಗೆ ತೂಕ ಅಳತೆ ಪರಿಚಯ ಆಗಿದೆ. ಮೇಲಾಗಿ ಅವರು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಬಯಸುವರು.

ಕರ್ನೂಲಿನಿಂದ ೭೫ ಕಿ.ಮಿ. ದೂರ. ಅದೊಂದು ಮೂಲೆ. ಅಲ್ಲಿ ಜಲೇಲ ಎಂಬ ಒಂದು ಗ್ರಾಮ. ಎಲ್ಲರೂ ಪರಿಶಿಷ್ಟ ಜಾತಿಯವರು. ಅವರು ಮಾಮೂಲಿನಂತ ಶ್ರೀಮಂತರ ಶೋಷಣೆಗೆ ಒಳಗಾದವರು. ಅಲ್ಲೊಂದು ವಯಸ್ಕರ ಶಿಕ್ಷಣ ಕೇಂದ್ರ. ಕೆಲವು ದಿನಗಳ ನಂತರ ಕಲಿಯುವವರು ಹೆಚ್ಚಿನ ಕೂಲಿಗೆ ಬೇಡಿಕೆ ಇತ್ತರು. ಈ ತೆರನಾದ ಜಾಗೃತಿ ಮೂಡಿಸಿದವರು. ಅಲ್ಲಿಯ ದಂಪತಿಗಳು ಇಬ್ಬರು. ಅವರೇ ವಯಸ್ಕರು ಶಿಕ್ಷಣ ಕೇಂದ್ರಗಳ ಉಪಾಧ್ಯಾಯ ಮತ್ತು ಉಪಾಧ್ಯಾಯಿನಿಯರಾಗಿ ಸೇವೆ ಸಲ್ಲಿಸಿದ್ದರು. ನೆಹರೂ ಯುವಕ ಕೇಂದ್ರ ಗ್ರಾಮಸ್ಥರ ನೆರವಿಗೆ ಬಂದು ೧೦ ಸಾವಿರ ರೂಪಾಯಿ ಧನ ಸಹಾಯ ಮಾಡಿತು. ಯುವಕರು 'ಸಹಜೀವನ ಸಂಘ' ಸ್ಥಾಪಿಸಿದರು. ಶ್ರಮದಾನದಿಂದ ಯುವಕ ಕೇಂದ್ರದ ಕಟ್ಟಡ ನಿರ್ಮಾಣ ಆಯಿತು.

ಅದು ಬರಗಾಲ ಪ್ರದೇಶ. ಹತ್ತಿರದಲ್ಲಿ ಉದ್ಯೋಗ ಸಿಗದು. ಗಣಿಗಳು ದೂರದಲ್ಲಿ. ಕೆಲಸ ಬೇಕಾದಲ್ಲಿ ಅಲ್ಲಿಗೇ ಹೋಗಬೇಕು. ಅಲ್ಲಿಗೆ ಹೋಗಿಬರುವುದರಲ್ಲಿ ಹೆಚ್ಚಿನ ಸಮಯ ಮತ್ತು ಶ್ರಮವಿನಿಯೋಗವಾಗುತ್ತಿತ್ತು. ವಯಸ್ಕರ ಶಿಕ್ಷಣ ಅಧಿಕಾರಿಗಳು ರಾಜ್ಯ ಸರಕಾರದ ಹರಿಜನ ಗಿರಿಜನ ಘಟಕವನ್ನು ಸಂಪರ್ಕಿಸಿದರು. ಫಲವಾಗಿ ಪ್ರತಿಯೊಬ್ಬರಿಗೂ ರಿಯಾಯತಿ ದರದಲ್ಲಿ ಒಂದೊಂದು ಸೈಕಲ್ ದೊರೆಯಿತು. ಸೈಕಲ್ಲಿನ ಬೆಲೆ ೮೦೦ ರೂ.ಗಳು. ಅದರಲ್ಲಿ ಮೂರನೆ ಒಂದು ಭಾಗ ಸಬ್ಸಿಡಿ. ಉಳಿದ ಹಣವನ್ನು ಸೇಕಡ ೪ರ ಬಡ್ಡಿ ಸಮೇತ ಸುಲಭ ಕಂತುಗಳಲ್ಲಿ ತೀರಿಸಬೇಕಾಗಿತ್ತು. ಗಣಿ ಕೆಲಸದ ವರಮಾನದಿಂದ ಅನೇಕರು ತಮ್ಮ ಸಾಲವನ್ನು ಹಿಂತಿರುಗಿಸಿದರು.

ಸಹಕಾರ ಮಂತ್ರದ ಕೇಂದ್ರ

ಬಿಹಾರ: ಗುಮ್ಲಾ ಜಿಲ್ಲಾ ಕೇಂದ್ರ. ಕೇಂದ್ರದ ಹೆಡ್‌ಕ್ವಾರ್ಟರ್ಸ್‌ನಿಂದ ಹೊರಗಡೆ ಚಾಹ ಎಂಬ ಗ್ರಾಮ. ಗುಡ್ಡಗಾಡಿನ ಜನಾಂಗ ಅಲ್ಲಿ ನೆಲಸಿದೆ. ಆ ಜನಾಂಗದಲ್ಲಿ ಒಂದು ವಿಶೇಷ ಗುಣ ಉಂಟು. ಕುಟುಂಬಗಳ ಮಧ್ಯೆ ಇರುವ ಸಹಕಾರವೇ ಅದು 'ನಾವೆಲ್ಲರೂ ಒಂದು; ನಾವು ಸಾಮೂಹಿಕವಾಗಿ ಊರಿನ ಒಳ್ಳೆಯದಕ್ಕೆ ದುಡಿಮೆ ಮಾಡಬೇಕು' ಎಂಬ ಕಲ್ಪನೆ ಅವರಲ್ಲಿ ಬಲವಾಗಿ ಬೇರೂರಿದೆ. ಉದಾಹರಣೆಗೆ ಒಂದು ಕುಟುಂಬ ತನಗಾಗಿ ಮನೆ ಕಟ್ಟಿಕೊಳ್ಳಬೇಕು. ಇಲ್ಲವೆ ತನ್ನ ಮನೆ ದುರಸ್ತಿಮಾಡಿಕೊಳ್ಳಬೇಕು. ಅವರೆ ಹಣದ ಅಭಾವದಿಂದ ಈ ಎರಡು ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಆಗ ಆ ಊರಿನ ಇತರ ಕುಟುಂಬಗಳು ಅವನ ನೆರವಿಗೆ ಹೋಗುವರು. ಶ್ರಮದಾನದಿಂದ ಆತನ ಕೆಲಸ ಪೂರೈಸಿಕೊಡು

ವರು. ಈ ರೀತಿಯಾದ ಮುಯ್ಯಾಳು ಕೆಲಸ ಒಂದು ಕಾಲದಲ್ಲಿ ನಮ್ಮ ಹಳ್ಳಿಗಳಲ್ಲಿಯೂ ವ್ಯವಸಾಯ ಕ್ಷೇತ್ರದಲ್ಲಿ ಪ್ರಚಲಿತವಾಗಿತ್ತು.

ಊರಿನ ಮಧ್ಯೆ ಒಂದು ಚರ್ಚು ಇದೆ. ಅಲ್ಲಿ ಊರಿನವರೆಲ್ಲರೂ ಆಗಾಗ್ಗೆ ಸೇರುವರು ತಮ್ಮ ಸಾಮೂಹಿಕ ಸಮಸ್ಯೆಗಳನ್ನು ಒಟ್ಟಾಗಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವರು. ಅಲ್ಲಿ ಆರು ವಯಸ್ಕರ ಶಿಕ್ಷಣ ಕೇಂದ್ರಗಳು ಪ್ರಾರಂಭವಾದುವು. ಅವುಗಳ ಪೈಕಿ ಒಂದು ಮಹಿಳಾ ಕೇಂದ್ರ. ಉಳಿದ ಕೇಂದ್ರಗಳಲ್ಲಿ ಗಂಡಸರು ಮತ್ತು ಹೆಂಗಸರು ಒಟ್ಟಾಗಿ ಸೇರಿ ಕಲಿಯುವರು. ಕೇಂದ್ರಗಳು ನಾಲ್ಕು ತಿಂಗಳ ಕಾಲ ನಡೆದವು. ಆದರೆ ಹಾಜರಾತಿ ಸುಧಾರಿಸಲಿಲ್ಲ. ಕಾರಣ ಅವರಿಗೆ ಪ್ರಾಯಶಃ ಸಾಕ್ಷರತೆಯ ಅಗತ್ಯ ಅರಿವಾಗಿ ಇರಲಾರದು. ಆದ್ದರಿಂದ ಅವರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲು ಪ್ರಚಾರ ಸಭೆಗಳು ಮತ್ತು ಮನರಂಜನ ಕಾರ್ಯಕ್ರಮಗಳು ಏರ್ಪಾಡಾದವು. ಉಪಾಧ್ಯಾಯಿನಿ ಹೆಚ್ಚಿನ ಕಷ್ಟ ಪಟ್ಟು ಕಲಿಯುವವರೆಲ್ಲರ ನಿಕಟ ಸಂಪರ್ಕ ಬೆಳೆಸಿದರು. ೧೯೮೭-೮೮ರಲ್ಲಿ ೪ ಕೇಂದ್ರಗಳಿಗೆ ೧೨೦ ಮಂದಿ ಸೇರಿ ೫೭ ಮಂದಿ ತೇರ್ಗಡೆಯಾಗಿರುವರು.

ವಯಸ್ಕರ ಶಿಕ್ಷಣ ರಾಷ್ಟ್ರದ ಪವಿತ್ರ ಕಾರ್ಯ

ಭದ್ರಾಚಲಂ ಕ್ಷೇತ್ರದಲ್ಲಿ ವಯಸ್ಕರ ಶಿಕ್ಷಣ ಕೇಂದ್ರಗಳಿವೆ. ಅದೇ ಕ್ಷೇತ್ರದಲ್ಲಿ ಗುಡ್ಡಗಾಡು ಜನಾಂಗದ ಅಭಿವೃದ್ಧಿಗೆ ಒಂದು ಪ್ರತ್ಯೇಕ ಸಂಸ್ಥೆ ಇದೆ. ೧೯೮೬ನೆಯ ಸಾಲಿನಲ್ಲಿ ನಡೆದ ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಗುಡ್ಡಗಾಡು ಜನಾಂಗ ಅಭಿವೃದ್ಧಿ ಸಂಸ್ಥೆ ತನ್ನ ಪಾಲಿನ ನೆರವು ನೀಡಿತು. ವಯಸ್ಕರ ಶಿಕ್ಷಣ ಇಲಾಖೆ ರಾತ್ರಿಶಾಲಾ ಉಪಾಧ್ಯಾಯರಿಗೆ ಮಾಹೆಯಾನ ೧೦೦ರೂ. ಸಂಭಾವನೆ ನೀಡುವುದು. ಜೊತೆಗೆ ಈ ಸಂಸ್ಥೆ ೨೫ ಮಂದಿ ಉಪಾಧ್ಯಾಯರಿಗೆ ತಲಾ ೫೦ ರೂ. ಹೆಚ್ಚಿನ ಸಂಭಾವನೆ ನೀಡುವುದು. ಮರುಸಾಲಿನಲ್ಲಿ ಇನ್ನೂ ೨೫ ಕೇಂದ್ರಗಳಿಗೆ ಈ ಸೌಲಭ್ಯ ದೊರೆಯಿತು. ಅದರಿಂದ ಸಮರ್ಥರಾದ ಉಪಾಧ್ಯಾಯರನ್ನು ಆಯ್ಕೆ ಮಾಡಲು ಸಾಧ್ಯ ಆಯಿತು. ಮೇಲಾಗಿ ಈ ಸಂಸ್ಥೆ ತನ್ನ ಕ್ಷೇತ್ರದಲ್ಲಿದ್ದ ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಪೆಟ್ರೊಮ್ಯಾಕ್ಸ್ ದೀಪವನ್ನು ಒದಗಿಸಿತು. ಉದ್ಯೋಗ ನೀಡಲು ಸಾಕ್ಷರತೆ ಕನಿಷ್ಠ ಮಟ್ಟದ ಅರ್ಹತೆ ಎಂದು ಈ ಸಂಸ್ಥೆ ನಿಗದಿಮಾಡಿದೆ. ಈ ಹಿನ್ನೆಲೆಯಲ್ಲಿ ಹಿಂದೆ ಕಲಿತವರು ಹಾಗೂ ನವಸಾಕ್ಷರರು : ಆಯಾ, ಅಡುಗೆಮಾಡುವುದು ಮತ್ತು ಕಾವಲುಗಾರ ಕೆಲಸಗಳಿಗೆ ನೇಮಕವಾಗಿರುವರು.

ಏಕೋಪಾಧ್ಯಾಯರ ಶಾಲಾ ಯೋಜನೆಯ ಆಶ್ರಯದಲ್ಲಿ ವಯಸ್ಕರ ಶಿಕ್ಷಣ ಉಪಾಧ್ಯಾಯರು ತರಬೇತಿಗೆ ಆಯ್ಕೆ ಆಗಿರುವರು. ಸ್ಟೇಟ್ ಬೋರ್ಡ್ ನಡೆಸುತ್ತಿರುವ ಪ್ರಶಿಕ್ಷಣ ಸಂಸ್ಥೆಗಳಲ್ಲಿ ತರಬೇತಿ ಪಡೆಯಲು ರಾತ್ರಿಶಾಲಾ ಉಪಾಧ್ಯಾಯರಿಗೆ ಅವಕಾಶ ದೊರಕಿದೆ.

ಪ್ರಾರಂಭದಲ್ಲಿ ಓದುಬರಹ ಕಲಿಕೆಯ ಉದ್ದೇಶ ಸೀಮಿತವಾಗಿತ್ತು. ಈ ಸಾಮೂಹಿಕ ಸಾಕ್ಷರತಾ ಕಾರ್ಯಕ್ರಮದಿಂದ ಪಡೆದ ಅನುಭವದ ಆಧಾರದ ಮೇಲೆ ಓದಿನ ಗುರಿ ಜೀವನ ಸುಧಾರಣೆಯ ಕಡೆಗೆತಿರುಗಿತು. ಪ್ರತಿಫಲವಾಗಿ ಮೇಲೆ ವಿವರಿಸಿರು

ವಂತೆ ಕೆಲವರು ಜೀವನದಲ್ಲಿ ಹೊಸ ಬೆಳಕನ್ನು ಕಂಡಿರುವರು. ಶೋಷಿತ ವರ್ಗದವರಲ್ಲಿ ಶೋಷಣೆಯ ವಿರುದ್ಧ ಹೋರಾಡುವ ಜಾಗೃತಿ ಮೂಡಿದೆ.

ಕಲಿಕೆಯ ಪರಿಣಾಮವಾಗಿ ಉತ್ತಮ ಜೀವನ ನಡೆಸಲು ಕಲಿತವರು ಸುಧಾರಿತರಾಗಿ ಹೊಸಹೊಸ ಕಸಬುಗಳಲ್ಲಿ ತೊಡಗಿರುವರು. ಈ ಪವಿತ್ರ ಕಾರ್ಯದಲ್ಲಿ ಬ್ಯಾಂಕುಗಳು, ಕಾರ್ಖಾನೆಗಳು, ಸರಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ನೆರವು ನೀಡಿವೆ. ಹಾಗೆ ನೆರವು ನೀಡುವುದು ಇಬ್ಬರಿಗೂ ಅನುಕೂಲ ಎಂಬುದು ಮನವರಿಕೆ ಆಗಿದೆ.

ಸಮಾಜದ ದೀನದುರ್ಬಲ ವರ್ಗದವರ ಸುಧಾರಣೆಗೆ ಶಿಕ್ಷಣ ಮೌನಕ್ರಾಂತಿ ನಡೆಸುತ್ತಿದೆ.



ಮನುಷ್ಯರಿಗೆ ರೂಪವೇ ಆಭರಣ. ರೂಪಕ್ಕೆ ಗುಣವೇ ಆಭರಣ. ಗುಣಕ್ಕೆ ಜ್ಞಾನ ಆಭರಣ. ಜ್ಞಾನಕ್ಕೆ ಕ್ಷೇಮವೇ ಭೂಷಣವಾದ ಆಭರಣ.

—ಸುಭಾಷಿತ

ಒಬ್ಬ ವ್ಯಕ್ತಿಯ ಸಾರ್ಥಕ ಜೀವನವನ್ನು ಅವನು ಮಾಡಿದ ಕೆಲಸದಿಂದ ನಿರ್ಧರಿಸಬೇಕೇ ಹೊರತು ಅವನ ವಯಸ್ಸಿನಿಂದಲ್ಲ.

—ಪೆಶರಿನ್

ವಿಜ್ಞಾನ ಮತ್ತು ಧರ್ಮ

ಪ್ರೊ|| ಜೆ. ಆರ್. ಲಕ್ಷ್ಮಣರಾವ್
'ಮೈತ್ರಿ', ೧೨ನೆಯ ಮುಖ್ಯ ರಸ್ತೆ
(೧ ಮತ್ತು ೨ನೆಯ ತಿರುವುಗಳ ನಡುವೆ)
ಸರಸ್ವತೀಪುರ, ಮೈಸೂರು-೫೭೦೦೦೯

ವೀಕ್ಷಣೆ, ಚಿಂತನೆ ಮತ್ತು ಪ್ರಯೋಗಗಳ ಮೂಲಕ ಮಾನವಮತಿ ವಿಶ್ವದೊಂದಿಗೆ ವರ್ತಿಸಿದಾಗ ಲಭಿಸುವ ಫಲ "ವಿಜ್ಞಾನ." ಅದೇ ಮತಿ ವಿಶ್ವದ ಅಗಾಧತೆ-ಸೂಕ್ಷ್ಮತೆ, ಸೌಂದರ್ಯ-ಸುಸಾಂಗತ್ಯ ಮುಂತಾದ "ಅಜ್ಞಾತ"ಗಳ ಜೊತೆ ವರ್ತಿಸಿದಾಗ ಲಭಿಸುವ ಫಲ "ಧರ್ಮ." ಉಭಯ ಸಂದರ್ಭಗಳಲ್ಲಿಯೂ ಸೃಷ್ಟಿಕರ್ತನೆಂಬ ಮಾನವಮತಿಯ ನಿರ್ಮಿತಿ ಅನಗತ್ಯ. "ಮಾನವಮತಿಯ ಉತ್ಕೃಷ್ಟ ಉಪಜ್ಞೆಯೇ (ಇನ್ವೆನ್ಶನ್) ದೇವರು ಎಂದರು ಖಭೌತವಿಜ್ಞಾನಿ ಎಸ್. ಚಂದ್ರಶೇಖರ್. ಜೀವನನಾಣ್ಯದ ಒಂದು ಮಗ್ಗಲು "ಧರ್ಮ," ಇನ್ನೊಂದು "ವಿಜ್ಞಾನ." ಇವೆರಡರ ಸಮನ್ವಯವೇ ಋಜುಜೀವನ.

ವಿಜ್ಞಾನ ಮತ್ತು ಧರ್ಮ-ಇವುಗಳಿಗಿರುವ ಸಂಬಂಧ ಎಂಥದು ಎಂಬ ಪ್ರಶ್ನೆ ವಿಚಾರವಂತರ ಆಸಕ್ತಿಯನ್ನು ಕೆರಳಿಸುವುದು ಸಹಜ. ಧರ್ಮ ಎಂಬ ಪದಕ್ಕೆ ಹಲವಾರು ಅರ್ಥಗಳಿವೆ. ಇಲ್ಲಿ ಆ ಪದವನ್ನು ಒಂದು ನಿರ್ದಿಷ್ಟ ಅರ್ಥದಲ್ಲಿ ಉಪಯೋಗಿಸಲಾಗಿದೆ. ಇಂಗ್ಲಿಷ್ ಭಾಷೆಯ ರಿಲಿಜನ್ ಎಂಬ ಪದಕ್ಕೆ ಸಮಾನ ಪದವಾಗಿ ಅದನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಮತ ಎಂಬ ಪದವನ್ನೂ ಇದೇ ಅರ್ಥದಲ್ಲಿ ಬಳಸುವುದು ರೂಢಿ. ಯೆಹೂದ್ಯ ಮತ, ಹಿಂದು ಧರ್ಮ, ಇಸ್ಲಾಮ್ ಮತ, ಜೈನ ಧರ್ಮ, ಕ್ರೈಸ್ತ ಮತ ಎಂಬ ಶಬ್ದಗಳು ಬಳಕೆಯಲ್ಲಿರುವುದನ್ನು ಗಮನಿಸಿದಾಗ ಈ ವಿಷಯ ವೇದ್ಯವಾಗುವುದು.

ಇಲ್ಲಿ ಹೆಸರಿಸಿರುವ ವಿವಿಧ ಧರ್ಮಗಳಿಗೂ ಇಲ್ಲಿ ಹೆಸರಿಸದೆ ಇರುವ ಇತರ ಎಲ್ಲ ಧರ್ಮಗಳಿಗೂ ಸಾಮಾನ್ಯವಾಗಿರುವ ಒಂದು ನಂಬಿಕೆಯನ್ನು ನಾವು ಗುರುತಿಸಬಹುದು. ಪ್ರಪಂಚದ ಆಗುಹೋಗುಗಳೆಲ್ಲವಕ್ಕೂ ಕಾರಣನಾದ ಮತ್ತು ಅವುಗಳನ್ನು ನಿಯಂತ್ರಿಸಬಲ್ಲ ದೇವರೊಬ್ಬನಿದ್ದಾನೆ, ಅವನಿಗೆ ಪೂಜೆ ಸಲ್ಲಿಸಿ, ಪ್ರಾರ್ಥನೆ ಮಾಡಿ, ಅವನನ್ನು ಒಲಿಸಬಹುದು, ಅವನ ಕೃಪೆಗೆ ಪಾತ್ರರಾಗಬಹುದು ಎಂಬ ನಂಬಿಕೆ ಈ ಎಲ್ಲ ಧರ್ಮಗಳಲ್ಲಿಯೂ ಕಾಣಬರುತ್ತದೆ. ವಿವಿಧ ಮತಗಳಿಗೆ ವಿಶಿಷ್ಟವಾದ ಬಗೆಬಗೆಯ ಕರ್ಮಗಳಿಗೂ ಕಟ್ಟಳೆಗಳಿಗೂ ಈ ನಂಬಿಕೆಯೇ ಆಧಾರ. ಬೌದ್ಧ ಧರ್ಮ ಈ ಮಾತಿಗೆ ಹೊರತಲ್ಲವೇ ಎಂದು ಯಾರಾದರೂ

ಕೇಳಬಹುದು. ಹೆಚ್ಚು ಕಡಿಮೆ ನೀತಿಸಂಹಿತೆಯಂತಿರುವ ಆ ಮತ ನಿಜಕ್ಕೂ ನಾಸ್ತಿಕ ಮತ ಎಂದು ಅವರು ವಾದಿಸಬಹುದು. ಪ್ರಾರಂಭದಲ್ಲಿ ಬೌದ್ಧ ಧರ್ಮ ನಿರೀಶ್ವರವಾದವಾಗಿದ್ದುದು ನಿಜ. ಆದರೆ ಕಾಲಕ್ರಮದಲ್ಲಿ ಎಲ್ಲ ಧರ್ಮಗಳಂತೆ ಅದೂ ಒಂದು ಸಾಮಾಜಿಕ ವ್ಯವಸ್ಥೆಯಾಗಿ ರೂಪುಗೊಂಡಿದೆ, ಆ ಪ್ರಕ್ರಿಯೆಯಲ್ಲಿ ಹಲವಾರು ದೇವತೆಗಳನ್ನು ಸೃಷ್ಟಿಸಿದೆ. ಆಚರಣೆಯಲ್ಲಿ ಈಗ ಅದಕ್ಕೂ ಇತರ ಧರ್ಮಗಳಿಗೂ ವ್ಯತ್ಯಾಸ ಕಂಡುಬರುವುದಿಲ್ಲ.

ಎಲ್ಲ ಧರ್ಮಗಳಲ್ಲಿಯೂ ಕಾಣಬರುವ ಈ ದೇವರ ಕಲ್ಪನೆ ಬಹುಪಾಲು ವಿಜ್ಞಾನಿಗಳಿಗೆ ಅಪಥ್ಯ. ವಿಜ್ಞಾನ ಅನುಸರಿಸುವ ಮಾರ್ಗವನ್ನೂ ಅದು ತಳೆಯುವ ಧೋರಣೆಯನ್ನೂ ಮೆಚ್ಚಿ ವಿಜ್ಞಾನದ ಅಧ್ಯಯನ ನಡೆಸಿದವರು, ವೈಜ್ಞಾನಿಕ ಸಂಶೋಧನೆ ಕೈಗೊಂಡವರು, ಬಹುತೇಕ, ಕ್ರಮೇಣ ಧರ್ಮದಿಂದ ದೂರ ಸರಿದಿರುವುದು ಕಂಡುಬರುತ್ತದೆ. ಅಂಥವರಲ್ಲಿ ಕೆಲವರು, ಜನಸಾಮಾನ್ಯರಲ್ಲಿ ಬಹುಮಟ್ಟಿಗೆ ಸಾರ್ವತ್ರಿಕವಾಗಿರುವ ದೈವಭಾವನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲು ಹಿಂಜರಿದು, ದೇವರ ಕಲ್ಪನೆಯನ್ನು ತಿರುಚಿ, ದೇವರು ಎಂಬ ಪದಕ್ಕೆ ತಮ್ಮದೇ ಆದ ಬೇರೊಂದು ಅರ್ಥವನ್ನು ಕೊಟ್ಟು ಆಸ್ತಿಕರೆಂಬ ಹಣೆಪಟ್ಟಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುವುದುಂಟು. ಅಂಥವರು ಸಹ, ಮನುಷ್ಯಮಾತ್ರರಂತೆ ಸ್ತುತಿಯಿಂದ ಸುಪ್ರೀತರಾಗುವ, ಪ್ರಾರ್ಥನೆಗೆ ಓಗೊಡುವ ದುಷ್ಟರನ್ನು ಶಿಕ್ಷಿಸುವ, ಶಿಷ್ಟರನ್ನು ರಕ್ಷಿಸುವ ದೇವರನ್ನು ಖಂಡಿತ ನಿರಾಕರಿಸುತ್ತಾರೆ.

ವಿಜ್ಞಾನಿಗಳು ಹೀಗೆ ಧರ್ಮಶ್ರದ್ಧೆಯನ್ನು ಕಳೆದುಕೊಳ್ಳುವುದೇಕೆ? ಈ ಪ್ರಶ್ನೆಗೆ ಉತ್ತರವಾಗಿ ಧರ್ಮನಿಷ್ಠರು ಸಾಮಾನ್ಯವಾಗಿ ಕೊಡುವ ವಿವರಣೆ ಒಂದಿದೆ: ಆಧುನಿಕ ವಿಜ್ಞಾನ ಹಾಗೂ ಅದನ್ನನುಸರಿಸಿ ಬಂದ ತಂತ್ರವಿದ್ಯೆಗಳು ಕಳೆದ ಆರೇಳು ದಶಕಗಳಲ್ಲಿ ಬೆರಗುಗೊಳಿಸುವಂಥ ಪ್ರಗತಿ ಸಾಧಿಸಿವೆ. ವಿಜ್ಞಾನದ ಈ ಅದ್ಭುತ ಸಾಧನೆಗಳಿಂದಾಗಿ ವಿಜ್ಞಾನಿಗಳು ಮದಾಂಧರಾಗಿದ್ದಾರೆ, ಆ ಮದದಲ್ಲಿ ತಾವು ಸರ್ವಜ್ಞರೆಂಬ ಭ್ರಮೆಗೆ ಒಳಗಾಗಿದ್ದಾರೆ. ವಿಜ್ಞಾನಕ್ಕೂ ಒಂದು ಮಿತಿ ಇದೆ ಎಂಬುದನ್ನು ಅವರು ಅರಿಯರು. ಮುಂದೊಂದು ದಿನ ಆ ಬಗ್ಗೆ ಅವರಿಗೆ ಅರಿವು ಮೂಡಿದ್ದೇ ಆದರೆ, ದೇವರೊಬ್ಬನಿದ್ದಾನೆ ಎಂಬ ಮಾತನ್ನು ಒಪ್ಪಿಕೊಳ್ಳುತ್ತಾರೆ. ಇದು ಧರ್ಮನಿಷ್ಠರು ಕೊಡುವ ಉತ್ತರದ ಧಾಟಿ. ವಾಸ್ತವವಾಗಿ, ವಿಜ್ಞಾನಿಗಳು ದೈವಭಾವನೆಯನ್ನು ನಿರಾಕರಿಸುವುದಕ್ಕೆ ಕಾರಣ, ತಾವು ಸರ್ವಜ್ಞರೆಂಬ ಅಹಮಿಕೆಯಲ್ಲ, ಒಂದು ರೀತಿಯಲ್ಲಿ ಅದಕ್ಕೆ ವಿರುದ್ಧ ಎನ್ನಬಹುದಾದ ಮತ್ತು ವಿಜ್ಞಾನಕ್ಕೆ ವಿಶಿಷ್ಟವಾದ ಸಂದೇಹ ಮನೋಭಾವ.

ಧಾರ್ಮಿಕ ಮನೋಭಾವ ಮತ್ತು ವೈಜ್ಞಾನಿಕ ಮನೋಭಾವಗಳು ಹಲವು ರೀತಿಯಲ್ಲಿ ಒಂದಕ್ಕೊಂದು ವಿರುದ್ಧ. ಧಾರ್ಮಿಕ ಮನೋಭಾವದ ಪ್ರಧಾನ ಲಕ್ಷಣ, ನಂಬಿಕೆ. ಧರ್ಮಗುರುಗಳು ಏನು ಹೇಳುವರೋ ಧರ್ಮಗ್ರಂಥಗಳಲ್ಲಿ ಏನು ಹೇಳಿದೆಯೋ ಅದೇ ಅಂತಿಮ ಸತ್ಯ. ಅದನ್ನು ಪ್ರಶ್ನಿಸುವುದು ಪಾಷಂಡತನ. ಅದನ್ನು ಮನನ ಮಾಡುವುದು, ಅದಕ್ಕನುಗುಣ

ವಾಗಿ ನಡೆದುಕೊಳ್ಳುವುದು ಮಾತ್ರ ನಮ್ಮ ಕೆಲಸ. ನಂಬಿಕೆಯ ಪಾತ್ರ ಧರ್ಮದಲ್ಲಿ ಎಷ್ಟು ಪ್ರಧಾನವೆಂದರೆ, ಇಂಗ್ಲಿಷ್ ಭಾಷೆಯಲ್ಲಿ ರಿಲಿಜನ್ ಮತ್ತು ಫೇತ್ ಪರ್ಯಾಯ ಪದಗಳಾಗಿ ಬಿಟ್ಟಿವೆ. ಫೇತ್ ಎಂದರೆ ನಂಬಿಕೆ. ವಿವಿಧ ಧರ್ಮಗಳು ಎಂದು ಹೇಳಲು ವಿವಿಧ ಫೇತ್‌ಗಳು ಎನ್ನುವುದು ಸರ್ವಸಾಮಾನ್ಯ.

ವೈಜ್ಞಾನಿಕ ಮನೋಭಾವವಾದರೋ ಸಂಪೂರ್ಣವಾಗಿ ಇಂಥ ಫೇತ್‌ನ ವಿರುದ್ಧ ದಿಕ್ಕಿನಲ್ಲಿ ಸಾಗುತ್ತದೆ. ನಮ್ಮ ಜ್ಞಾನ ಸೀಮಿತ ಎಂದು ಒಪ್ಪಿಕೊಂಡು ಮುಂದು ವರಿಯುವುದು ಅದರ ಕ್ರಮ. ಸಂಶೋಧ ನೆಯ ಉದ್ದೇಶವಾದರೂ ಏನು? ನನಗೆ ತಿಳಿದಿದೆ ಎಂದುಕೊಂಡು ಸಂಶೋಧನೆಯಲ್ಲಿ ತೊಡಗುವುದುಂಟೆ? ತಿಳಿಯದುದನ್ನು ತಿಳಿದುಕೊಳ್ಳುವುದಕ್ಕಾಗಿ ತಾನೆ ಸಂಶೋಧನೆ ನಡೆಸುವುದು? ಸತ್ಯಾನ್ವೇಷಣೆಯ ಈ ಪ್ರಯತ್ನದಲ್ಲಿ ಸತ್ಯದ ಸುಳಿವು ಸಿಕ್ಕರೆ, ಯಾರಾದರೂ ಆ ಸುಳಿವನ್ನು ನೀಡಿದರೆ, ಅದನ್ನು ಸಂದೇಹಿಸದೆ ಸ್ವೀಕರಿಸುವುದು ವಿಜ್ಞಾನದ ಕ್ರಮವಲ್ಲ. ಸುಳಿವು ಯಾರಿಂದಲೇ ಬರಲಿ, ಅವರು ಎಷ್ಟು ದೊಡ್ಡವರೇ ಆಗಿರಲಿ, ಅವರ ಮಾತು ಸ್ವೀಕಾರಕ್ಕೆ ಅರ್ಹವಾಗುವುದಿಲ್ಲ. ಪ್ರಬಲ ಸಾಕ್ಷ್ಯಾಧಾರಗಳು ದೊರೆತಾಗ ಮಾತ್ರ ಅದು ಸ್ವೀಕಾರಾರ್ಹವಾಗುತ್ತದೆ. ಆಗಲೂ ಆ ಸತ್ಯ ಅಂತಿಮವಲ್ಲ. ವೈಜ್ಞಾನಿಕ ತೀರ್ಮಾನ ಎಂದಿದ್ದರೂ ತಾತ್ಕಾಲಿಕವೇ. ಏಕೆಂದರೆ, ನಮ್ಮ ಅನುಭವ ವಿಸ್ತರಿಸಿ ಹೊಸ ವಿಷಯಗಳು ನಮ್ಮ ಅರಿವಿಗೆ ಬರುವುದು ಸಾಧ್ಯ. ಅವುಗಳ ಬೆಳಕಿನಲ್ಲಿ ನಮ್ಮ ಹಿಂದಿನ ತೀರ್ಮಾನವನ್ನು ಕೈ ಬಿಡಬೇಕಾಗಬಹುದು ಇಲ್ಲವೇ ಮಾರ್ಪಡಿಸಬೇಕಾಗಬಹುದು. ಈ ಬಗೆಯ ಮನೋಭಾವವನ್ನು ಬೆಳಸಿಕೊಂಡಿ ರುವ ವಿಜ್ಞಾನಿ ದೇವರ ಕಲ್ಪನೆಯನ್ನು ಸಂದೇಹ ದೃಷ್ಟಿಯಿಂದ ನೋಡುವುದು, ಮನವೊಪ್ಪಿಸುವಂಥ ಸಾಕ್ಷ್ಯಾಧಾರವಿಲ್ಲ ದಾಗ ಅದನ್ನು ಸ್ವೀಕರಿಸಲು ಒಪ್ಪದಿರು ವುದು ತುಂಬ ಸಹಜ.

ವಿಜ್ಞಾನಿಗಳು ದೇವರ ಕಲ್ಪನೆಯನ್ನು ನಿರಾಕರಿಸಲು ಇನ್ನೊಂದು ಗುರುತರವಾದ ಕಾರಣವಿದೆ. ವಿಶ್ವದ ಅಗಾಧ ವಿಸ್ತಾರದ ಬಗ್ಗೆ ಮತ್ತು ಭೂಮಿಯ ಮೇಲೆ ಮನುಷ್ಯ ಜೀವಿಯ ಉಗಮದ ಬಗ್ಗೆ ವಿಜ್ಞಾನ ನಮಗೆ ನೀಡಿರುವ ತಿಳುವಳಿಕೆಯ ಹಿನ್ನೆಲೆಯಲ್ಲಿ ದೇವರ ಕಲ್ಪನೆ ನಂಬಲರ್ಹವಾಗಿ ಕಾಣಿಸು ವುದಿಲ್ಲ. ಕೃಷ್ಣ ಪಕ್ಷದ ರಾತ್ರಿ ಆಕಾಶದಲ್ಲಿ ಹಾಲು ಚೆಲ್ಲಿದಂತೆ ಕಾಣಿಸುವ ಬಿಳಿಯ ಪಟ್ಟಿಯನ್ನು ನಾವೆಲ್ಲ ಗಮನಿಸಿಯೇ ಇರು ತ್ತೇವೆ. ಸೂರ್ಯನಂಥ ನಕ್ಷತ್ರಗಳು ಹತ್ತು ಸಾವಿರ ಕೋಟಿ ಇರುವ ತಾರಾಸಮೂಹ ವಾದ ನಮ್ಮ ಗೆಲಾಕ್ಸಿಯ ಹೊರ ಅಂಚು, ಆ ಬಿಳಿಯ ಪಟ್ಟಿ. ಸೆಕೆಂಡಿಗೆ ಮೂರು ಲಕ್ಷ ಕಿಲೊಮೀಟರ್ ವೇಗದಲ್ಲಿ ಸಾಗುವ ಬೆಳಕಿನ ಕಿರಣಗಳು ಈ ಗೆಲಾಕ್ಸಿಯ ಒಂದು ಬದಿಯಿಂದ ಇನ್ನೊಂದು ಬದಿಗೆ ಹೋಗಲು ಒಂದು ಲಕ್ಷ ವರ್ಷ ತೆಗೆದುಕೊಳ್ಳುತ್ತವೆ. ನಮ್ಮ ಗೆಲಾಕ್ಸಿ ಅಷ್ಟು ವಿಸ್ತಾರವಾದುದು. ಇಂಥ ಗೆಲಾಕ್ಸಿಗಳು ವಿಶ್ವದಲ್ಲಿ ನೂರು ಕೋಟಿ ಇವೆ. ಕಲ್ಪನೆಗೆ ಎಟುಕದಷ್ಟು ಅಗಾಧವಾಗಿರುವ ಈ ವಿಶ್ವದಲ್ಲಿ ನಮ್ಮ ಭೂಮಿಯ ಗಾತ್ರ ಲೆಕ್ಕಕ್ಕೆ ಸಿಕ್ಕುವುದಿಲ್ಲ. ಬರಿಗಣ್ಣಿಗೆ ಕಾಣಿಸದಷ್ಟು ಚಿಕ್ಕದಾದ

ದೂಳು ಕಣ, ನಮ್ಮ ಭೂಮಿ. ಈ ಯಃಕಶ್ಚಿತ್ ದೂಳು ಕಣ, ಮನುಷ್ಯನ ಆವಾಸಸ್ಥಾನ.

ಭೂಮಿ ಎಂದು ಕರೆಸಿಕೊಳ್ಳುವ ಈ ದೂಳು ಕಣದ ಮೇಲೆ ಮನುಷ್ಯ ಕಾಣಿಸಿಕೊಂಡುದಾದರೂ ಯಾವಾಗ? ಭೂವಿಜ್ಞಾನಿಗಳ ಲೆಕ್ಕಾಚಾರದಂತೆ ಈ ಭೂಮಿ ರೂಪುಗೊಂಡು ಸುಮಾರು ನಾಲ್ಕು ನೂರಾ ಅರುವತ್ತು ಕೋಟಿ ವರ್ಷಗಳಾಗಿವೆ. ಕಲ್ಪನಾತೀತವಾದ ಈ ದೀರ್ಘ ಅವಧಿಯ ಮೊದಲ ನೂರು ಕೋಟಿ ವರ್ಷಗಳಿಗೂ ಹೆಚ್ಚು ಕಾಲ ಭೂಮಿಯ ಮೇಲೆ ಯಾವ ಬಗೆಯ ಜೀವಿಯೂ ಇರಲಿಲ್ಲ. ಮೊತ್ತಮೊದಲ ಜೀವಿಗಳು ಕಾಣಿಸಿಕೊಂಡದ್ದು ಸುಮಾರು ಮುನ್ನೂರ ಐವತ್ತು ಕೋಟಿ ವರ್ಷಗಳ ಹಿಂದೆ. ಅಂದಿನಿಂದ ಜೀವಿಗಳ ವಿಕಸನ ತನ್ನದೇ ನಿಧಾನ ಗತಿಯಲ್ಲಿ ಸಾಗಿ ಬಂದಿದೆ. ಮನುಷ್ಯ ಎಂದು ಕರೆಯಬಹುದಾದ ಪ್ರಾಣಿ ಅಸ್ತಿತ್ವಕ್ಕೆ ಬಂದುದು ಕೇವಲ ಕೆಲವು ಲಕ್ಷ ವರ್ಷಗಳ ಹಿಂದೆ. ಭೂ ಗ್ರಹದ ಜೀವಿತದಲ್ಲಿ ಮನುಷ್ಯ ಕಾಣಿಸಿಕೊಂಡುದು ಎಷ್ಟು ಈಚೆಗೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದಕ್ಕಾಗಿ, ಭೂ ಗ್ರಹ ರೂಪುಗೊಂಡಾಗಿನಿಂದ ಇಲ್ಲಿಯವರೆಗಿನ ದೀರ್ಘ ಕಾಲವನ್ನು ಅದುಮಿ ಒಂದು ವರ್ಷಕ್ಕೆ ಇಳಿಸುವುದಾದರೆ, ಆ ವರ್ಷದ ಮೊದಲ ಮೂರು ತಿಂಗಳು ಈ ಭೂಮಿಯ ಮೇಲೆ ಯಾವ ಬಗೆಯ ಜೀವಿಯೂ ಇರಲಿಲ್ಲ. ಅನಂತರ ಉದ್ಭವಿಸಿದ ಆದಿಮ ಜೀವಿ ವಿಕಸನಕ್ಕೊಳಗಾದುದರ ಫಲವಾಗಿ ಮೊತ್ತಮೊದಲ ಮಾನವರು ಕಾಣಿಸಿಕೊಂಡದ್ದು, ಒಂದೆರಡು ಗಂಟೆಗಳಷ್ಟು ಹಿಂದೆ. ಅಷ್ಟು ಇತ್ತೀಚಿನ ಸೃಷ್ಟಿ, ಈ ಮಾನವ ಕುಲ. ಮುಂದೆ ಇನ್ನೆಷ್ಟು ಕಾಲ ಇದು ಅಸ್ತಿತ್ವದಲ್ಲಿರುವುದೋ ಗೊತ್ತಿಲ್ಲ.

ಹಿಂದೆ ಮನುಷ್ಯ ಇಲ್ಲದಿದ್ದ ದೀರ್ಘ ಕಾಲವನ್ನೂ ಇಂದು ಮನುಷ್ಯ ಇಲ್ಲದಿರುವ ವಿಶಾಲ ವಿಶ್ವವನ್ನೂ ಕುರಿತು ಯೋಚಿಸತೊಡಗಿದರೆ, ಇವೆಲ್ಲದರ ಅರ್ಥವೇನು ಎಂದು ದಿಗ್ಭ್ರಮೆ ಉಂಟಾಗುವುದು ನಿಜ. ಆದರೆ ಮನುಷ್ಯ ಮಾದರಿಯ ದೇವರೊಬ್ಬ ಇವೆಲ್ಲವುಗಳ ಕಾರಣಕರ್ತ ಎಂಬ ಮಾತು ಸಮಂಜಸವಾಗಿ ಕಾಣುವುದಿಲ್ಲ. ವಿಶಾಲ ವಿಶ್ವದ ಯಾವುದೋ ಮೂಲೆಯಲ್ಲಿ ತೇಲಾಡುತ್ತಿರುವ ಸೂಕ್ಷ್ಮಾತಿಸೂಕ್ಷ್ಮ ಕಣ ಒಂದರ ಮೇಲೆ ಕ್ಷಣಿಕವಾಗಿ ಕಾಣಿಸಿಕೊಂಡಿರುವ ಈ ಮನುಷ್ಯರು ಒಳಿತು ಕೆಡುಕುಗಳಿಗಾಗಿ ಸೆಣಸುವುದನ್ನು ದೇವರು ವೀಕ್ಷಿಸುವುದಕ್ಕಾಗಿ ಒಂದು ವೇದಿಕೆ ಒದಗಿಸುವುದು ಇಷ್ಟೆಲ್ಲದರ ಉದ್ದೇಶ ಎಂಬುದು ಹಾಸ್ಯಾಸ್ಪದವಾಗಿ ಕಾಣಿಸುತ್ತದೆ.

ವಿಜ್ಞಾನ ಮತ್ತು ಧರ್ಮ—ಇವು ಅನುಸರಿಸುವ ಮಾರ್ಗಗಳು ಒಂದಕ್ಕೊಂದು ವಿರುದ್ಧ, ಆದುದರಿಂದ ಇವುಗಳ ನಡುವೆ ಸಮನ್ವಯ ಕಷ್ಟಸಾಧ್ಯ ಎಂದಾಗ, ಅದಕ್ಕೆ ಪ್ರತಿಯಾಗಿ ಐನ್‌ಸ್ಟೈನ್‌ರವರು ಹೇಳಿರುವ ಒಂದು ಮಾತನ್ನು ಜನ ಉದ್ಧರಿಸುವುದುಂಟು. ಧರ್ಮವಿಲ್ಲದ ವಿಜ್ಞಾನ ಕುಂಟು, ವಿಜ್ಞಾನವಿಲ್ಲದ ಧರ್ಮ ಕುರುಡು ಎಂದು ಅವರು ಒಂದೆಡೆ ಹೇಳಿದ್ದಾರೆ. ವಿಜ್ಞಾನದ ಚರಿತ್ರೆಯಲ್ಲಿ ನ್ಯೂಟನ್ ತರುವಾಯ ಕಾಣಿಸಿಕೊಂಡ ಆ ಮಟ್ಟದ ವಿಜ್ಞಾನಿ ಐನ್‌ಸ್ಟೈನ್ ಒಬ್ಬರೇ ಎಂಬುದು ಬಹುಪಾಲು ವಿದ್ವಾಂಸರ ಅಭಿಪ್ರಾಯ.

ಐನ್‌ಸ್ಟೈನ್ ಅವರ ಪ್ರಧಾನ ಕೊಡುಗೆ ಭೌತವಿಜ್ಞಾನಕ್ಕೆಎಂಬುದು ನಿಜವೇ ಆದರೂ ಅವರ ಚಿಂತನೆ ವಿಜ್ಞಾನಕ್ಕೆ ಸೀಮಿತವಾಗಿರ ಲಿಲ್ಲ. ಜೀವನಕ್ಕೆ ಸಂಬಂಧಿಸಿದ ಎಲ್ಲ ಕ್ಷೇತ್ರ ಗಳಲ್ಲಿಯೂ ಅವರು ಆಸಕ್ತಿವಹಿಸಿ ಆಳವಾಗಿ ಚಿಂತಿಸಿ ತಮ್ಮ ಅಭಿಪ್ರಾಯಗಳನ್ನು ತೂಕ ವಾದ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಆದುದರಿಂದ ಅವರ ಮಾತುಗಳನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವುದಕ್ಕಾಗುವುದಿಲ್ಲ.

ಐನ್‌ಸ್ಟೈನ್‌ರವರ ಈ ಪ್ರಸಿದ್ಧ ಮಾತು ಗಳ ಸಂದರ್ಭ ಮತ್ತು ಹಿನ್ನೆಲೆಯನ್ನು ಪರಿಗಣಿಸಿದಾಗ ಒಂದು ವಿಷಯ ಸ್ಪಷ್ಟ ವಾಗುತ್ತದೆ. ಐನ್‌ಸ್ಟೈನ್‌ರವರ ಮಾತು ಗಳಲ್ಲಿ ಬರುವ ಧರ್ಮವೇ ಬೇರೆ, ನಾವು ಚರ್ಚಿಸುತ್ತಿರುವ ಧರ್ಮವೇ ಬೇರೆ. ಧರ್ಮ ಎಂಬ ಪದವನ್ನು ಜನ ಯಾವ ಅರ್ಥದಲ್ಲಿ ತೆಗೆದುಕೊಳ್ಳುವರೋ ಆ ಅರ್ಥವನ್ನು ಒಪ್ಪಿ ಕೊಂಡು ನಾವು ಚರ್ಚಿಸುತ್ತಿದ್ದೇವೆ. ಸಹಜ ವಾಗಿಯೇ ನಿಘಂಟುಗಳು ಸಹ ಆ ಪದಕ್ಕೆ ಅದೇ ಅರ್ಥವನ್ನು ಕೊಡುತ್ತವೆ. ಐನ್‌ಸ್ಟೈನ್‌ರವರು ಮಾತ್ರ ಆ ಪದವನ್ನು ಬೇರೊಂದು ಅರ್ಥದಲ್ಲಿ ಬಳಸುತ್ತಿದ್ದಾರೆ. ವಾಸ್ತವವಾಗಿ ಜನರ ಮಾನ್ಯತೆ ಗಳಿಸಿರುವ ಅರ್ಥವೂ ಐನ್‌ಸ್ಟೈನ್‌ರಿಗೆ ಗೊತ್ತು. ಆದರೆ ಅವರು ಆ ಪದಕ್ಕೆ ಕೊಡುವ ಅರ್ಥವೇ ಬೇರೆ.

ಐನ್‌ಸ್ಟೈನ್ ಅವರ ಅಭಿಪ್ರಾಯದಲ್ಲಿ, ಮನುಕುಲದ ಚರಿತ್ರೆಯು ಮೂರು ಬೇರೆ ಬೇರೆ ಹಂತಗಳಲ್ಲಿ ಧರ್ಮದ ಭಾವನೆ ಮೂರು ಬೇರೆ ಬೇರೆ ರೀತಿಯಲ್ಲಿ ಕಾಣಿಸಿ ಕೊಂಡಿದೆ. ಆದಿ ಮಾನವನಲ್ಲಿ ಧರ್ಮ ಸಂಬಂಧವಾದ ಭಾವನೆಗೆ ಪ್ರಚೋದನೆ ನೀಡಿದುದು, ಮುಖ್ಯವಾಗಿ ಭಯ; ಹಸಿವಿನ ಭಯ, ವನ್ಯ ಮೃಗಗಳ ಭಯ, ಪ್ರಕೃತಿ ಶಕ್ತಿಗಳ ಭಯ, ಸಾವಿನ ಭಯ. ಕಾರ್ಯ ಕಾರಣಗಳ ಸಂಬಂಧದ ಬಗ್ಗೆ ಆಗ ಅರಿವು ಇನ್ನೂ ಮೂಡಿರಲಿಲ್ಲವಾದುದರಿಂದ ವಿವಿಧ ಭಯಗಳಿಗೆ ಕಾರಣರಾದ ದೈವಗಳನ್ನು ಮಾನವ ಕಲ್ಪಿಸಿಕೊಂಡ; ಆ ದೈವಗಳನ್ನು ತೃಪ್ತಿ ಪಡಿಸಿ ರಕ್ಷಣೆ ಪಡೆಯುವ ವಿಧಾನ ಗಳನ್ನು ರೂಪಿಸಿಕೊಂಡ. ಧರ್ಮದ ಈ ಪ್ರಕಾರವನ್ನು ಭಯದ ಧರ್ಮ ಅಥವಾ ಭಯಜನ್ಯ ಧರ್ಮ ಎಂದು ಅವರು ಕರೆದಿದ್ದಾರೆ.

ಮಾನವ ಸಮಾಜ ರೂಪುಗೊಂಡ ತರುವಾಯ ಸಮಾಜದ ಭದ್ರತೆಗಾಗಿ ಜನರ ನೈತಿಕ ನಡವಳಿಕೆ ಅಗತ್ಯವಾಯಿತು. ಈ ವಿಷಯದಲ್ಲಿ ಮಾರ್ಗದರ್ಶನ ನೀಡುವ, ನೀತಿ ಬಾಹಿರರನ್ನು ಶಿಕ್ಷಿಸುವ, ನೀತಿವಂತರನ್ನು ಕಾಪಾಡುವ ದೇವರು ಸೃಷ್ಟಿಯಾದ. ಆತನನ್ನು ಪೂಜಿಸುವ, ಓಲೈಸುವ, ವಿಧಿ ವಿಧಾನಗಳು ಬಳಕೆಗೆ ಬಂದುವು. ಧರ್ಮದ ಈ ಪ್ರಕಾರವನ್ನು ಐನ್‌ಸ್ಟೈನ್ ಸಾಮಾಜಿಕ ಧರ್ಮ, ನೈತಿಕ ಧರ್ಮ ಎಂದು ಕರೆಸಿದ್ದಾರೆ.

ಭಯದಿಂದ ಜನಿಸುವ ಧರ್ಮಪ್ರಜ್ಞೆಗಿಂತ ನೈತಿಕ ಧರ್ಮಪ್ರಜ್ಞೆ ತುಂಬ ಮೇಲ್ಮಟ್ಟದ್ದು ನಿಜ. ಆದರೆ ಇಂದು ಆಚರಣೆಯಲ್ಲಿರುವ ಎಲ್ಲ ಧರ್ಮಗಳಲ್ಲಿಯೂ ಇವೆರಡೂ ವಿವಿಧ ಪ್ರಮಾಣಗಳಲ್ಲಿ ಬೆರೆತುಕೊಂಡಿವೆ ಎಂಬು ದನ್ನು ಐನ್‌ಸ್ಟೈನ್ ಅವರು ಗುರುತಿಸಿ ದ್ದಾರೆಯಲ್ಲದೆ ವೈಜ್ಞಾನಿಕ ಬುದ್ಧಿಗೆ ಇವೆರಡೂ ಅಪಥ್ಯ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಮಾತುಗಳಲ್ಲಿಯೇ ಹೇಳಬೇಕೆಂದರೆ "ನಿಸರ್ಗದಲ್ಲಿ ಕಾರ್ಯ

ಕಾರಣ ಸಂಬಂಧ ಸರ್ವವ್ಯಾಪಿ ಎಂಬುದನ್ನು ಸಂಪೂರ್ಣವಾಗಿ ಮನಗಂಡಿರುವ ಯಾವನೇ ಆಗಲಿ, ನೈಸರ್ಗಿಕ ವ್ಯಾಪಾರಗಳ ಮಧ್ಯೆ ಕೈ ಹಾಕುವ ದೇವರೊಬ್ಬನಿದ್ದಾನೆ ಎಂಬ ಭಾವನೆಯನ್ನು ಕ್ಷಣಮಾತ್ರವೂ ಸಹಿಸುವುದಿಲ್ಲ. ಭಯದ ಅಗತ್ಯ ಅವನಿಗಿಲ್ಲ. ಸಾಮಾಜಿಕ ಹಾಗೂ ನೈತಿಕ ಧರ್ಮಗಳ ಅಗತ್ಯವೂ ಅವನಿಗಿಲ್ಲ. ರಕ್ಷಿಸುವ ಮತ್ತು ಶಿಕ್ಷಿಸುವ ದೇವರು ಅವನ ಕಲ್ಪನೆಗೆ ಮೀರಿದುದು. ಏಕೆಂದರೆ, ಮನುಷ್ಯ ಮಾಡುವುದೆಲ್ಲವನ್ನೂ ನಿರ್ಧರಿಸುವುದು ಆಂತರಿಕ ಮತ್ತು ಬಾಹ್ಯ ನಿಯತಿ. ಅವೆಲ್ಲದಕ್ಕೂ ಅವನು ಹೊಣೆಯಲ್ಲ. ಚಲಿಸುತ್ತಿರುವ ಕಾಯ ತನ್ನ ಚಲನೆಗೆ ಹೇಗೆ ಹೊಣೆಯಲ್ಲವೋ ಹಾಗೆ." ಇಂದು ಆಚರಣೆಯಲ್ಲಿರುವ ಧರ್ಮವನ್ನು ಅವರು ಇಷ್ಟು ಸ್ಪಷ್ಟವಾದ ಮಾತುಗಳಲ್ಲಿ ನಿರಾಕರಿಸಿದ್ದಾರೆ.

ಆದರೆ, ಐನ್‌ಸ್ಟೈನ್, ಧರ್ಮಪ್ರಜ್ಞೆಯ ಮೂರನೆಯ ಬಗೆ ಒಂದಿದೆ ಎನ್ನುತ್ತಾರೆ. ಅದನ್ನು ಅವರು ವಿಶ್ವಧರ್ಮ, ಕಾಸ್ಮಿಕ್ ರಿಲಿಜನ್ ಎಂದು ಕರೆದಿದ್ದಾರೆ. ಪ್ರಬುದ್ಧ ಮತಿಗಳಿಗೆ ಮಾತ್ರ ಎಟುಕುವ ಅಂಥ ಧರ್ಮಪ್ರಜ್ಞೆಯನ್ನು ಬೆಳೆಸಿಕೊಂಡ ವ್ಯಕ್ತಿಯ ದೃಷ್ಟಿಯಲ್ಲಿ ಕೇವಲ ವೈಯಕ್ತಿಕವಾದ ಆಶೆ ಅಭಿಲಾಷೆಗಳು ನಿರರ್ಥಕವಾಗಿ ಕಾಣಿಸುತ್ತವೆ. ವಿಶ್ವದ ಅಪಾರತೆ, ಜೈವಿಕ ವ್ಯವಸ್ಥೆಗಳಲ್ಲಿ ಕಾಣಬರುವ ಸಂಕೀರ್ಣತೆ, ಅವೆಲ್ಲವರಲ್ಲಿಯೂ ಕಂಡುಬರುವ ಅದ್ಭುತವಾದ ನಿಯಮಬದ್ಧತೆ—ಇವು ಅವನಿಗೆ ಭವ್ಯವಾಗಿಕಾಣಿಸುತ್ತವೆ. ಸಹಜವಾಗಿಯೇ ಅಂಥ ವ್ಯಕ್ತಿ ಚಿಂತನಶೀಲನಾಗಿ ಭಾವನೆಗಳ ಪ್ರಪಂಚದಲ್ಲಿ ವಿಹರಿಸತೊಡಗುತ್ತಾನೆ. ವೈಯಕ್ತಿಕತೆಯನ್ನು ಮೀರಿ ನಿಂತ ಕಾರಣಕ್ಕಾಗಿಯೇ ಆ ಭಾವನಾ ಪ್ರಪಂಚ ಅವನಿಗೆ ಅರ್ಥಪೂರ್ಣವಾಗಿ ಕಾಣಿಸುತ್ತದೆ. ಬೆಲೆಯುಳ್ಳದ್ದಾಗುತ್ತದೆ.

ಆ ವ್ಯಕ್ತಿಯ ನೈತಿಕ ಜೀವನಕ್ಕೆ ಆಧಾರವೇನಿದ್ದರೂ ಅನುಕಂಪ, ಸಹಾನುಭೂತಿ, ಸಾಮಾಜಿಕ ಬಂಧಗಳು ಹಾಗೂ ಅಗತ್ಯಗಳೇ ಹೊರತು, ದೇವರ ಭಯವಲ್ಲ. ಕೇವಲ ಶಿಕ್ಷೆಯ ಭಯದಿಂದ ಮತ್ತು ಮರಣಾನಂತರ ಸುಖ ದೊರಕಿಸಿಕೊಳ್ಳುವ ಆಶೆಯಿಂದ ನೈತಿಕ ಜೀವನ ನಡೆಸುವುದು ಅವನ ದೃಷ್ಟಿಯಲ್ಲಿ ತುಚ್ಛವಾಗಿ ಕಾಣಿಸುತ್ತದೆ.

ಅಂಥ ಧರ್ಮಪ್ರಜ್ಞೆಯುಳ್ಳ ವ್ಯಕ್ತಿ ನಿಯಮಬದ್ಧವಾಗಿರುವ ಈ ಪ್ರಪಂಚವನ್ನು ಅರ್ಥಮಾಡಿಕೊಳ್ಳಬೇಕೆಂಬ ಆಕಾಂಕ್ಷೆಯಿಂದ ಸತ್ಯಾನ್ವೇಷಣೆಯಲ್ಲಿ ತೊಡಗುತ್ತಾನೆ. ಐನ್‌ಸ್ಟೈನ್ ಅವರ ಅಭಿಪ್ರಾಯದಲ್ಲಿ ಪ್ರಪಂಚ ನಿಯಮಬದ್ಧವಾದುದೆಂಬ ಅವನ ನಂಬಿಕೆಯೂ ಅದನ್ನು ಅರ್ಥಮಾಡಿಕೊಳ್ಳುವ ಅವನ ಆಕಾಂಕ್ಷೆಯೂ ಧರ್ಮಮೂಲದಿಂದ ಬಂದಂಥವು. ಅವುಗಳನ್ನು ಸಮರ್ಥಿಸಿಕೊಳ್ಳುವುದು ಸಾಧ್ಯವಿಲ್ಲ. ನಾವು ಹೇಗೆ ಅಸ್ತಿತ್ವದಲ್ಲಿರುವೆವೋ ಅವೂ ಹಾಗೆ ಅಸ್ತಿತ್ವದಲ್ಲಿವೆ, ಅಷ್ಟೆ. ಆ ಆಕಾಂಕ್ಷೆಯನ್ನು ಪೂರೈಸಲು ವಿಜ್ಞಾನದ ಸಹಾಯ ಅತ್ಯಗತ್ಯ. ವಿಜ್ಞಾನದ ನೆರವಿಲ್ಲದೆ ಹೋದರೆ, ಆ ಆಕಾಂಕ್ಷೆ ಕುರುಡು. ಅಂಥ ಆಕಾಂಕ್ಷೆಯೇ ಇಲ್ಲದೆಹೋದರೆ, ವಿಜ್ಞಾನ ಕುಂಟು. ಪ್ರಸಿದ್ಧವಾಗಿರುವ ಅವರ ಮಾತುಗಳನ್ನು ಅವರು ಹೇಳಿರುವುದು ಈ ಸಂಬಂಧದಲ್ಲಿ, ಈ ಅರ್ಥದಲ್ಲಿ.

ಅಂತ

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೬ನೇ ಕ್ರಾಸ್, ಚಾಮುಂಡಿಪುರಂ
ಮೈಸೂರು-೫೭೦೦೦೪

ಅಶುಲ್‌ಗುಪ್ತನನ್ನು ನಾನು ರಸೆಲ್ ಸ್ಟ್ರೀಟ್‌ನಲ್ಲಿ ನೋಡಿದಾಗ ನಾನೇನು ಸಿನಿಮಾ ನೋಡುತ್ತಿಲ್ಲವೆಂದು ಖಚಿತಪಡಿಸಿಕೊಳ್ಳಲು ಕಣ್ಣುಜ್ಜಿಕೊಂಡೆ. ಹಿಂದಿ ಸಿನಿಮಾ ನಾಯಕರಂತೆ ಅವನು ನೋಡಲು ಚೆನ್ನಾಗಿದ್ದ. ತಲೆ ಚೆನ್ನಾಗಿಬಾಚಿದ್ದ; ಕರೀ ಮೀಸೆ, ಕೆಂಪನೆಯ ಮಾಂಸತುಂಬಿದ ಕೆನ್ನೆಗಳು, ಶುಭ್ರವಾದ ಬಿಳಿ ಹಲ್ಲುಗಳು. ಸಾಹೇಬರು ಹಾಕಿಕೊಳ್ಳುವಂತಹ ಬಣ್ಣ ಬಣ್ಣದ ಷರಟನ್ನು, ಟ್ರೌಜರ್ಸ್ ಅನ್ನು ಧರಿಸಿದ್ದ ಅವನು ಕಾಲಿಗೆ ಕಾಲುಚೀಲ ಧರಿಸಿ ತೊಗಲಿನ ಷೂಸ್ ಧರಿಸಿದ್ದ. ನಾವು ಹಾಕಿಕೊಳ್ಳುವ ಪ್ಲಾಸ್ಟಿಕ್ ಚಪ್ಪಲಿ ಅಲ್ಲ. ಆಶ್ಚರ್ಯವೇನೆಂದರೆ, ಅವನು ಕೈಗೆ ಚಿನ್ನದ ಗಡಿಯಾರ ಕಟ್ಟಿದ್ದ. ರಿಕ್ಷಾ ಎಳೆಯುವವನ ಬಳಿ ಚಿನ್ನದ ಗಡಿಯಾರವೆಂದರೆ ಅಚ್ಚರಿ ತಾನೇ?

"ನಾನು ಸಿನಿಮಾಗಳಲ್ಲಿ ನಾಯಕ ರಿಕ್ಷಾವಾಲನಂತೆ ವೇಷಧರಿಸಿ ಅಭಿನಯಿಸುವುದನ್ನು ಕಂಡಿದ್ದೆ; ಆದರೆ ಗುಪ್ತ ನಿಜಜೀವನದಲ್ಲಿ ರಿಕ್ಷಾವಾಲನಾದರೂ ಸಿನಿಮಾ ಹೀರೋನಂತಿದ್ದ. ಅವನ ಬಗ್ಗೆ ನನಗೇನೂ ಹೆಚ್ಚು ಗೊತ್ತಿಲ್ಲ. ಗುಪ್ತ ಶಾಲಾ ಕಾಲೇಜುಗಳ ಮೆಟ್ಟಲು ಹತ್ತಿರಬೇಕು. ಅವನಿಗೆ ತುಂಬ ವಿಷಯಗೊತ್ತಿತ್ತು. ಕಲ್ಕತ್ತಾದ ಬ್ರಾಹ್ಮಣರೆಲ್ಲರನು ಅರೆದು ಕುಡಿದಿದ್ದಾನೋ ಅನ್ನುವಷ್ಟು ಪಾಂಡಿತ್ಯ. ಅವನು ಭಜನೆ ಶುರು ಮಾಡಿದರೆ ನಮ್ಮ ಹಸಿವು, ಬಾಯಾರಿಕೆ ನೋವು ಎಲ್ಲವೂ ಮರೆತು ಹೋಗುತ್ತಿತ್ತು. ಭಗವದ್ಗೀತೆಯನ್ನು ಅವನು ರಾಗವಾಗಿ ತಪ್ಪಿಲ್ಲದೆ ಪಠಿಸುತ್ತಿದ್ದ. ರಾಮ, ಸೀತೆ, ರಾವಣನ ಪಾತ್ರಗಳ ಮಾತುಗಳನ್ನು ಅಭಿನಯಿಸುತ್ತಾ ಮಾತನಾಡುತ್ತಿದ್ದರೆ, ನಾವು ನಾಟಕ ನೋಡುತ್ತಿದ್ದೀವಿ ಅನ್ನಿಸುತ್ತಿತ್ತು. ಮಾತಿನಿಂದ ಎಲ್ಲರನ್ನು ಮಂತ್ರಮುಗ್ಧರನ್ನಾಗಿ ಮಾಡುವಕಲೆ ಅವನಿಗೆ ಗೊತ್ತಿತ್ತು. ರಿಕ್ಷಾ ಎಳೆಯುವವರ ಆರಾಧನಾ ಮೂರ್ತಿ ಅವನು. ರೂಪು, ತಿಳುವಳಿಕೆ, ವಿದ್ಯೆ, ಜ್ಞಾಪಕಶಕ್ತಿ, ದೈಹಿಕ ಬಲ ಇವೆಲ್ಲವೂ ಇದ್ದ ಅವನೇಕೆ ರಿಕ್ಷಾವಾಲನಾದ ಎನ್ನುವುದು ರಹಸ್ಯ. ಕೆಲವರು ಅವನನ್ನು ಗೂಢಾಚಾರಿ ಎಂದು ಹೇಳುತ್ತಿದ್ದರೆ, ಇನ್ನು ಕೆಲವರು ಅವನೊಬ್ಬ

ಮೂಲ: ಡೊಮಿನಿಕ್ ಲೇಪಿಯರ್‌ನ 'ದ ಸಿಟಿ ಆಫ್ ಜಾಯ್' ಲೇಖನ.

ರಾಜಕೀಯ ಹೋರಾಟಗಾರ ಅನ್ನು ತ್ತಿದ್ದರು. ಪಾದಗಳಿಗೆ ಪಾದರಕ್ಷೆಗಳಿಲ್ಲದೆ ಕೊರಳಿಗೆ ಸರ, ಕೈಕಾಲುಗಳಿಗೆ ಬಳೆ ತೊಟ್ಟು ಕೊಂಡು ಓಡಾಡುವ ವಿದೇಶಿಯರು ಹೋಗಿ ಬರುತ್ತಿದ್ದ ಫ್ರೀ ಸ್ಕೂಲ್ ಸ್ಟ್ರೀಟಿನಲ್ಲಿರುವ ಬೋರ್ಡಿಂಗ್ ಹೌಸ್‌ನಲ್ಲಿ ಅವನ ವಾಸ. ಅಲ್ಲಿದ್ದ ವಿದೇಶಿಯರು 'ಡ್ರಗ್ಸ್' ಚುಚ್ಚಿ ಕೊಳ್ಳುತ್ತಾರೆ, ಅಫೀಮು ಸೇವಿಸುತ್ತಾರೆ, ಭಂಗಿ ಸೇದುತ್ತಾರೆ, ಗುಪ್ತ ಸಿಗರೇಟು ಸೇದುವುದನ್ನೂ ನಾನು ನೋಡಿರಲಿಲ್ಲ. ನಮ್ಮ ಹಾಗೆ ಅವನು ಕಷ್ಟಪಟ್ಟು ದುಡಿಯು ತ್ತಿದ್ದ. ಸೂರ್ಯೋದಯವಾಗುವಷ್ಟರಲ್ಲಿ ಅವನು ಪಾರ್ಕ್ ಸ್ಟ್ರೀಟ್ ಸ್ಟ್ಯಾಂಡಿಗೆ ರಿಕ್ಷಾದೊಡನೆ ಬರುತ್ತಿದ್ದ. ಸೂರ್ಯ ಮುಳುಗಿ ಎಷ್ಟೋ ಹೊತ್ತಾದರೂ ಇನ್ನು ರಿಕ್ಷಾ ಎಳೆಯುತ್ತಿದ್ದ. ಅವನ ರಿಕ್ಷಾಕ್ಕೂ ಲೈಸೆನ್ಸ್ ಇರಲಿಲ್ಲ. ಆದರೆ ಕಲ್ಕತ್ತಾದಲ್ಲಿ ಲಂಚ ಕೊಟ್ಟು ಸ್ವರ್ಗದ ಬೀಗದ ಕೈಯನ್ನು ಕೊಳ್ಳಬಹುದು!"

"ಗುಪ್ತನ ಗಾಡಿಯಲ್ಲಿ ಕುಳಿತುಕೊಳ್ಳು ವುದು ಎಂದರೆ ಹುಡುಗಿಯರಿಗೆ ಎಲ್ಲಿಲ್ಲದ ಅಭಿಮಾನ. ತಾವು ಕುಳಿತಿರುವ ಗಾಡಿ ಯನ್ನು ಫಿಲಂಸ್ಟಾರ್ ಮನೋಜ್ ಕುಮಾರನೇ ಎಳೆದುಕೊಂಡು ಹೋಗು ತ್ತಿದ್ದಾನೆಂಬ ಭಾವನೆ ಅವರಿಗೆ. ಆದರೆ ನಮ್ಮ ವ್ಯಾಪಾರದಲ್ಲಿ ನಾವು ಫಿಲಂ ಸ್ಟಾರ್‌ಗಳಂತೆ ಕಾಣುವುದಕ್ಕಿಂತ ಬಡವ ಅನ್ನುವ ಹಾಗೆ ಕಾಣುವುದೇ ಒಳ್ಳೆ ಯದು."

"ಒಂದು ದಿನ ಗುಪ್ತ ಇಬ್ಬರು ಕಾಲೇಜು ಹುಡುಗಿಯರನ್ನು ಹ್ಯಾರಿಂಗ್‌ಟನ್ ರಸ್ತೆ ಯಲ್ಲಿರುವ ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದ, ರಸ್ತೆಯಲ್ಲಿ ಒಂದು ಗಾಡಿ ಬಿದ್ದು ಅಡಚಣೆಯಾಗಿತ್ತು. ಗುಪ್ತ ಗಾಡಿ ಯನ್ನು ಫುಟ್‌ಪಾತ್ ಮೇಲೆ ಎಳೆದು ಕೊಂಡು ಹೋದುದನ್ನು ಒಬ್ಬ ಪೊಲೀಸ್ ಪ್ಯಾದೆ ನೋಡಿದ. ತಕ್ಷಣವೇ ಅವರಿಬ್ಬರಿಗೂ ಮಾತಿನ ಚಕಮಕಿ ನಡೆದು, ಪೊಲೀಸ್ ನವನು ಗುಪ್ತನಿಗೆ ಲಾಠಿಯಿಂದ ಹೊಡೆದ. ಹುಡುಗಿಯರ ಮುಂದೆ ಅವಮಾನವಾದದ್ದು ಗುಪ್ತಾಗೆ ತಡೆಯಲಾಗಲಿಲ್ಲ. ರಿಕ್ಷಾನೊಗ ಕೆಳಗಿಟ್ಟು ಪೊಲೀಸ್ ಪ್ಯಾದೆಯನ್ನು ನೂಕಿ ಬೀಳಿಸಿದ. ಸ್ವಾಭಾವಿಕವಾಗಿ ಕೂಡಲೇ ಪೊಲೀಸರ ಹಿಂಡೇ ಅಲ್ಲಿಗೆ ಬಂತು. ಪೊಲೀಸರು ಅವನನ್ನು ಠಾಣೆಗೆ ಹಿಡಿದು ಕೊಂಡು ಹೋದರು."

"ಗುಪ್ತ ಮೂರನೇ ದಿನ ಪೊಲೀಸ್ ಠಾಣೆ ಯಿಂದ ಹೊರಬಂದಾಗ ಅವನ ಮೈಕೈ ಎಲ್ಲಾ ಗಾಯ, ರಾತ್ರಿ ಅವನಿಗೆ ಲಾಠಿ ಯಿಂದ ಸಿಕ್ಕಾಪಟ್ಟೆ ಹೊಡೆದಿದ್ದರು; ಹೊತ್ತಿಸಿದ ಸಿಗರೇಟಿನಿಂದ ಅವನ ಎದೆ ಸುಟ್ಟಿದ್ದರು, ಚಾವುಟಿಯಿಂದ ಥಳಿಸಿದ್ದರು, ಕೈಕಾಲು ಕಟ್ಟಿ ನೇತುಹಾಕಿ 'ಏರೋ ಪ್ಲೇನ್' ಶಿಕ್ಷೆ ಕೊಟ್ಟಿದ್ದರು. ಪೊಲೀಸ್ ಪ್ಯಾದೆ ಒಬ್ಬನನ್ನು ಹೊಡೆದಿದ್ದ ಎಂಬ ಒಂದೇ ಕಾರಣಕ್ಕೆ ಅವನನ್ನು ಹೀಗೆ ದಂಡಿಸಿರ ಲಿಲ್ಲ. ಅವನು ಅವನವರ್ಗದ ಇತರರು ಇರು ವಂತೆ ಇರಲಿಲ್ಲ—ಶುಭ್ರವಾದ ಬಟ್ಟೆ ಹಾಕು ತ್ತಿದ್ದ, ಕಾಲಿಗೆ 'ಬಾಬು'ವಿನಂತೆ ಷೂಸ್ ಹಾಕುತ್ತಿದ್ದ, ಕೈಗೆ ಚಿನ್ನದ ಗಡಿಯಾರ ಕಟ್ಟುತ್ತಿದ್ದ, ಹುಡುಗಿಯರ ಕಣ್ಮಣಿ ಯಾಗಿದ್ದ."

"ಹೊಡೆದು ಬಡಿದು ಶಿಕ್ಷೆ ಕೊಟ್ಟದ್ದು ಸಾಲದು ಎನ್ನುವಂತೆ ಪೊಲೀಸರು ಅವನ

ಮೇಲೆ ದಾವಾ ಹಾಕಿದ್ದರು, ವಿಚಾರಣೆ ದಿನ, ನಡೆಯಲು ಕಷ್ಟಪಡುತ್ತಿದ್ದ ಗುಪ್ತನನ್ನು ಹೂವಿನಿಂದ ಅಲಂಕೃತವಾದ ನನ್ನ ಗಾಡಿಯಲ್ಲಿ ಕೂರಿಸಿಕೊಂಡು ಧೈರ್ಯ ಕೊಡುತ್ತಾ ಅವನನ್ನು ಬೋರ್ನ್‌ಸಲ್ ಕೋರ್ಟಿಗೆ ಕರೆದುಕೊಂಡು ಬಂದೆವು. ಅವನೊಬ್ಬ ಮಹಾರಾಜನಂತೆ ಕಾಣುತ್ತಿದ್ದ; ಆದರೆ ಕೈಕಾಲು, ಕಣ್ಣಿಗೆ ಬ್ಯಾಂಡೇಜ್.

"ಡಾಲ್‌ಹೌಸಿ ಚೌಕದಲ್ಲಿರುವ ಬೋರ್ನ್‌ಸಾಲ್ ಕೋರ್ಟ್ ಒಂದು ಹಳೆಯಕಟ್ಟಡ. ಅಂಗಳದಲ್ಲಿ ಒಂದು ಆಲದಮರದ ಕೆಳಗೆ ಸಣ್ಣ ದೇವರಗುಡಿ. ಗುಪ್ತ, ರಿಕ್ಷಾ ಎಳೆಯುವವರ ಸಹಾಯದಿಂದ ಇಳಿದು ಅಲ್ಲಿದ್ದ ಶಿವ, ಕಾಳಿ ಮತ್ತು ಹನುಮಂತನ ದರ್ಶನಮಾಡಿ ಹಜಾರಿಯ ಸಹಾಯದಿಂದ ಗಂಟೆ ಬಾರಿಸಿದ, ಮಂತ್ರ ಹೇಳಿದ, ಶಿವನ ತ್ರಿಶೂಲಕ್ಕೆ ಹಾರ ಹಾಕಿದ. ಜಗುಲಿಯ ಮೇಲೆ ಅನೇಕರು ವ್ಯಾಪಾರಮಾಡುತ್ತಾ ಕೂತಿದ್ದರು. ಅಲ್ಲಿಂದ ಸ್ವಲ್ಪ ದೂರದಲ್ಲಿ ನಾಲ್ಕಾರು ಜನ ಟೈಪಿಸ್ಟುಗಳು ಅರ್ಜಿದಾರರ ಅರ್ಜಿ ವಗೈರೆಗಳನ್ನು ಟೈಪ್‌ಮಾಡುತ್ತಿದ್ದರು. ಬೇಡಿ ತೊಡಿಸಿದ ಅಪರಾಧಿಗಳನ್ನು ಪೊಲೀಸರು ಕರೆದೊಯ್ಯುತ್ತಿದ್ದರು. ಕರೀಕೋಟು ಧರಿಸಿದ್ದ ಲಾಯರ್‌ಗಳು ಅಪರಾಧಿಗಳ ಕುಟುಂಬದೊಡನೆ ಮಾತನಾಡುತ್ತಿದ್ದರು. ಅಲ್ಲಿ ಭಿಕ್ಷುಕರೂ ಇದ್ದರು. ಯಾರೋ ಗುಪ್ತನ ಬಳಿ ಬಂದು ಕೋರ್ಟಿನಲ್ಲಿ ವಾದಿಸಲು ಲಾಯರನ್ನು ಗೊತ್ತು ಮಾಡಿಕೊಳ್ಳಬೇಕೆಂಬ ಸೂಚನೆಕೊಟ್ಟರು. ಗುಪ್ತ, ಲಾಯರ್‌ಗಳು ಕುಳಿತಿದ್ದ ಕೊಠಡಿಗೆ ಹೋದಾಗ ಅಲ್ಲಿ ಅನೇಕ ಜನ ಲಾಯರ್‌ಗಳು ಫ್ಯಾನಿನ ಕೆಳಗೆ ಕುಳಿತು ತಮ್ಮ ಕೆಲಸದಲ್ಲಿ ನಿರತರಾಗಿದ್ದುದನ್ನು ಕಂಡ. ಮಧ್ಯ ವಯಸ್ಸಿನ ಸೌಮ್ಯ ಮುಖದ ಟೈ ಮತ್ತು ಕರೀಕೋಟು ಹಾಕಿದ ಅಲ್ಲಿದ್ದ ಒಬ್ಬ ವ್ಯಕ್ತಿ ತನಗೆ ಸರಿ ಎನಿಸಿ ಅವನ ಸಹಾಯ ಕೇಳಿದ. ಅವನು ಗುಪ್ತ, ಉಚ್ಛ್ವಾಸನೆ ಹೊಡೆಯುತ್ತಿದ್ದ ಮಹಡಿ ಮೆಟ್ಟಿಲುಗಳನ್ನು ಹತ್ತಿ ಮೇಲಿದ್ದ ಒಂದು ದೊಡ್ಡ ಕೋಣೆಗೆ ಹೋದರು. ಕೊಠಡಿಯ ಒಂದು ಗೋಡೆಯ ಮೇಲೆ ಮಾಸಿದ ಗಾಂಧಿಯ ಚಿತ್ರ ಹಿಂಭಾಗದಲ್ಲಿ 'ಸಾಕ್ಷ್ಯ' ಎಂದು ತಂದಿದ್ದ ಚೂರಿ, ಚಾಕು ಪಿಸ್ತೂಲು, ಕಳ್ಳತನವಾದ ಮಾಲುಗಳು ಇದ್ದುವು. ಕೊಠಡಿಯ ಒಂದು ತುದಿಯಲ್ಲಿ ಪ್ಲಾಟ್‌ಫಾರಂ, ಮಧ್ಯದಲ್ಲಿ ಎದುರು ಬದುರು ಬೆಂಚುಗಳು. ಗುಪ್ತ ಬೆಂಚಿನ ಮೇಲೆ ತನ್ನ ಲಾಯರ್ ಜೊತೆ ಕೂತ. ಧೋತಿ ಉಟ್ಟ ಇಬ್ಬರು ಕೋರ್ಟಿನ ಗುಮಾಸ್ತರು ಕೈಯಲ್ಲಿ ಫೈಲುಗಳನ್ನು ಹಿಡಿದುಕೊಂಡು ಬಂದರು.

"ಫ್ಯಾನ್ ಸ್ವಿಚ್ಚು ಹಾಕಿದಾಗ ಶಬ್ದ ಮಾಡುತ್ತಾ ತಿರುಗಲು ಶುರುವಾಯಿತು. ಕೊಠಡಿಯ ಹಿಂದಿನ ಬಾಗಿಲಿನಿಂದ ಕಣ್ಣಿಗೆ ಕನ್ನಡಕ ಹಾಕಿದ್ದ, ಕಪ್ಪು ನಿಲುವಂಗಿ ಧರಿಸಿದ್ದ ಜಡ್ಜ್ ಬಂದರು. ಎಲ್ಲರೂ ನಿಂತುಕೊಂಡಾಗ ಗುಪ್ತ ಕೂಡ ಬಹಳ ಕಷ್ಟಪಟ್ಟು ನಿಂತುಕೊಂಡ. ನಂತರ ಎಲ್ಲರೂ ಕುಳಿತರು. ಹಾರಾಡುತ್ತಿದ್ದ ಪಾರಿವಾಳ ಬಂದು ಜಡ್ಜ್‌ರ ಮುಂದೆ ಇಟ್ಟ ಫೈಲುಗಳ ಮೇಲೆ ಹಿಕ್ಕೆ ಹಾಕಿತು. ಗುಮಾಸ್ತನೊಬ್ಬ ಅದನ್ನು ಪಂಚೆಯ ತುದಿಯಿಂದ ಒರೆಸಿದ. ಮೆಳ್ಳೆಗಣ್ಣು ಹೊಂದಿದ ಪಬ್ಲಿಕ್ ಪ್ರಾಸಿಕ್ಯೂಟರ್ ಪೊಲೀಸ್ ಅಧಿಕಾರಿಯೊಡನೆ ಆಗಮಿಸಿದ.

"ಹ್ಯಾರಿಂಗ್‌ಟನ್ ರಸ್ತೆಯಲ್ಲಿ ಪೊಲೀಸ್ ನವನೊಬ್ಬನನ್ನು ಹೊಡೆದ ಅಪರಾಧ ಗುಪ್ತನ ಮೇಲೆ ಹೊರಿಸಿ ಬರೆದಿದ್ದನ್ನು ಒಬ್ಬ ಓದಿದ. ಅನಂತರ ಜಡ್ಜ್ ಗುಪ್ತನ ಲಾಯರನ್ನು 'ಹೇಳುವುದೇನಾದರೂ ಇದೆಯೇ?' ಎಂದು ಕೇಳಿದಾಗ, ಗುಪ್ತ ನಿಗೆ ತಾನೇ ಮಾತನಾಡಬೇಕೆನ್ನಿಸಿತು. ಲಾಯರ್‌ನ ಭುಜ ಹಿಡಿದು ನಿಂತು, ಪೊಲೀಸರು ತನ್ನ ಮೇಲೆ ಮಾಡಿದ ದೌರ್ಜನ್ಯವನ್ನು ಎಷ್ಟು ಪರಿಣಾಮಕಾರಿ ಯಾಗಿ ಅವನು ವಿವರಿಸಿದನೆಂದರೆ ಕೊಠಡಿ ಯಲ್ಲಿದ್ದವರ ಕಣ್ಣುಗಳಲ್ಲಿ ನೀರು ತುಂಬಿತು. ಪಬ್ಲಿಕ್ ಪ್ರಾಸಿಕ್ಯೂಟರ್ ಏನೋ ಹೇಳಲು ಹೊರಟ, ನ್ಯಾಯಾಧೀಶರಿಗೆ ಕೇಸಿನ ಬಗ್ಗೆ ಪೂರ್ತಿಗೊತ್ತಾಗಿ, ಗುಪ್ತ ಅಪರಾಧಿಯಲ್ಲ, ಅವನನ್ನು ವಿಮುಕ್ತಗೊಳಿಸಿ ಎಂದು ಹೇಳಿದುದರ ಜೊತೆಗೆ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡ ಅವನ ರಿಕ್ಷಾವನ್ನು ಕೊಡುವಂತೆ ಆಜ್ಞೆ ಮಾಡಿದರು.

"ಕೋರ್ಟಿನಲ್ಲಿ ಹಿಯರಿಂಗ್ ನಡೆದದ್ದು ಹತ್ತೇ ನಿಮಿಷ, ಗುಪ್ತನ ಬಿಡುಗಡೆಯಾದ ಸುದ್ದಿ ಕಾಳ್ಗಿಚ್ಚಿನಂತೆ ಊರೆಲ್ಲಾ ಹರಡಿತು. ರಿಕ್ಷಾ ಎಳೆಯುವವರ ಸಂಘದ ಗುಲಾಮ್ ರಸೂಲ್ ಮತ್ತು 'ಗಾಯದ ಮೋರೆಯ ವನು' ಒಂದು ರೈಟರ್ಸ್ ಬಿಲ್ಡಿಂಗ್‌ನ ಮುಂಭಾಗದಲ್ಲಿ ಪೊಲೀಸರ ವಿರುದ್ಧ ಪ್ರದರ್ಶನ ನಡೆಸಬೇಕೆಂದು ಹೇಳಿದರು.

"ಮಧ್ಯಾಹ್ನ ಪಾರ್ಕ್ ಸ್ಟ್ರೀಟ್‌ನಿಂದ ಮೆರವಣಿಗೆ ಹೊರಟಿತು. ಕೆಂಪು ಬಾವುಟ ಮತ್ತು ಬ್ಯಾನರ್‌ಗಳನ್ನು ಹಿಡಿದುಕೊಂಡ ವಾಮಪಂಥೀಯರು ಮುಂದುಗಡೆ ಇದ್ದರು. ಹೂವು ಮತ್ತು ಕೆಂಪು ಬಾವುಟಗಳಿಂದ ಅಲಂಕೃತವಾದ ರಿಕ್ಷಾದಲ್ಲಿ ಗುಪ್ತನನ್ನು ಕೂರಿಸಿದ್ದರು. ರಿಕ್ಷಾ ಯಾವುದು ಗೊತ್ತೇ? ಹಜಾರಿಪಾಲ್‌ನ ೧೯೪೯ನೇ ನಂಬರ್‌ನ ರಿಕ್ಷಾ, ಎಳೆಯುತ್ತಿದ್ದವನು ಹಜಾರಿಪಾಲ್. ದಾರಿಯಲ್ಲಿ ಮೆರವಣಿಗೆಗೆ ಅನೇಕರು ಸೇರಿ ದರು. ಕಮ್ಯುನಿಸ್ಟರು ಸ್ಲೋಗನ್ನುಗಳನ್ನು ಕೂಗುತ್ತಾ ಜೊತೆಗೆ ಬರುತ್ತಿದ್ದರು. ಮೆರವಣಿಗೆ ಡಾಲ್‌ಹೌಸಿ ಚೌಕಕ್ಕೆ ಬರಲು ಮೂರು ಗಂಟೆಯಾಯಿತು. ಪೊಲೀಸ್ ಆಫೀಸರ್ ಒಬ್ಬ ಬಂದು 'ಮುಖ್ಯಮಂತ್ರಿ ಯವರಿಗೆ' ನಿವೇದಿಸಿಕೊಳ್ಳುವುದು ಏನಾ ದರು ಇದೆಯೇ?" ಎಂದು ಕೇಳಿದ, ಅತುಲ್ ಗುಪ್ತ 'ಮುಖ್ಯಮಂತ್ರಿಯವರನ್ನು ನೋಡ ಬೇಕು' ಅಂದ, ಕೆಲವೇ ನಿಮಿಷಗಳ ತರುವಾಯ ಆ ಪೊಲೀಸ್ ಆಫೀಸರ್ ಬಂದು ಹೇಳಿದ 'ಮುಖ್ಯಮಂತ್ರಿಯವ ರನ್ನು ನೀವು ನೋಡಬಹುದು. ಆದರೆ ನಿಮ್ಮ ಪೈಕಿ ನಾಲ್ಕು ಜನ ಮಾತ್ರ ಹೋಗಿ ನಿಮ್ಮ ಅಹವಾಲನ್ನು ಅವರಿಗೆ ತಿಳಿಸ ಬಹುದು.'

"ರಸೂಲ್, ಗುಪ್ತ ಮತ್ತು ಇಬ್ಬರು ಪಾರ್ಟಿನಾಯಕರು ಮುಖ್ಯಮಂತ್ರಿಯವರ ಛೇಂಬರ್‌ಗೆ ಹೋದರು. ಅರ್ಧಗಂಟೆ ಮಾತು ಕತೆ ನಡೆದ ನಂತರ ತೃಪ್ತಿಯಿಂದ ಅವರು ಹೊರಬಂದರು. ಗುಪ್ತ ನೆರೆದಿದ್ದವರಿಗೆ, 'ಮಾನ್ಯ ಮುಖ್ಯಮಂತ್ರಿಯವರು ನಮಗೆ ಆಶ್ವಾಸನೆ ಕೊಟ್ಟಿದ್ದಾರೆ—'ಇನ್ನು ಮೇಲೆ ಪೊಲೀಸರ ದೌರ್ಜನ್ಯ ಇರುವುದಿಲ್ಲ.' ಜನ ರೆಲ್ಲಾ ಚಪ್ಪಾಳೆ ತಟ್ಟಿದರು, ಗುಪ್ತ ನಂತರ ಹೇಳಿದ, 'ಮುಖ್ಯಮಂತ್ರಿಯವರು ನನ್ನನ್ನು ಗೋಳು ಹೊಯ್ದುಕೊಂಡ ಪೊಲೀಸರನ್ನು ಶಿಕ್ಷಿಸುವುದಾಗಿ ಮಾತು ಕೊಟ್ಟಿದ್ದಾರೆ.

ಗುಪ್ತ, ರಸೂಲ್ ಮತ್ತು ಇಬ್ಬರು ನಾಯಕರಿಗೆ ಹೂವಿನಹಾರ ಹಾಕಿದರು. ನಂತರ ಅಲ್ಲಿ ಸೇರಿದ್ದವರು ಅವರವರ ಮನೆಗೆ ಹೊರಟರು. ಗುಪ್ತ ಹಜಾರಿಯ ರಿಕ್ಷದ ಮೇಲೆ ಕುಳಿತ. ಗಂಗೂಲಿ ಬೀದಿಯಲ್ಲಿದ್ದ ಬಾರ್ ಒಂದಕ್ಕೆ ಅವರು ತಮಗಾದ ಗೆಲುವು ಮತ್ತು ಸಂತೋಷವನ್ನು ಆಚರಿಸಲು ಹೊರಟರು. ಅವರು ವಾಪಸ್ಸು ಬರುತ್ತಿರುವಾಗ ಹಜಾರಿಗೆ ಸೈಕಲ್ ಟೈರ್ ಬರ್ಸ್ಟ್ ಆದ ಶಬ್ದ ಕೇಳಿಸಿತು. ಹಿಂದೆ ನೋಡಿದ, ಗುಪ್ತನ ತಲೆಯ ಮೇಲೆ ಮತ್ತು ಎದೆಯ ಮೇಲೆ ಯಾರೋ ಹೊಡೆದಿದ್ದರು. ಗುಪ್ತನ ಕಿವಿಯಿಂದ ರಕ್ತ ಬರುತ್ತಿತ್ತು. ಗುಪ್ತ ಏನೋ ಹೇಳಲು ಹೊರಟ. ಆದರೆ ಆಗಲೆ ಕಣ್ಣು ಮುಚ್ಚಿಕೊಂಡ.

"ನಮ್ಮ ಶತ್ರುಗಳು ಪ್ರತೀಕಾರ ತೆಗೆದುಕೊಂಡಿದ್ದರು. ನಮ್ಮ ನಾಯಕನನ್ನು ನಮ್ಮಿಂದ ಕಸಿದುಕೊಂಡಿದ್ದರು."



ಭೂಲೋಕದಲ್ಲಿ ಏನನ್ನು ಸಾಧಿಸಬೇಕಾದರೂ ಮೊದಲು ಅದನ್ನು ಭಾವಲೋಕದಲ್ಲಿ ಬಿತ್ತಬೇಕು. ಮೈಯಲ್ಲಿ ಯಾವ ಪರಿವರ್ತನೆಯಾಗಬೇಕಾಗಿದ್ದರೂ ಅದು ಮೊದಲು ಮನದಲ್ಲಿ ಮೊಳೆತು ಬೇರೂರಬೇಕು.

—ಕುವೆಂಪು

ಪ್ರತಿ ಮನುಷ್ಯನ ಜೀವಮಾನವೂ ದೇವರ ಕೈಯಲ್ಲಿ ಬರೆಯಲ್ಪಟ್ಟ ಅದ್ಭುತವಾದ ಕಥೆ.

—ಅಂಡರ್‌ಸನ್

ಆಹಾರ ಸೇವನೆ

ಡಾ|| ಶ್ರೀವೆಂಕಟರಮಣ
ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾನಿಲಯ
ಜ್ಞಾನಭಾರತಿ, ಬೆಂಗಳೂರು-೫೬೦ ೦೫೬

ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆ ಮಾತಿನ ಮರ್ಮವೇನು? ನಾಲಗೆಯ ಮೇಲಿನ ಹತೋಟಿ. ಇದರಿಂದ ಬದುಕು ಸುಖಮಯವಾಗುತ್ತದೆ. ಹತೋಟಿ ತಪ್ಪಿದರೆ? ಇಳಿಜಾರಿನಲ್ಲಿ ವಿಫಲವಾದ ಬಂಡಿಯಂತೆ ಧಾವಿಸಿ ಅಪಘಾತದಲ್ಲಿ ಕೊನೆಯಾಗುತ್ತದೆ.

ಉಣ್ಣುವುದು ನಿತ್ಯದ ಕರ್ಮ. 'ಅಯ್ಯೋ, ನಮ್ಮ ಕರ್ಮ!' ಎನ್ನುವಂತಲ್ಲ, ಪ್ರತಿದಿನದ ಪರಿಪಾಠವೆನ್ನುವ ಅರ್ಥದಲ್ಲಿ. ನಮಗೆ ಬೇಜಾರು ತರದ ಕೆಲವೇ ವಿಚಾರಗಳಲ್ಲಿ ಊಟಕ್ಕೆ ಎರಡನೆ ಸ್ಥಾನ (ಮೊದಲನೆಯದು ನಿದ್ದೆಗೆ). ಜನರನ್ನು ಕೆಲವೊಮ್ಮೆ ಎರಡಾಗಿ ವಿಭಾಗಿಸುವುದಿದೆ– ಬದುಕಲು ಉಣ್ಣುವವರು ಯಾ ಉಣ್ಣಲು ಬದುಕುವವರು. ಪ್ರಕೃತಿ ನಮ್ಮನ್ನು ಮೊದಲ ವಿಭಾಗದಲ್ಲಿರಲು ರಚಿಸಿದೆ. ಆದರೆ ಹಲವರು ಸ್ವೇಚ್ಛೆಯಿಂದ ಬಕಾಸುರ ಪ್ರವೃತ್ತಿ ಬೆಳೆಸಿಕೊಂಡು ಎರಡನೆ ಗುಂಪಿಗೆ ಸೇರಿಬಿಡುವುದಿದೆ. ಮನುಷ್ಯನಲ್ಲದೆ ಇತರ ಯಾವುದೇ ಪ್ರಾಣಿಯಲ್ಲಿ ಅತಿ ತಿನ್ನುವ ಹವ್ಯಾಸ ಕಂಡು ಬರದು. ಚಾರ್ವಾಕರು 'ಋಣಂ ಕೃತ್ವಾಪಿ ಘೃತಂ ಪಿಬೇತ್' ಎಂದು ಸಾರುವ ಮೂಲಕ ತಿಂಡಿಪೋತರ ಪಂಗಡಕ್ಕೆ ಉತ್ತೇಜನ ನೀಡಿದ್ದೇನೋ ನಿಜ. 'ಈಗ ಮಜಾ ಮಾಡಿ, ಮುಂದಿನದ್ದನ್ನು ಮುಂದೆ ನೋಡೋಣ' ಎನ್ನುವ ದೂರದೃಷ್ಟಿಯ ಅಭಾವವಿದು. ಆರೋಗ್ಯಕರ ಜೀವನಕ್ಕೆ ನಾವು ಎಷ್ಟು ತಿನ್ನಬೇಕು, ಹೇಗೆ ತಿನ್ನಬೇಕು, ಏನನ್ನು ತಿನ್ನಬೇಕು ಮತ್ತು ಯಾವಾಗ ತಿನ್ನಬೇಕು? ಈ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಪಡೆಯಲು ಪ್ರಾಮಾಣಿಕ ಪ್ರಯತ್ನವನ್ನು ಈಗ ಮಾಡೋಣ. ಹಾಸ್ಯದ ಲೇಪವಿದ್ದರೂ ಈ ವಿಚಾರ ಗಂಭೀರವೇ. ಇದು ಜೀವನ-ಮರಣಗಳ ಪ್ರಶ್ನೆಯೂ ಹೌದು!

ಮಾನವನ ಮೂಲಭೂತ ಆವಶ್ಯಕತೆಗಳಲ್ಲಿ ಆಹಾರವೊಂದು. ನಮಗೆ ಎಷ್ಟು ಆಹಾರ ಆವಶ್ಯ? ಇದರ ಆರೋಗ್ಯಕರ ಪರಿಣಾಮವನ್ನು ನಿರ್ಧರಿಸಲು ಒಂದು ಸರಳ ಸೂತ್ರವಿದು. ನಮ್ಮ ಹೊಟ್ಟೆಯ ಗಾತ್ರವನ್ನು ಸರಿಸುಮಾರು ನಾಲ್ಕು ಸಮಭಾಗ ಮಾಡಿಕೊಂಡು–ಎರಡರಷ್ಟನ್ನು ಘನಾಹಾರದಿಂದ (ಉದಾ: ಅನ್ನ, ಚಪಾತಿ, ತರಕಾರಿ, ಹಣ್ಣು,) ಒಂದನ್ನು ದ್ರವಾಹಾರ

ದಿಂದ (ಉದಾ : ನೀರು) ಭರ್ತಿಮಾಡಿಕೊಳ್ಳಬೇಕು. ಇನ್ನೊಂದಂಶ ಖಾಲಿಯಾಗಿಯೇ ಇರಬೇಕು. ಅದು ಗಾಳಿಗೆ ಅವಕಾಶ. ಜೊತೆಗೆ ಪಚನಕ್ರಿಯೆಯಲ್ಲಿ ಆಹಾರವನ್ನು ಹದವಾಗಿ ಮಿಶ್ರಗೊಳಿಸಲು, ತನ್ನ ರಸಗಳನ್ನು ಸ್ರವಿಸಿ ಬೆರೆಸಲು ಜಠರಕ್ಕೆ ಅವಶ್ಯವಿರುವ ಸ್ಥಳಾವಕಾಶ. ಒಂದು ಸರಳ ನಿದರ್ಶನ ಕೊಡುವುದಾದರೆ, ಸರಿಯಾಗಿ ಒಂದು ಕಿಲೋ ಗೋಧಿಹಿಟ್ಟು ಹಿಡಿಸುವ ಪಾತ್ರೆಯಲ್ಲಿ ಅಷ್ಟೂ ಹಿಟ್ಟನ್ನು ನೀರು ಬೆರೆಸಿ ಒಮ್ಮೆಗೇ ಕಲಸಲು ಸಾಧ್ಯವೇ? (ಏನೂ ಚೆಲ್ಲದಂತೆ!). ಇಂಥ ಸ್ಥಳಾವಕಾಶ ಇದ್ದರೆ ಮಾತ್ರ ನಾವು ತಿಂದದ್ದನ್ನು ಜೀರ್ಣಿಸಲು ಜಠರಕ್ಕೆ ಅನುಕೂಲವಾಗುತ್ತದೆ. ಬದಲಾಗಿ, ನಗರ ಸಾರಿಗೆ ಬಸ್ಸುಗಳಲ್ಲಿ ಈಗೀಗ ಜನತುಂಬುವಂತೆ ಆಹಾರವನ್ನು, ಅದು ಎಷ್ಟೇ ಉತ್ತಮ ದರ್ಜೆಯದ್ದಿರಲಿ, ಹೊಟ್ಟೆ ಬಿರಿಯುವಂತೆ ತುಂಬಿದರೆ ಅದರಿಂದಾಗಿ ತಾಪತ್ರಯ ಆರಂಭವಾಗುವುದು ಖಾತ್ರಿ, ಇಂದಿಲ್ಲ ನಾಳೆ! ಆಹಾರವಸ್ತು ಮನೆಯದಿರಲಿ, ಸಭೆ ಸಮಾರಂಭಗಳಲ್ಲಿ ಪುಕ್ಕಟೆ ಬಡಿಸಿದ್ದಿರಲಿ, ಉಪಾಹಾರ ಮಂದಿರಗಳಲ್ಲಿ ನಾವು ಯಾ ಇನ್ನು ಯಾರೋ ಬಿಲ್ ಪಾವತಿ ಮಾಡುವ ಸಂದರ್ಭದ್ದಿರಲಿ ಪರಿಸ್ಥಿತಿ ಬದಲಾಗಬಾರದು. ಇಲ್ಲಿಯ ಮುಖ್ಯ ವಿಚಾರ ಹೊಟ್ಟೆ ಯಾರದು, ಅದರ ಕಾಳಜಿ ಯಾರು ವಹಿಸಬೇಕು ಎಂಬುದು. ಈ ಪ್ರಶ್ನೆಗೆ ಉತ್ತರ ಸ್ಪಷ್ಟವಿದ್ದರೆ ಅತಿ ಆಹಾರ ಸೇವನೆಯ ದುಡುಕನ್ನು ನಿವಾರಿಸಲು ಸುಲಭ.

ತಿಂಡಿತಿನಿಸು ರುಚಿಕರವಾಗಿದ್ದರೆ ಆಹಾರ ಮಿತಿಯನ್ನು ಉಲ್ಲಂಘಿಸುವುದು ಅನಾಯಾಸ–ಆದರೆ ಅದು ಆಯಾಸಪ್ರದ. ಇಂಥ ಸಂದರ್ಭದಲ್ಲಿ 'ಇನ್ನೂ ಒಂದಿಷ್ಟು ಬೇಕು' ಎಂದನಿಸುತ್ತಿರುವಾಗಲೇ ತಿನ್ನುವ ಹಾಡು ಕಛೇರಿಗೆ ಮಂಗಳ ಹಾಡಬೇಕು. ಉದಾಹರಣೆಗೆ, ಮಸಾಲೆದೋಸೆ, ತಿನ್ನುವ (ಮುಕ್ಕುವ ಅಲ್ಲ!) ಸನ್ನಿವೇಶವನ್ನು ಗಮನಿಸಿ. ದೋಸೆ ನಿಮ್ಮ ಮನೆಯದು. ಮೂರು ನಾಲ್ಕು ದೋಸೆಗಳು ಈಗಾಗಲೇ ನಿಮ್ಮೊಳಗೆ ನುಗ್ಗಿವೆ. 'ಇನ್ನೂ ಒಂದನ್ನು ತಿನ್ನಬೇಕು. ಒತ್ತಾಯ ಬಂದರೆ ಎರಡು' ಎಂದು ನೀವು ಮನಸ್ಸಿನಲ್ಲಿ ಲೆಕ್ಕಾಚಾರ ನಡೆಸಿದ್ದೀರಿ–ಆ ಮೇಲಿನ ಒಳ ಒತ್ತಡವನ್ನು ಮುಂಗಾಣದೆ. ನಿಜ ಸಂಗತಿಯೆಂದರೆ ತಿನ್ನುವ ಪ್ರಕ್ರಿಯೆಯನ್ನು ಸದ್ಯಕ್ಕೆ ನಿಲ್ಲಿಸಲು ಇದೇ ಸಕಾಲ, ನಿಮ್ಮ ಲೆಕ್ಕಾಚಾರವನ್ನು ಕಡೆಗಣಿಸಿ!

ಜಿಲೇಬಿ, ಲಡ್ಡುಗಳನ್ನು ಕಬಳಿಸುವ ಸನ್ನಿವೇಶದಲ್ಲಿ 'ಇನ್ನೂ ತಿನ್ನಬೇಕು' ಎನ್ನುವ ಒತ್ತಾಸೆಯನ್ನು ಹತ್ತಿಕ್ಕುವುದು ಸಾಮಾನ್ಯರಿಗೆ (ಅಂದರೆ ನಮ್ಮೆಲ್ಲರಿಗೆ!) ಕಷ್ಟ. ಮಧುಮೇಹಿಗಳಿಗೆ ಇದು ವಿಪರೀತ ಕಷ್ಟ. ಆದರೆ ಒಂದೇ ಒಂದು ಲಡ್ಡುವಿನಿಂದ ಅನೇಕದ ಸಂತಸ, ಸಂತೃಪ್ತಿ ತರಿಸಲು ಸಾಧ್ಯ. ಇದೊಂದು ರಹಸ್ಯ. ಏನೆಂದರೆ, ಆ ಸಿಹಿ ಪದಾರ್ಥವನ್ನು ನಿಧಾನವಾಗಿ, ಚೂರು ಚೂರಾಗಿ ಮೆಲ್ಲುತ್ತ ಬಾಯಿಯೊಳಗೆ ಇತ್ತಿಂದತ್ತ, ಅತ್ತಿಂದಿತ್ತ ಓಡಾಡಿಸಬೇಕು, ನಮ್ಮ ಘನ ಸರ್ಕಾರಿ ಕಛೇರಿಗಳಲ್ಲಿ ಕಡತಗಳನ್ನು ಒಂದು ಮೇಜಿನಿಂದ ಇನ್ನೊಂದಕ್ಕೆ, ಅದರಿಂದ ಮತ್ತೆ ಮೊದಲನೆಯದಕ್ಕೆ ಕಡತ ಭೃತ್ಯರು ಓಡಾಡಿಸುವಂತೆ. ಆಗ ತಮಗೆ ಈ ತಿನಿಸಿನಿಂದ ಮಹದಾನಂದ

ಖಂಡಿತ, ಅದು ಬಾಯಿಯಲ್ಲಿರುವಷ್ಟು ಹೊತ್ತು. ಅಂದರೆ ಒಂದೇ ಲಡ್ಡುವಿನಿಂದ ಹತ್ತರ ತೃಪ್ತಿ, ಒಂಭತ್ತು ಲಡ್ಡುಗಳ ಲಾಭ (ದೇಹಕ್ಕೆ ಮತ್ತು ದೇಶಕ್ಕೆ!)

ಆಹಾರವನ್ನು ಸರಿಯಾಗಿ ಜಗಿಯುವುದು, ಅದು ಸುಲಭವಾಗಿ ಜೀರ್ಣವಾಗಲು ಅತ್ಯವಶ್ಯ. ಅಂಥ ಆಹಾರ ಬಾಯಿಯಲ್ಲೇ ೬೦-೭೦ ಶೇಕಡ ಜೀರ್ಣವಾದಂತೆಯೇ. ಈ ಪ್ರಕ್ರಿಯೆಯಲ್ಲಿ ಜೊಲ್ಲುರಸ ಕೂಡ ಸರಿಯಾಗಿ ಆಹಾರದೊಂದಿಗೆ ಬೆರೆಯುವುದು. ಅದಲ್ಲದೆ ನಿಮಗೆ ಇಷ್ಟವಿರುವ ಆಹಾರದ ಆನಂದವನ್ನು, ಅದು ಬಾಯಿಯಲ್ಲಿರುವಷ್ಟು ದೀರ್ಘಕಾಲ, ಪಡೆದ ಧನ್ಯರೂ ನೀವಾಗುವಿರಿ—ಹೊಟ್ಟೆಗೆ ಕಷ್ಟ ಕೊಡದೆಯೇ. ನಮ್ಮ ಹಿರಿಯರೊಬ್ಬರು ಹೇಳುತ್ತಿದ್ದ ಮಾತಿದು, 'ನಾವು ಘನ ಆಹಾರವನ್ನು ಮೂವತ್ತೆರಡು ಬಾರಿ ಜಗಿಯಬೇಕು. ಭಗವಂತ ನಮಗೆ ಮೂವತ್ತೆರಡು ಹಲ್ಲುಗಳನ್ನು ದಯಪಾಲಿಸಿರುವುದು ಅದಕ್ಕಾಗಿಯೇ.' (ಕಡಿಮೆ ಹಲ್ಲುಗಳಿರುವವರು ಕಡಿಮೆ ಜಗಿದರೆ ಸಾಕೇ, ಎನ್ನುವ ಪ್ರಶ್ನೆ ಇಲ್ಲಿ ಅಪ್ರಸ್ತುತ!)

ನಾವು ತಿಂದಿದ್ದು ಸಾಕೆಂಬ ಸೂಚನೆಯನ್ನು ಬುದ್ಧಿಯ ಮೂಲಕ ಉದರ ನಮಗೆ ಸ್ಪಷ್ಟವಾಗಿ ನೀಡುತ್ತದೆ. ಅದನ್ನು ನಾವು ಗಮನಿಸಿ, ಗೌರವಿಸಬೇಕು ಅಷ್ಟೇ. ತಿಂಡಿಯ ರುಚಿ ಬರಬರುತ್ತ 'ಕಡಿಮೆಯಾಗುವುದು' ಒಂದು ಸೂಚನೆ. ಉದಾಹರಣೆಗೆ ಊಟದಲ್ಲಿ ಮೊದಲ ಹೋಳಿಗೆಗಿರುವ ರುಚಿ ಎರಡನೆಯದ್ದಕ್ಕಿರದು, ಮೂರನೆಯದಕ್ಕೆ ಇನ್ನೂ ಕಡಿಮೆ—ನಾಲ್ಕನೆಯದು ಕಹಿಯೆನಿಸಬಹುದು! ನಿಮ್ಮಾಕೆಯೇ ಬಡಿಸಿದರೂ! ಕ್ಷೀಣಿಸುವ ಉಪಯುಕ್ತತಾ ನಿಯಮಕ್ಕೆ ಇದು ಸರಳ ನಿದರ್ಶನ. ಅಂದರೆ ಒಂದು, ಬೇಕು ಎರಡು ಸಾಕು ಎನ್ನುವ ಸಂದೇಶ ಇಲ್ಲಿ. ಇದನ್ನು ಎಡವಿದರೆ ಮುಂದೆ ಬುದ್ಧಿ ನೀಡುವ ಎರಡನೆ ಸೂಚನೆ ತೇಗು. 'ಸದ್ಯಕ್ಕೆ ಸಾಕು' ಎನ್ನುವ ಸ್ಪಷ್ಟ ಆದೇಶ; ಮೂರ್ಖರಿಗೂ ಅರ್ಥವಾಗುವಂತಹದ್ದು—ಹೋಳಿಗೆ ಬಡಿಸುವವರೂ ಇದನ್ನು ಗಮನಿಸತಕ್ಕದ್ದು! ಇದನ್ನೂ ಗಣನೆಗೆ ತೆಗೆದುಕೊಳ್ಳದೆ ತಮ್ಮ ತಿನ್ನುವ ಆಟದಲ್ಲಿ ವಿಜೃಂಭಿಸುವ ಹೊಟ್ಟೆಬಾಕರಿಗೆ ತನ್ನ ಕೊನೆಯ ಅಸ್ತ್ರವಾಗಿ ವಾಂತಿಯೋ, ಭೇದಿಯೋ ಆಗಿಸುವ ಮೂಲಕ ಪ್ರಕೃತಿ ತನ್ನ ತೀವ್ರ ಅಸಂತುಷ್ಟಿಯನ್ನು ತಿಳಿಯಪಡಿಸುತ್ತದೆ. ಅದೊಂದು ಆಪತ್ಕಾಲೀನ ಕ್ರಮ.

ಆಹಾರ ಸೇವನೆಗಳ ನಡುವೆ ಮೂರು-ನಾಲ್ಕು ಗಂಟೆಗಳ ಅಂತರ ಅವಶ್ಯ. ಒಮ್ಮೆ ತಿಂದುದನ್ನು ಅರಗಿಸಿ ಮುಂದೆ ಕರುಳಿಗೆ ತಳ್ಳಲು ಜಠರಕ್ಕೆ ಇದು ಅವಶ್ಯವಿರುವ ಅವಕಾಶ. ಪದೇ ಪದೇ ತಿನ್ನುತ್ತಿದ್ದರೆ ಅರ್ಧ ಜೀರ್ಣ ಆಹಾರಕ್ಕೆ ಹೊಸತು ಸೇರಿ ಹೊಟ್ಟೆಯ ಜೀರ್ಣಕ್ರಿಯೆಯಲ್ಲಿ ಗೊಂದಲವಾಗುವುದು. ಬೆನ್ನು-ನೋವಿನಿಂದ ಬಳಲುತ್ತಿರುವವರಿಗೆ ಮೇಲಿಂದ ಜ್ವರವೂ ಬಂದ ಹಾಗೆ. ಇನ್ನು, ತಿನಿಸಿದ ದಿನಚರಿ ಹೇಗಿರಬೇಕು? ಗಟ್ಟಿಮುಟ್ಟಾಗಿದ್ದು ದೈಹಿಕ ಕೆಲಸ ಮಾಡುವ ವ್ಯಕ್ತಿಗಳು ಬೆಳಿಗ್ಗೆ ಲಘು ಉಪಾಹಾರ, ಮಧ್ಯಾಹ್ನ ಲಘು ಆಹಾರ, ಸಂಜೆ ಮುಖ್ಯ ಊಟ ಮಾಡುವುದು ಒಳ್ಳೆಯದು ಎನ್ನುವ ಅಭಿಪ್ರಾಯವಿದೆ. ದೈಹಿಕ ಕೆಲಸ ಕಡಿಮೆಮಾಡುವವರು

ಎರಡು ಹೊತ್ತು ಆಹಾರ ಸೇವಿಸಿದರೂ ಸಾಕು. ಏಕಾದಶಿ ಇತ್ಯಾದಿ ವ್ರತಗಳೂ ಹಿತಕರ—ಭಗವಂತನಿಗೆ ಮತ್ತು ನಮಗೆ ಕೂಡ! ಅದಲ್ಲದೆ ದಿನವೂ ೬-೮ ಲೋಟಗಳಷ್ಟು (ಹೊಟೆಲಿನ ಕಾಫಿ ಲೋಟವಲ್ಲ, ಮನೆಯದು) ಶುದ್ಧ ನೀರಿನ ಸೇವನೆ ಅವಶ್ಯ–ಜೀರ್ಣಕ್ರಿಯೆಗೆ, ದೇಹದ ತಾಪಮಾನ ಕಾಪಾಡಲು, ಮೂತ್ರದ ಮೂಲಕ ಕಲ್ಮಶವನ್ನು ಹೊರಹಾಕಲು, ಇತ್ಯಾದಿಗಾಗಿ. ಮನುಷ್ಯ ದೇಹದಲ್ಲಿ ೮೦% ದ್ರವಾಂಶವಿದೆ ಎಂಬುದನ್ನು ನಾವು ನೆನಪಿಡಬೇಕು. ಪ್ರತಿ ಬೆಳಗ್ಗೆ ೧-೨ ಲೋಟದಷ್ಟು ಶುದ್ಧ ನೀರಿನ ಸೇವನೆಯಿಂದ ದಿನಚರಿಯನ್ನು ಶುರುಮಾಡುವುದು ಹಿತಕರ. ಇದರಿಂದ ದೇಹ ಒಳಸ್ನಾನ ಮಾಡಿಸುವ ಫಲವಿದೆ.

ನಮ್ಮ ಆಹಾರದಲ್ಲಿ ಸೊಪ್ಪು, ಹಣ್ಣುಹಂಪಲು ಮತ್ತು ಹಸಿರು (ಬೇಯಿಸದ) ತರಕಾರಿ ಮತ್ತು ಮೊಳಕೆ ಕಾಳುಗಳುಗಳಿಗೆ ಸ್ಥಾನಕೊಡುವುದು ತುಂಬ ಒಳ್ಳೆಯದು–ಅವಕ್ಕಾಗಿ ಅಲ್ಲ, ನಮಗಾಗಿ ಮತ್ತು ವೈದ್ಯರ ಆದಾಯವನ್ನು ಇಳಿಸಲು. ಶಾಲಾಮಟ್ಟದ ವಿಜ್ಞಾನ ಪುಸ್ತಕಗಳು ಘಂಟಾಘೋಷವಾಗಿ ಸಾರುವ ಸಮತೂಕದ ಆಹಾರದ ಸಂದೇಶವಿದು. ನಾವು ಶಾಲೆಗಳಲ್ಲಿ ಓದಿದ ಇದನ್ನು ಜ್ಞಾಪಿಸಿಕೊಂಡು (ಮರೆತಿದ್ದರೆ ಮನೆಯ ಕಿರಿಯರಿಂದ ಮತ್ತೆ ಹೇಳಿಸಿಕೊಂಡು) ಅನುಷ್ಠಾನಕ್ಕೆ ತರಬೇಕು.

ಇನ್ನೊಂದು ಕೊನೆಯ ಮಾತು. ಮಾನವನಿಗೆ ಸಸ್ಯಾಹಾರ ಸರಿಯೇ, ಮಾಂಸಾಹಾರವೇ? ಇದನ್ನು ನೈತಿಕದೃಷ್ಟಿಯಿಂದ ವಿಶ್ಲೇಷಿಸುವುದನ್ನು ಇಲ್ಲಿ ಬಿಟ್ಟುಬಿಡೋಣ. ಆದರೆ ಮಾನವನ ದೇಹ ರಚನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ–ಹಲ್ಲು ಮತ್ತು ದವಡೆಗಳ ರಚನೆ, ಕರುಳಿನ ಉದ್ದ ಮತ್ತು ದೇಹದೆತ್ತರಗಳ ನಿಷ್ಪತ್ತಿ ಮುಂತಾದ ಅಂಶಗಳು–ನರ ವಾನರನನ್ನು ಹೋಲುತ್ತಾನೆ (ನಾರಿ ಕೂಡ!), ಹೊರತು ಹುಲಿ ಸಿಂಹಗಳನ್ನಲ್ಲ. ಈಗ ಮೇಲಿನ ಪ್ರಶ್ನೆಗೆ ಸೂಕ್ತ ಉತ್ತರವನ್ನು ನೀವೇ ನಿರ್ಧರಿಸಿ.

ಈ ಕಿರು ಲೇಖನದ ಆರಂಭದಲ್ಲಿ ಪ್ರಸ್ತಾಪಿಸಿದ ನಾಲ್ಕು ಪ್ರಶ್ನೆಗಳಿಗೆ ಉತ್ತರ ಚುಟುಕಾಗಿ ಈಗ ದೊರೆತಂತಾಯಿತು ಎಂದು ಭಾವಿಸೋಣವೇ? ಇನ್ನೊಂದು ಮುಖ್ಯ ವಿಚಾರವಿದೆ–ಅದು ಸರಿಯಾದ ರೀತಿಯ ಶ್ವಾಸೋಛ್ವಾಸದ (ಪ್ರಾಣಾಯಾಮ ಇತ್ಯಾದಿಯ) ಕುರಿತು ಇದನ್ನು ಮುಂದೊಂದು ಬಾರಿ ವಿಚಾರ ಮಾಡೋಣ, ಆಗದೇ?

ಈ ಲೇಖನದ ಸಂದೇಶದ ಸುತ್ತ ಹೆಣೆದಿರುವ ಮೂರು ಉಕ್ತಿಗಳನ್ನು ಕೆಳಗೆ ಕೊಟ್ಟಿದೆ. ಓದಿ, ಯೋಚಿಸಿ, ನಿಮಗೆ ಅನಿಸಿದ ಹಾಗೆ ಅವಕ್ಕೆ ಪ್ರತಿಕ್ರಿಯಿಸಿ.

೧. ವಯಸ್ಸು ಐವತ್ತಾಗುವ ವರೆಗೆ ನಾವು ಊಟವನ್ನು ತಿನ್ನುತ್ತೇವೆ. ಬಳಿಕ ಊಟ ನಮ್ಮನ್ನು ತಿನ್ನುತ್ತದೆ.

೨. ತೀರ ಬೊಜ್ಜು ಬೆಳೆದಿದ್ದ ತನ್ನ ಪತಿರಾಯನನ್ನು ಒಬ್ಬಾಕೆ ವೈದ್ಯರ ಬಳಿ ಕರೆತಂದು, ಇವರ ದೇಹದ ತೂಕ ಇಳಿಯಲು ಏನಾದರೂ ಮಾಡಿ, ಡಾಕ್ಟ್ರೇ' ಎಂದು ಬೇಡಿ

ದಳು. ವೈದ್ಯರು ಹೇಳಿದರು, 'ಅದು ಬಹಳ ಸುಲಭ ಅಮ್ಮ. ಸಂಜೆ ಹೊತ್ತು ಎರಡು ಚಪಾತಿ, ಒಂದು ಬಾಳೆ ಹಣ್ಣು ಮತ್ತು ಒಂದು ಲೋಟ ಹಾಲು ಸೇವಿಸಲಿ ಸಾಕು.' 'ಸರಿ', ಎಂದು ಆ ದಂಪತಿಗಳು ಹೊರಟು ಹೋದರು. ಐದು ನಿಮಿಷಗಳ ಬಳಿಕ ಮರಳಿದ ಆ ಭೂಪತಿ ವೈದ್ಯರನ್ನು ಮತ್ತೆ ಕೇಳಿದ, 'ನೀವು ಹೇಳಿದ್ದು ತಿಳಿಯಿತು, ಡಾಕ್ಟ್ರೇ. ಆದರೆ ಆ ಚಪಾತಿ ಬಾಳೆ ಹಣ್ಣು ಮತ್ತು ಹಾಲನ್ನು ಸಂಜೆಯ ಮಾಮೂಲಿ ಊಟಕ್ಕಿಂತ ಮೊದಲು ಸೇವಿಸಬೇಕೇ, ಆ ಬಳಿಕವೇ?' ಈ ಗಿರಾಕಿಯ ಮಾತು ಕೇಳಿದ ವೈದ್ಯರು ಅವಾಕ್ಕಾದರು!

೩. ಇಡ್ಲಿ ತಿನ್ನುವ ಸ್ಪರ್ಧೆಯಲ್ಲಿ ಒಬ್ಬಾತ ೫೦ ಇಡ್ಲಿಗಳನ್ನು ನಿರ್ನಾಮ ಮಾಡಿ, ಇನ್ನೂ ಮುಂದುವರಿಸುವವನಿದ್ದ. ಆಗ ಹೊರಗೊಬ್ಬ ಬಾಲಕ ಬರುತ್ತಿದ್ದುದು ಕಾಣಿಸಿತು. ಸ್ಪರ್ಧಿ ಬಾಗಿಲಲ್ಲಿದ್ದವರಿಗೆ ಹೇಳಿದ, "ಆತನನ್ನು ಒಳಗೆ ಬಿಡಬೇಡಿ." ಆಗ ಅಲ್ಲಿದ್ದವರು ಕೇಳಿದರು, 'ಯಾಕೆ? ಆತ ಕೂಡ ನಿಮ್ಮ ಸಾಧನೆಯನ್ನು ಕಂಡು ಸ್ಫೂರ್ತಿ ಪಡೆಯಲಿ.' ಆಗ ಸ್ಪರ್ಧಿಯು ಉತ್ತರವಿದು, 'ಆ ಪೋರ ನನ್ನ ಪುತ್ರ. ನಾನು ತಿಂದ ಇಡ್ಲಿಗಳ ಲೆಕ್ಕ ನನ್ನ ಮಡದಿಗೆ ತಲಪಿದರೆ ನನ್ನ ಈ ರಾತ್ರಿಯ ಊಟಕ್ಕೆ ಖೋತಾ ಖಂಡಿತ!'

'ಪ್ರತಿಯೊಬ್ಬ ಮನಿಶ್ಯಾಗ ನೂರು ವರ್ಷದಾಗ ಇಂತಿಷ್ಟು ತಿನಬಹುದು ಅಂತ ಕೋಟಾ ಗೊತ್ತುಮಾಡಿರತಾದ. ನೂರು ವರ್ಷದಾಗ ತಿನ್ನಬೇಕಾದ್ದನ್ನ ಐವತ್ತೇ ವರ್ಷದಾಗ ತಿಂದುಬಿಟ್ಟರ, ನಿನ್ನ ಕೋಟಾ ಮುಗೀತು. ಆಗ ಮ್ಯಾಲ ಬಾ ಅಂತ ಕರೀತಾನ ದೇವರು.'

ದ. ರಾ. ಬೇಂದ್ರೆ

ಬದುಕುವುದಕ್ಕಾಗಿ ತಿನ್ನಬೇಕೇ ಹೊರತು, ತಿನ್ನುವುದಕ್ಕಾಗಿಯೇ ಬದುಕಬಾರದು.

ಸಿಸಿರೋ

ಪುಸ್ತಕ ಪರಿಚಯ

ಅಂತರಿಕ್ಷದಲ್ಲಿ ಮಾನವ (ಜನಪ್ರಿಯ ವೈಜ್ಞಾನಿಕ ಕೃತಿ)—ಮೂಲ ಲೇಖಕರು: ಪಿ. ರಾಧಾಕೃಷ್ಣನ್; ಅನುವಾದ: ಕೆ. ಎಲ್. ಗೋಪಾಲಕೃಷ್ಣ ರಾವ್; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧; ಮೊದಲ ಮುದ್ರಣ ೧೯೯೬; ಪುಟಗಳು: ೪+೯೬; ಬೆಲೆ: ೩೫ ರೂ.

"ಮಾನವ ತನ್ನ ಪುರೋಗಮನ ಪಥದಲ್ಲಿ ಅನೇಕ ಸಂಕೀರ್ಣ ವೈವಿಧ್ಯಮಯ ಕ್ಷೇತ್ರಗಳಲ್ಲಿ ಬೆರಗುಗೊಳಿಸುವಂಥ ಯಶಸ್ಸುಗಳನ್ನು ಸಾಧಿಸಿದ್ದಾನೆ. ಇವುಗಳಲ್ಲೆಲ್ಲಾ ಅಂತರಿಕ್ಷಕಲೆ ಅಗ್ರಸ್ಥಾನದಲ್ಲಿ ನಿಂತಿದೆ." ಲೇಖಕರ ಈ ಪ್ರಾಸ್ತಾವಿಕ ಮಾತುಗಳು ಇಂದು ಅತಿ ಪ್ರಸ್ತುತವಾಗಿವೆ. ಅಂತರಿಕ್ಷ ಯಂತ್ರಕಲೆಯ ಬಗ್ಗೆ ಆಂಗ್ಲ ಭಾಷೆಯಲ್ಲಿ ಸಾಕಷ್ಟು ಗ್ರಂಥಗಳೂ, ಲೇಖನಗಳೂ ಲಭ್ಯವಿದೆ. ಈ ಕ್ಷೇತ್ರಕ್ಕೆ ವಿದೇಶೀಯರ ಕೊಡುಗೆ ವಿಶೇಷವಾಗಿದೆ. ಭಾರತೀಯ ಲೇಖಕರೂ ಸಾಕಷ್ಟು ಕಾಣಿಕೆಯನ್ನು ಈ ದಿಸೆಯಲ್ಲಿ ನೀಡಿದ್ದಾರೆ. ಪ್ರಸಕ್ತ ಕೃತಿಯು ಭಾರತಿಯ ವಿಜ್ಞಾನಿ ಡಾ|| ಪಿ. ರಾಧಾಕೃಷ್ಣನ್ ಅವರ ಇಂಗ್ಲಿಷ್ ಕೃತಿಯ ಕನ್ನಡ ಅನುವಾದ.

ಈಚೀಚೆಗೆ ದಿನದಿನವೂ ಹೊಸ ಹೊಸ ಸಂಗತಿಗಳ ಆವಿಷ್ಕಾರ ಆಗುತ್ತಿದೆ. ಕೇವಲ ಕೆಲವು ವರ್ಷಗಳ ಹಿಂದೆ ಯಾವುದನ್ನು ಸತ್ಯವೆಂದು ನಂಬಿದ್ದೆವೋ ಅಂತಹವುಗಳಲ್ಲಿ ಅನೇಕ ಅಂಶಗಳು ಮಿಥ್ಯೆ ಎಂಬ ಅರಿವು ಈಗ ಆಗತೊಡಗಿದೆ. ನಮ್ಮ ನಂಬಿಕೆಗಳನ್ನು, ಭಾವನೆಗಳನ್ನು ನೂತನ ಆವಿಷ್ಕಾರಗಳ ಬೆಳಕಿನಲ್ಲಿ ನಾವು ಮಾರ್ಪಡಿಸಿಕೊಳ್ಳಬೇಕಾಗಿದೆ. ಇದೇ ವೈಜ್ಞಾನಿಕ ಮನೋಭಾವ. ಪ್ರಸ್ತುತ ಪರಿಶೀಲನೆಗೆ ಒಳಪಟ್ಟಿರುವ ಈ ಕೃತಿ ಈ ದಿಸೆಯಲ್ಲಿ ಜನಸಾಮಾನ್ಯರಿಗೆ ಅತಿ ಹೆಚ್ಚಿನ ನೆರವು ನೀಡುತ್ತದೆ.

ಎಂಟು ಅಧ್ಯಾಯಗಳನ್ನು ಒಳಗೊಂಡಿರುವ ಈ ಕೃತಿಯಲ್ಲಿ ಒಂದೊಂದು ಅಧ್ಯಾಯವೂ ಕುತೂಹಲವನ್ನು ಕೆರಳಿಸಿ ಓದಿಸಿಕೊಂಡು ಹೋಗುತ್ತದೆ. ಒಂದು ವಸ್ತುವನ್ನು ಅಂತರಿಕ್ಷ ಕಕ್ಷೆಯಲ್ಲಿ ಹೇಗೆ ನೆಲೆಗೊಳಿಸಲಾಗುತ್ತದೆ ಎಂಬಂತಹ ಸಂಕೀರ್ಣ ವಿಷಯಗಳನ್ನು ಸಹ (ಪುಟ ೫೦) ಅತಿ ಸರಳವಾಗಿ, ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ. ಅಂತರಿಕ್ಷದಲ್ಲಿ ವಸ್ತುಗಳನ್ನು ಇರಿಸಲು ಧಾರಕಗಳೇ ಬೇಕಾಗಿಲ್ಲ, ಧಾರಕಗಳಿಲ್ಲದೇ ಆ ವಸ್ತುಗಳನ್ನು ಕರಗಿಸಬಹುದು, ರೂಪುಗೊಳಿಸಬಹುದು, ಘನೀಕರಿಸಬಹುದು! ಜನಸಾಮಾನ್ಯರಿಗೆ ಇದನ್ನು ಊಹಿಸುವುದೂ ಕಷ್ಟ. ಆದರೆ ಇದು ಸತ್ಯ! ಇಂತಹ ಹಲವು ವಿಸ್ಮಯಕಾರಿ ಅಂಶಗಳನ್ನು ಲೇಖಕರು ಅಲ್ಲಲ್ಲಿ ಉದಾಹರಿಸಿದ್ದಾರೆ.

ಮೊದಮೊದಲು ಅಂತರಿಕ್ಷ ಚಟುವಟಿಕೆಗಳು ಕೇವಲ ಬೃಹತ್ ರಾಷ್ಟ್ರಗಳಿಗೆ ಸೀಮಿತವಾಗಿದ್ದವು. ಆದರೆ ಇಂದು ಅಭಿವೃದ್ಧಿಶೀಲ ರಾಷ್ಟ್ರಗಳ ಬೆಳವಣಿಗೆಗೂ ಇವು ಅಗತ್ಯವಾಗಿವೆ. ಆಗಸದಲ್ಲಿನ ಪ್ರಯೋಗ ಶಾಲೆಗಳಲ್ಲಿ ಯಾವ ಬಗೆಯ ಅಧ್ಯಯನಗಳು ನಡೆಯುತ್ತವೆ, ಅವು ಮಾನವಕುಲಕ್ಕೆ ಹೇಗೆ ವರಪ್ರಸಾದವಾಗಿವೆ ಎಂಬುದನ್ನು "ಆಗಸದಲ್ಲಿ ಪ್ರಯೋಗ ಶಾಲೆಗಳು" ಎಂಬ ಅಧ್ಯಾಯದಲ್ಲಿ ಬಹುಸಮರ್ಥವಾಗಿ ವಿವರಿಸಲಾಗಿದೆ.

ಈ ಪುಸ್ತಕವು ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರವಾಗಿದ್ದರೂ ಸ್ವತಂತ್ರ ಕೃತಿಯಂತೆಯೇ ಭಾಸವಾಗುತ್ತದೆ. ಭಾಷೆ ಲಲಿತವಾಗಿದೆ. ಆದರೆ ಕೆಲವು ಕಡೆ ವಾಕ್ಯಗಳು ಅರ್ಥಪೂರ್ಣವಾಗಿಲ್ಲ. ಉದಾಹರಣೆ: ಪುಟ ೨೧, ಪಂಕ್ತಿ ೫–೬; ಪುಟ ೩೧, ಮೂರನೆ ಪ್ಯಾರಾದ ಉತ್ತರಾರ್ಧ.

ಈ ಕೃತಿಯ ವಿಷಯ ಸ್ವಲ್ಪ ಕಠಿಣವೇ ಹೌದು. ಓದುಗನಿಗೆ ನೆರವಾಗಲು ಅನೇಕ ಚಿತ್ರಗಳೂ, ನಕ್ಷೆಗಳೂ ಇವೆ. ಕೆಲವು ನಕ್ಷೆಗಳಂತೂ ಅತಿ ಉಪಯುಕ್ತವಾಗಿವೆ. ಉದಾ: ಪುಟ ೧೨, ಯಾವ ನೌಕೆಯಲ್ಲಿ ಎಷ್ಟು ಮೇಲೆ ಹೋಗಲು ಸಾಧ್ಯ. ಪುಟ ೪೮, ಭೂಮಿಯಿಂದ ದೂರ ಹೋದಂತೆ ಗುರುತ್ವಬಲ ದುರ್ಬಲವಾಗುತ್ತದೆ ಮತ್ತು ವಸ್ತುಗಳ ತೂಕ ಕಮ್ಮಿಯಾಗುತ್ತದೆ. ಆದರೆ ಅಸ್ಪಷ್ಟ ಹಾಗೂ ವಿವರಗಳಿಲ್ಲದ ಚಿತ್ರಗಳೂ ಸಾಕಷ್ಟಿವೆ. ಪುಟ ೩೨ರ ಮೇಲು ಭಾಗದ ಚಿತ್ರ, ಪುಟ ೩೩, ೩೮, ಜಗತ್ತಿನ ಪ್ರಪ್ರಥಮ ಕೃತಕ ಉಪಗ್ರಹ, ಪುಟ ೪೦ರಲ್ಲಿ ರಾಕೆಟ್‌ಗಳ ವಿವರ ಸರಿ ಇಲ್ಲ; ಅಸ್ಪಷ್ಟ.

ಪುಸ್ತಕದ ಕೊನೆಯಲ್ಲಿ ಪಾರಿಭಾಷಿಕ ಪದ ವಿವರಣ ಪಟ್ಟಿ ಇದೆ. ಆದರೆ ಇದು ಏನೇನೂ ಸಾಲದು. ಇಲ್ಲಿನ ವಿಷಯವೇನೋ ಅತ್ಯಂತ ಪ್ರಸ್ತುತವಾದುದು; ಎಲ್ಲರೂ ತಿಳಿದುಕೊಳ್ಳಬೇಕಾದುದು. ಆದರೆ ಇದನ್ನು ಓದಿ ಅರ್ಥಮಾಡಿಕೊಂಡು ಆನಂದಿಸಲು, ಮೆಚ್ಚಲು, ಓದುಗನಿಗೆ ಕನಿಷ್ಠ ಪ್ರಮಾಣದಲ್ಲಾದರೂ ವಿಜ್ಞಾನದ ಪರಿಚಯ ಇರಲೇಬೇಕು.

ಪುಸ್ತಕದ ಮುದ್ರಣ, ಮುಖ ಪುಟ ಅಂದವಾಗಿವೆ. ವಿಜ್ಞಾನ ಸಾಹಿತ್ಯಕ್ಕೆ ಉತ್ತಮ ಕೊಡುಗೆ.

* * * * *

ಶರೀರವೋ ರಣರಂಗವೋ? (ಜನಪ್ರಿಯ ಸಚಿತ್ರ ವಿಜ್ಞಾನ ಪುಸ್ತಕ)— ಮೂಲ ಲೇಖಕರು: ಡಾ|| ಬಾಳ ಫೋಂಡ್ಕೆ; ಭಾಷಾಂತರ: ಶ್ರೀ ಕೊಳ್ಳೇಗಾಲ ಶರ್ಮ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–೫೬೦ ೦೦೧; ಮೊದಲ ಮುದ್ರಣ ೧೯೯೬; ಪುಟಗಳು: ೪+೮೦; ಬೆಲೆ: ೨೮ ರೂ.

ದೇಹವೆಂಬುದು ಒಂದು ಭವ್ಯಕೋಟೆ. ಇದನ್ನು ಕಾಯಲು ಶಿಸ್ತಿನ ಸೇನಾಪಡೆಯೇ ಇದೆ. ಮಾನವ ಸೂಕ್ಷ್ಮಾಣು ಸಾಗರದಲ್ಲಿ ಈಜುತ್ತಿದ್ದಾನೆ. ಆದರೆ ನಿಸರ್ಗವು ಅತ್ಯಂತ ಆಧುನಿಕ, ಸುಸಜ್ಜಿತ ಶಸ್ತ್ರಾಸ್ತ್ರಗಳನ್ನು ಹೊಂದಿರುವ ರಾಷ್ಟ್ರವೂ ಅಸೂಯೆಪಡು

ವಂತಹ ರಕ್ಷಣಾ ವ್ಯವಸ್ಥೆಯನ್ನು ಮಾನವ ದೇಹಕ್ಕೆ ವರವಾಗಿ ಇತ್ತಿದೆ. ಈ ವ್ಯವಸ್ಥೆಯಲ್ಲಿರುವ ವಿವಿಧ ಘಟಕಗಳನ್ನು, ಪ್ರತಿ ಘಟಕದ ಕಾರ್ಯ ವಿಧಾನವನ್ನು ಅತಿ ಸಮರ್ಥವಾಗಿ ಇಲ್ಲಿ ವಿವರಿಸಲಾಗಿದೆ. ಶರೀರದೊಳಕ್ಕೆ ನುಸುಳುವ ಹೊಸವಸ್ತು—ಅದು ಸಾವಯುವವೇ ಆಗಿರಲಿ, ನಿರವಯುವವೇ ಆಗಿರಲಿ—ಶರೀರಕ್ಕೆ ಮಿತ್ರನೋ, ಶತ್ರುವೋ ಎಂಬುದನ್ನು ಬಿಳಿರಕ್ತಕಣಗಳು ಹೇಗೆ ಪತ್ತೆಹಚ್ಚಿ ಕಾರ್ಯತತ್ಪರವಾಗುತ್ತವೆ ಎಂಬ ವರ್ಣನೆ ಓದುಗರನ್ನು ಚಕಿತಗೊಳಿಸುತ್ತದೆ. ಏಡ್ಸ್‌ನಂತಹ ವೈರಸ್‌ಗಳಿಂದ ಸಹಾಯಕ ಟಿ ಕೋಶಗಳು ನಾಶವಾಗಿ ಸಪ್ರೆಸಾರ್ ಕೋಶಗಳ ಬಲ ಹೆಚ್ಚಾಗಿ ಇವು ತನಗೇ ತಿಳಿಯದ ಹಾಗೆ ದೇಹಕ್ಕೆ ಬದಲಾಗಿ ವೈರಿಗೇ ಹೇಗೆ ನೆರವು ನೀಡುತ್ತವೆ ಎಂಬ ವಿವರಗಳು ನಮ್ಮನ್ನು ಗಾಬರಿಗೊಳಿಸುತ್ತವೆ. ವೈರಿಗಳು ದೇಹದೊಳಕ್ಕೆ ಸುಲಭವಾಗಿ ನುಗ್ಗದಂತೆ ಹಲವಾರು ಅಡ್ಡಗೋಡೆಗಳನ್ನು ನಿಸರ್ಗ ಸೃಷ್ಟಿಸಿದೆ. ಇಂತಹ ಗಡಿಕಾವಲನ್ನು ಭೇದಿಸಿಕೊಂಡು ವೈರಿ ಮುನ್ನುಗ್ಗಿದಾಗ ಅದಕ್ಕೆ ಎದುರಾಗುವುದು ಪ್ರತಿರೋಧ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿನ ವಿವಿಧಕೋಶಗಳ, ಪ್ರತಿಕಾಯಗಳ ಕಾರ್ಯಗಳನ್ನು ಇಲ್ಲಿ ವಿವರಿಸಲಾಗಿದೆ. ಕೆಲವೊಮ್ಮೆ ದೇಹವು ಪರ್ಯಾಯ ರಕ್ಷಣಾವ್ಯವಸ್ಥೆಯನ್ನು ಬಳಸುವುದುಂಟು. ದೇಹದ ಬತ್ತಳಿಕೆಯಲ್ಲಿ ಹಲವಾರು ಬಾಣಗಳಿವೆ. ಅಗತ್ಯಕ್ಕೆ ಅನುಗುಣವಾಗಿ ಇವುಗಳನ್ನು ಆರಿಸಿಕೊಳ್ಳುವ ಸಾಮರ್ಥ್ಯವೂ ದೇಹಕ್ಕೆ ಇದೆ. ಇಂತಹ ರಕ್ಷಣಾವ್ಯವಸ್ಥೆಯನ್ನು ಮತ್ತಷ್ಟು ಹರಿತಗೊಳಿಸಬೇಕೆಂಬ ವಿಜ್ಞಾನಿಗಳ ಪ್ರಯತ್ನ ಮುಂದುವರೆದಿದೆ. ಆದರೂ ಮಲೇರಿಯಾ, ಕಾಮಾಲೆ, ಕುಷ್ಠ, ನೆಗಡಿ, ಏಡ್ಸ್‌ಗಳಂತಹ ರೋಗಗಳಿಂದ ರಕ್ಷಣೆ ಪಡೆಯಲು ನೆರವಾಗುವ ಲಸಿಕೆಗಳು ಇದುವರೆಗೂ ಲಭ್ಯವಿಲ್ಲ.

ದೇಹದ ರಕ್ಷಣಾವ್ಯವಸ್ಥೆ ಅತಿ ಸಮರ್ಪಕವಾಗಿದ್ದರೂ ಒಮ್ಮೊಮ್ಮೆ ಅತಿ ಸಂವೇದನೆ (ಅಲರ್ಜಿ)ಯಿಂದ ನರಳುವುದೂ ಉಂಟು. ಇದಕ್ಕೆ ಕಾರಣಗಳನ್ನು ಸಹ ಇಂದಿನ ವಿಜ್ಞಾನಿಗಳು ಕಂಡುಹಿಡಿದು ಇದರ ಉಪಶಮನದ ವಿಧಾನವನ್ನು ಸೂಚಿಸಿದ್ದಾರೆ. ಕ್ಯಾನ್ಸರ್, ಏಡ್ಸ್ ಮೊದಲಾದವು ಸ್ವಪ್ರತಿರೋಧ ಖಾಯಿಲೆಗಳು. ಇಂತಹ ಮಾರಕ ರೋಗಗಳನ್ನು ಎದುರಿಸಲು ಜೀವವಿಜ್ಞಾನಿಗಳು ದೇಹದ ವ್ಯವಸ್ಥೆಯನ್ನೇ ಬಳಸಲು ನಡೆಸುತ್ತಿರುವ ಪ್ರಯತ್ನಗಳ ವಿವರಗಳು ರೋಚಕವಾಗಿವೆ.

ಕಳೆದ ಕೆಲವು ದಶಕಗಳಲ್ಲಿ ವಿಜ್ಞಾನಿಗಳು ಮಾನವ ದೇಹದ ಅದ್ಭುತ ಕಾರ್ಯವೈಖರಿಯ ಬಗ್ಗೆ ಸಾಕಷ್ಟು ತಿಳಿದಿದ್ದಾರೆ. ಆದರೂ ತಿಳಿಯಬೇಕಾಗಿರುವುದು, ಇನ್ನೂ ಕತ್ತಲೆಯ ಮರೆಯಲ್ಲಿಯೇ ಇರುವುದು ಬಹಳಷ್ಟಿದೆ ಎಂಬುದನ್ನು ಅವರು ಅರಿತಿದ್ದಾರೆ. ಈ ಬಗ್ಗೆ ಸತತ ಪ್ರಯತ್ನ ನಡೆಸಿಯೇ ಇದ್ದಾರೆ. ಇದೊಂದು ನಿರಂತರ ಸವಾಲು. ಈ ಸವಾಲನ್ನು ಸ್ವೀಕರಿಸಿ ಸಮರ್ಥವಾಗಿ ಎದುರಿಸಿರುವ ಹಾಗೂ ಎದುರಿಸುತ್ತಿರುವ ವಿವರಗಳು ರೋಮಾಂಚನ ಉಂಟುಮಾಡುತ್ತವೆ. ಪ್ರಸಕ್ತ ಪುಸ್ತಕವು ಈ ಕಾರ್ಯವನ್ನು

ತನ್ನದೇ ಆದ ವಿನೂತನ ಶೈಲಿಯಲ್ಲಿ ಮಾಡಿ ಕೊಟ್ಟಿದೆ.

ದೇಹದ ಅಂತರಿಕ ರಕ್ಷಣಾ ವ್ಯವಸ್ಥೆ, ಅದರ ಸಂಘಟನೆ, ಅದರ ವೈವಿಧ್ಯ, ಅಲ್ಲಿನ ಶಸ್ತ್ರಾಸ್ತ್ರಗಳ ನಿರ್ದಿಷ್ಟತೆ, ಬರಲಿರುವ ವಿವಿಧ ಬಗೆಗಳ ಅಪಾಯಗಳನ್ನು ಮುಖಾಮುಖಿ ಎದುರಿಸಲು ದಿನ ಪೂರ್ತಿ ಕಾವಲಿರುವ ಕ್ರಮ, ಹೆಚ್ಚಿನ ಸಂದರ್ಭಗಳಲ್ಲಿ ತಾನೇ ಗೆಲ್ಲುವ ವಿಶಿಷ್ಟ ವಿಧಾನ ಇವುಗಳನ್ನು ಆಧುನಿಕ, ಪರಿಪೂರ್ಣ ಹಾಗೂ ಸಂಕೀರ್ಣ ರಣರಂಗಕ್ಕೆ ಹೋಲಿಸಿ ರಚಿತವಾಗಿರುವ ಈ ಅನುವಾದಿತ ಕೃತಿ ಕನ್ನಡ ವಿಜ್ಞಾನ ಸಾಹಿತ್ಯರಂಗಕ್ಕೆ ಒಂದು ವಿನೂತನ ಕೊಡುಗೆ. ದೇಹದ ರಕ್ಷಣಾ ವ್ಯವಸ್ಥೆಯ ಒಂದೊಂದು ಭಾಗವನ್ನು ರಣರಂಗದ ಒಂದೊಂದು ನಿರ್ದಿಷ್ಟ ವಿಭಾಗಕ್ಕೆ ಹೋಲಿಸಿ ರುವ ರೀತಿ ಅಪೂರ್ವವಾಗಿದೆ. ಆದರೆ ವಾಸ್ತವ ರಣರಂಗದ ವಿವಿಧ ಭಾಗಗಳ, ಅವುಗಳ ನಿರ್ದಿಷ್ಟ ಕಾರ್ಯವಿಧಾನಗಳ ಸ್ಪಷ್ಟ ಅರಿವು ಇಲ್ಲದವರಿಗೆ ಈ ಕೃತಿಯನ್ನು ಓದಿ ಮೆಚ್ಚುವುದು ತುಸು ಕಷ್ಟವೇ ಸರಿ. ಏನೇ ಆದರೂ ವಿಜ್ಞಾನ ಸಂಶೋಧನೆಯಿಂದ ವಿಜ್ಞಾನ ಸಂವಹನ ಕ್ಷೇತ್ರಕ್ಕೆ "ಹಾರಿದ" ಲೇಖಕರು ತಾವು ಕೈಗೆತ್ತಿಕೊಂಡ ಕಾರ್ಯ ವನ್ನು ಅತಿ ಸಮರ್ಪಕವಾಗಿ, ಸಮರ್ಥ ವಾಗಿ ನೆರವೇರಿಸಿದ್ದಾರೆ. ಭಾಷಾಂತರ ಸೊಗಸಾಗಿದೆ.

* * * * *

ವಿಶ್ವದಲ್ಲಿ ಜೀವಾಂಕುರ ಎಂದು? ಎಂತು? (ಜನಪ್ರಿಯ ವಿಜ್ಞಾನ ಪುಸ್ತಕ)—ಮೂಲ ಲೇಖಕರು: ಎಂ. ಎಸ್. ಚಡ್ಡಾ ಮತ್ತು ಬಾಳ ಫೋಂಡ್ಕೆ; ಅನುವಾದ: ಡಾ|| ಎನ್. ಎಸ್. ಲೀಲಾ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್; ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧; ಮೊದಲ ಮುದ್ರಣ ೧೯೬೬; ಪುಟ: ೪+೧೧೨; ಬೆಲೆ: ೪೦ ರೂ.

ಬ್ರಹ್ಮಾಂಡದಲ್ಲಿ ತನ್ನದೇ ಆದ ಗ್ರಹ ವ್ಯವಸ್ಥೆಯನ್ನು ಹೊಂದಿರುವ ನಕ್ಷತ್ರಗಳ ಸಂಖ್ಯೆ ಸಾಕಷ್ಟಿದ್ದರೂ ಮಾನವನಿಗೆ ಇದು ವರೆಗೆ ತಿಳಿದಿರುವಂತೆ ಜೀವಕ್ಕೆ ಆಧಾರ ನೀಡಿರುವುದು ಭೂಗ್ರಹ ಮಾತ್ರ. ಇಲ್ಲಿ ಜೀವಾಂಕುರ ಏಕೆ ಆಯಿತು? ಹೇಗೆ ಆಯಿತು? ಎಂಬ ಪ್ರಶ್ನೆ ಶತಶತಮಾನ ಗಳಿಂದ ಮಾನವನ ತಲೆ ತಿನ್ನುತ್ತಾ ಬಂದಿದೆ. ಈ ಬಗ್ಗೆ ಬಹುಶಃ ಎಲ್ಲಾ ದೇಶಗಳಲ್ಲೂ ಹಲವಾರು ಪುರಾಣ ಕಥೆಗಳು ಹುಟ್ಟಿ ಕೊಂಡಿವೆ. ಅನೇಕ ದಾರ್ಶನಿಕರು, ವೇದಾಂತಿ ಗಳು, ವಿಜ್ಞಾನಿಗಳು ವಿವಿಧ ಬಗೆಯ ತರ್ಕ ಗಳನ್ನು, ಊಹೆಗಳನ್ನು, ಸಿದ್ಧಾಂತಗಳನ್ನು ಮಂಡಿಸುತ್ತಲೇ ಬಂದಿದ್ದಾರೆ. ನಿರಂತರ ಪರಿಶೋಧನೆ ಹಾಗೂ ಕ್ರಮಬದ್ಧ ಪ್ರಯೋಗಗಳು ಈ ನಿಗೂಢತೆಯ ತೆರೆ ಯನ್ನು ಸ್ವಲ್ಪ ಸ್ವಲ್ಪವಾಗಿ ಸರಿಸಲು ನೆರವಾಗಿವೆ. ಆದರೂ ಇನ್ನೂ ಇದೊಂದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಪ್ರಸಕ್ತ ಪುಸ್ತಕದಲ್ಲಿ ಈ ಪ್ರಶ್ನೆಯ ವಿವಿಧ

ಮುಖಗಳನ್ನು, ಮಜಲುಗಳನ್ನು, ಪ್ರಯೋಗ ಫಲಿತಾಂಶಗಳನ್ನು ಅತ್ಯಂತ ಸಮರ್ಥವಾಗಿ, ಕುತೂಹಲ ಕೆರಳಿಸುವ ರೀತಿಯಲ್ಲಿ ವಿವರಿಸುವ ಪ್ರಯತ್ನ ನಡೆದಿದೆ.

ಒಂಬತ್ತು ಅಧ್ಯಾಯಗಳನ್ನು ಒಳಗೊಂಡಿರುವ ಈ ಪುಸ್ತಕದಲ್ಲಿ, ನಮ್ಮ ಸುತ್ತ ಮುತ್ತ ಇರುವ ವಸ್ತುಗಳನ್ನು ಜೀವಿ ಹಾಗೂ ನಿರ್ಜೀವಿ ಎಂದು ಸಾಮಾನ್ಯವಾಗಿ ವಿಂಗಡಿಸಲು ಸಾಧ್ಯವಾದರೂ ವೈರಸ್‌ಗಳ ಬಗೆಗೆ ಈ ರೀತಿಯ ನಿರ್ದಿಷ್ಟ ನಿಲುವು ತೆಗೆದುಕೊಳ್ಳುವುದು ಅಸಾಧ್ಯ ಎಂಬುದನ್ನು ಬಲು ಸೊಗಸಾಗಿ ವಿವರಿಸಲಾಗಿದೆ. ಜಡದಿಂದ ಜೀವ ಎಂಬ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಸಿದ್ಧ ವಿಜ್ಞಾನಿಗಳ ಅಭಿಪ್ರಾಯಗಳು ಇಲ್ಲಿವೆ. ಅಂತೆಯೇ ವಿಶ್ವ ಹೇಗೆ ರೂಪುಗೊಂಡಿತು? ಅದರ ವಿಶಾಲತೆ ಎಷ್ಟು? ಭೂಗ್ರಹದ ವಯಸ್ಸು ಎಷ್ಟು? ಮೊದಲಾದ ಪ್ರಶ್ನೆಗಳಿಗೆ ವಿಜ್ಞಾನಿಗಳು ನೀಡಿರುವ, ನೀಡುವ ಉತ್ತರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಜೀವಜಗತ್ತು ವೈವಿಧ್ಯಮಯವಾಗಿದೆ, ಸೊಗಸು–ಸೋಜಿಗಗಳಿಂದ ತುಂಬಿದೆ. ಆದರೆ ಇವೆಲ್ಲವೂ ಜೀವಕೋಶಗಳಿಂದಲೇ ಆಗಿವೆ. ಜೀವಸೃಷ್ಟಿಯ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ಅವುಗಳಲ್ಲಿ ಕೆಲವು ಪ್ರಾಯೋಗಿಕವಾಗಿಯೂ ಸಮರ್ಥನೆ ನೀಡುವಂತಹವು. ಆದರೂ ನಿಶ್ಚಿತವಾದ, ಒಮ್ಮತದ ವಿವರಣೆ ಇದುವರೆಗೂ ಅಂಗೀಕೃತವಾಗಿಲ್ಲ. ಈ ದಿಸೆಯಲ್ಲಿ ಮತ್ತಷ್ಟು ವೈಜ್ಞಾನಿಕ ಅಧ್ಯಯನ ಮತ್ತು ಪರಿಶೀಲನೆ ಅವಶ್ಯ ಎಂಬುದನ್ನು ಇಲ್ಲಿ ಮನೋಜ್ಞವಾಗಿ ವಿವರಿಸಲಾಗಿದೆ.

ಜೀವವಿಕಾಸದ ಇತಿಹಾಸವನ್ನು ಬೆದಕುವ ಹಲವಾರು ಅಮೂಲ್ಯವಾದ ಹಾಗೂ ಅಪೂರ್ವವಾದ ಅಧ್ಯಯನಗಳು ನಡೆದಿವೆ. ಇವು, ಭೂಮಿಯ ಮೇಲೆ ಕಾಣಿಸಿಕೊಂಡ ಮೊದಲ ಜೀವಿ ಆಮ್ಲಜನಕರಹಿತ ವಾತಾವರಣದಲ್ಲಿ ಜೀವಿಸಬಲ್ಲ ಏಕಕೋಶೀಯ ಬ್ಯಾಕ್ಟೀರಿಯಾಗಳಾದ ಪ್ರೊಕಾರ್ಯೋಟುಗಳೆಂದು ತಿಳಿಸುತ್ತವೆ.

ಬ್ರಹ್ಮಾಂಡದಲ್ಲಿ ಭೂಗ್ರಹದಲ್ಲಿ ಮಾತ್ರ ಜೀವಿಗಳು ಇವೆಯೆ? ಇದ್ದರೆ ಅವು ಹೇಗೆ ಇರಬಹುದು? ಅನ್ಯಗ್ರಹ ಜೀವಿಗಳನ್ನು ಸಂಪರ್ಕಿಸುವುದು ಹೇಗೆ? ಇಂತಹ ಅನೇಕ ಪ್ರಶ್ನೆಗಳು ಮಾನವನನ್ನು ಬಹುಕಾಲದಿಂದ ಕಾಡುತ್ತಲೇ ಇವೆ. ಖಗೋಳ ವಿಜ್ಞಾನಿಗಳು ಈ ಸವಾಲನ್ನು ಕೈಗೆತ್ತಿಕೊಂಡು ನಡೆಸಿರುವ, ನಡೆಸುತ್ತಿರುವ ಕೆಲವು ಪ್ರಯೋಗಗಳ ವಿವರಗಳು ನಮ್ಮನ್ನು ರೋಮಾಂಚನಗೊಳಿಸುತ್ತವೆ.


ಅತಿ ಗಹನವಾದ ವಿಷಯವನ್ನು ಲೇಖಕರು ಅತಿ ಸರಳವಾಗಿ, ಸಮರ್ಥವಾಗಿ ಈ ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಇಂಗ್ಲಿಷ್ ಮೂಲದ ಈ ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರಿಸಿರುವ ಡಾ॥ ಎನ್. ಎಸ್. ಲೀಲಾ ಅವರ ಕಾರ್ಯ ಅಭಿನಂದನಾರ್ಹವಾಗಿದೆ. ಇಲ್ಲಿನ ಭಾಷೆ ಸರಳವಾಗಿದೆ; ಸುಲಲಿತವಾಗಿದೆ; ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ. ವಿಷಯ ಸ್ವಲ್ಪ ಕ್ಲಿಷ್ಟವಾದುದರಿಂದ ಇದನ್ನು ಓದಿ,

ಅರಗಿಸಿಕೊಂಡು ಆನಂದಿಸಲು ಓದುಗನಿಗೆ ವಿಜ್ಞಾನದ ಪೂರ್ವಜ್ಞಾನ ಅಗತ್ಯವಾಗಿ ಬೇಕು.

ಪುಸ್ತಕದಲ್ಲಿ ಚಿತ್ರಗಳೂ ಸಾಕಷ್ಟಿವೆ. ಆದರೆ ಅವುಗಳಲ್ಲಿ ಹೆಚ್ಚಿನವುಗಳಿಗೆ ಕೊಟ್ಟಿರುವ ವಿವರಣೆ ಏನೇನೂ ಸಾಲದು. ಓದುಗ ತಾನೇ ಊಹಿಸಿಕೊಳ್ಳಬೇಕು. ಮುದ್ರಣದ ದೋಷಗಳೂ ಅಲ್ಲಲ್ಲಿ ಉಳಿದಿವೆ. ಉದಾ: ಪುಟ ೪೧ರಲ್ಲಿ ರಾಸಾಯನಿಕ ಸಂಯುಕ್ತಗಳ ಸೂತ್ರಗಳು ಸರಿಯಾಗಿ ಮುದ್ರಿತವಾಗಿಲ್ಲ. ಪುಟ ೫೭ರಲ್ಲಿ—"ಸುಮಾರು ೩° ಶೆಲ್ಸಿಸ್ ಎಂದರೆ ೨೭೦° ಗಳಷ್ಟು ಉಷ್ಣತೆ" ಎಂಬುದಾಗಿ ಮುದ್ರಿತವಾಗಿದೆ. (—೨೭೦°ಸಿ ಆಗಬೇಕು).

ಪುಸ್ತಕದ ಕೊನೆಯಲ್ಲಿರುವ 'ಶಬ್ದಕೋಶ' ಇನ್ನೂ ಸ್ವಲ್ಪ ವಿಸ್ತೃತವಾಗಿ ಇರಬೇಕಿತ್ತು; ಇನ್ನೂ ಕೆಲವು ಪಾರಿಭಾಷಿಕ ಶಬ್ದಗಳನ್ನು ಒಳಗೊಂಡಿರಬೇಕಿತ್ತು.

ಸಿ. ಜಿ. ವೆಂಕಟರಮಣಶೆಟ್ಟಿ
೩೮೩, ೧೪ನೇ ಮುಖ್ಯ ರಸ್ತೆ,
ಸರಸ್ವತಿಪುರಂ
ಮೈಸೂರು-೫೭೦ ೦೦೯



ಬಲಶಾಲಿಯಾದವನಿಗೆ ಯಾವ ಕೆಲಸವೂ ಕಷ್ಟ ಅಲ್ಲ. ವಿದ್ಯಾವಂತನಿಗೆ ಯಾವ ದೇಶವೂ ಪರದೇಶ ಅಲ್ಲ. ಒಳ್ಳೆಯ ಮಾತುಗಾರನಿಗೆ ಶತ್ರುಗಳೇ ಇಲ್ಲ.

—ಹಿತೋಪದೇಶ

ಜ್ಞಾನದ ಗುರಿ ಜ್ಞಾನವೇ ಹೊರತು ಹಣವಾಗಲಿ, ಕೀರ್ತಿಯಾಗಲಿ ಅಲ್ಲ.

—ನ್ಯೂಮನ್

Reg. No. KRNN.29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya, Printed by M. Krishnappa
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone : 512485